ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಮಾರ್ಚ್ 2021

ಬೆಲೆ ರೂ. 5/-



ಶ್ರೀನಿವಾಸಮಂಗಾಪುರಂ

ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ

2021 ಮಾರ್ಚ್ 02 ರಿಂದ 10 ರ ವರೆಗೆ

## ತಿರುಮಲೆ ತಿರುಪತಿ ದೇವಸ್ಥಾನಗಳು

# ರಥಸಪ್ತಮಿ (19-02-2021) ಪರ್ವದಿನದಂದು ತಿರುಮಲೆ ಸ್ವಾಮಿಯವರಿಗೆ ನಡೆದ ಸಪ್ತವಾಹನ ಸೇವೆಗಳು

















## ಭಗವದ್ಗೀತೆ

**ಯಾವದೇತಾನ್ನಿರೀಕ್ಷೇಽಹಂ ಯೋದ್ಧುಕಾಮಾನವಸ್ಥಿತಾನ್।**
**ಕೈರ್ಮಯಾ ಸಹಯೋದವ್ಯಂ ಅಸ್ಮಿನ್ ರಣಸಮುದ್ಯಮೇ॥**

(ಅಧ್ಯಾಯ - 1, ಶ್ಲೋಕ - 22)

## ತಾತ್ಪರ್ಯ

ಕಾದಬೇಕೆಂದು ನಿಂತಿರುವವರನ್ನು, ಈ ಯುದ್ಧದಲ್ಲಿ ನಾನು ಯಾರೊಡನೆ ಕಾದಬೇಕಾಗಿದೆ ಎಂಬುದನ್ನು ಒಮ್ಮೆ ನೋಡುತ್ತೇನೆ.



ಧನ್ಯನಾದೆನು ಇಂದೀ ಪುಣ್ಯಗಿರಿಯ ತಾ
ರುಣ್ಯ ಭಕುತಿಯಲ್ಲಿಂದ ದೈನ್ಯಾಮನದಲ್ಲಿ ಕಂಡೆ
ಅನ್ಯಾಯಗೊಳಿಸುವ ಮನ್ಯುಪಾಪವೆಂಬಾ -
ರಣ್ಯಕ್ಕೆ ಹವ್ಯವಾಹನ್ನ ತೋರುತಿದೆ
ಗಣ್ಯವೆ ಇದರ ಲಾವಣ್ಯ ವರೇಣ್ಯವ
ಬಣ್ಣಿಸಲರಿದು ಹಿರಣ್ಯ ಗರ್ಭಗಾದರು
ಕನ್ಯಾಧಾರುಣಿ ಹಿರಣ್ಯ ತುಲಾಭಾರಾ
ಅನ್ನದಾನಾದಿಗಳು ಅನ್ಯೋನ್ನ ಮಾಡಲು
ಅನ್ಯಥಾ ಈ ಯಾತ್ರಿ ಪುಣ್ಯಫಲಕ್ಕೆ ಸಾ -
ಮಾನ್ಯವೆನಿಸುವಾದು ಸುಜನರು ಲಾಲಿಪದು
ಕನ್ಯಾಪತಿಯು ಕಾರುಣ್ಯ ಮೂರುತಿ ಪಾಂಚ -
ಜನ್ಯ ಪಾಣಿ ನಮ್ಮ ವಿಜಯವಿಠ್ಠಲನು ಶಾ
ರಣ್ಯರಿಗೆ ಅನುಗುಣ್ಯಾ ನಡಿಸುವಾ

- ಶ್ರೀ ವಿಜಯದಾಸರು

(ಆರನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಧೃತಭುವನಾ ದಯೇ ತ್ರಿವಿಧಗತ್ಯನುಕೂಲತರಾ ವೃಷಗಿರಿನಾಥಪಾದಪರಿರಂಭವತೀ ಭವತೀ।**

**ಅವಿದಿತವೈಭವಾಽಪಿ ಸುರಸಿಂಧುರಿವಾತನುತೇ ಸಕೃದವಗಾಹಮಾನಮಪತಾಪಮಪಾಪಮಪಿ ॥೫೪॥**

ಹಿಂದಿನ ಪದ್ಯದಲ್ಲಿ ಪ್ರಪನ್ನನಾದವನು ಪಾರಮಾರ್ಥಿಕ ಶಾಸ್ತ್ರವನ್ನೇ ಅವಲಂಬಿಸಬೇಕೆಂಬುದನ್ನು ನಿರೂಪಿಸಿ, ಈ ಪದ್ಯದಲ್ಲಿ ಭಗವದ್ದಯೆಯನ್ನು ಗಂಗಾನದಿಗೆ ಹೋಲಿಸಿ ವರ್ಣಿಸಿರುತ್ತಾರೆ.

ಗಂಗಾನದಿಯು ಮೂರು ಲೋಕಗಳಲ್ಲಿಯೂ ಪ್ರವಹಿಸಿ ಸಮೃದ್ಧವಾದ ನೀರುಳ್ಳದ್ದಾಗಿ ಸಸ್ಯಗಳನ್ನೂ ಪ್ರಾಣಿವರ್ಗವನ್ನೂ ಅನೇಕ ವಿಧಗಳಿಂದ ಸಂತೋಷಪಡಿಸುತ್ತದೆ. ಮೂರು ವಿಧವಾದ ವೇಗಗಳಿಂದ ಹರಿದು ಸ್ವರ್ಗ ಮರ್ತ್ಯ ಪಾತಾಳಲೋಕಗಳಲ್ಲಿಯೂ ಶ್ರೇಷ್ಠವಾದ ಗತಿಯನ್ನು ಉಂಟುಮಾಡುವುದು.ವೃಷಗಿರಿನಾಥನಾದ ಶ್ರೀನಿವಾಸನೆಂಬ ಪರಮಾತ್ಮನ ಪಾದಗಳಿಂದ ಉದ್ಭೂತ ವಾದುದು. ತನ್ನಲ್ಲಿ ಒಂದು ಸಲವಾದರೂ ಸ್ನಾನಮಾಡಿದವನನ್ನು ಬಾಹ್ಯವಾದ ಮತ್ತು ಆಂತರಿಕವಾದ ತಾಪಗಳನ್ನು ಹೋಗ ಲಾಡಿಸುವುದು. ಇದೇ ಗುಣಗಳು ಭಗವದ್ದಯೆಗೂ ಇರುವುದರಿಂದ ದೇಶಿಕರು ಗಂಗೆಯಂತೆ ನಿರೂಪಿಸಿರುತ್ತಾರೆ. ದಯೆಯೂ ಕೂಡ ಪರಮಾತ್ಮನ ಜಗದ್ರಕ್ಷಣ ಕಾರ್ಯದಲ್ಲಿ ಸಹಕಾರಿಯಾದುದರಿಂದ 'ಧೃತಭುವನ ' ವಾದುದು, ಮೂರು ಲೋಕಗಳಲ್ಲಿಯೂ ಇರುವವರ ಶ್ರೇಷ್ಠಗತಿಗೆ ಅನುಕೂಲವಾದುದು. ವೃಷಾಚಲಾಧೀಶನಾದ ಶ್ರೀನಿವಾಸನ ಪಾದಕಮಲಗಳಲ್ಲಿ ನೆಲೆಸಿರುವುದು - ಅಂದರೆ ಆ ಪುರುಷೋತ್ತಮನ ಪಾದಾರವಿಂದಗಳಲ್ಲಿ ಮಹಾ ವಿಶ್ವಾಸದಿಂದ ಆಶ್ರಯವನ್ನು ಪಡೆದವರಿಗೆ ಅತ್ಯಂತ ಅನು ಕೂಲವಾಗಿರುವಂತಹುದು ಸ್ವಾಭಾವಿಕವಾಗಿಯೇ ಚೇತನೋಜ್ಜೀವನದಲ್ಲಿ ಆಸಕ್ತವಾಗಿರುವುದರಿಂದ ಪಾಪಿಗಳನ್ನೂ, ಪಾಪ ರಹಿತ ವನ್ನೂ, ತಾಪರಹಿತವನ್ನಾಗಿ ಮಾಡುವಂತಹ ವೈಭವವುಳ್ಳದ್ದು. ಅಂತಹ ನಿನ್ನ (ದಯೆಯ) ವೈಭವವನ್ನು ಎಷ್ಟೆಂದು ವರ್ಣಿಸ ಬಹುದು! ಎಂದು ಆಚಾರ್ಯರು ಹೃದಯಂಗಮವಾಗಿ ಚಿತ್ರಿಸಿರುತ್ತಾರೆ.

ಪರಮಾತ್ಮನ ಪಾದಾರವಿಂದಗಳಲ್ಲಿಯೇ ನಿರ್ಭರನಾಗಿರುವವನು ಆತನ ಅವಿಚ್ಛಿನ್ನವಾದ ದಯಾ ರಸಪ್ರವಾಹದಿಂದ ಪ್ಲಾವಿತನಾಗಿ ಉತ್ತಮಗತಿಯನ್ನು ಹೊಂದಿ ಶಾಶ್ವತವೂ, ಅತ್ಯಂತಿಕಸುಖಕರವೂ ಆದ ಉತ್ತಮ ಪುರುಷಾರ್ಥವನ್ನು ಪಡೆಯುವ ನೆಂಬುದು ಇಲ್ಲಿನ ಶಾಸ್ತ್ರಾರ್ಥ.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ ಮಾಘ - ಫಾಲ್ಗುಣ ಮಾಸ ಸಂಚಿಕೆ

ಸಂಪುಟ - 51 | ಮಾರ್ಚ್ 2021 | ಸಂಚಿಕೆ - 10



## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ಕೈಲಾಸವಾಸ ಗೌರೀಶ ಈಶ | -ಡಾ|| ಗುರುರಾಜ ಪೋಶೆಟ್ಟಿಹಳ್ಳಿ | 7 |
| ಅಗಸ್ತ್ಯ ಮಹಾಮುನಿಗಳು | - ಡಾ || ಸಿ. ಎಸ್. ಊರ್ಮಿಳಾ | 10 |
| ಶ್ರೀವಾದಿರಾಜರುಮತ್ತುತೀರ್ಥಪ್ರಬಂಧ | - ಡಾ || ರಾಮಚಂದ್ರ ದಾಸ್ ಸಿ.ಜೆ. | 13 |
| ಶ್ರೀರಾಘವೇಂದ್ರತೀರ್ಥಶ್ರೀಪಾದಂಗಳವರು | - ಡಾ || ಪ್ರದೀಪ್ ಕುಮಾರ್ ಹೆಬ್ರಿ | 15 |
| ಹೋಳಿ ಹಬ್ಬ | - ಶ್ರೀಮತಿ ಕೆ.ವಿ. ಪದ್ಮಾವತಿ | 19 |
| ತ್ರಿಪುರಾಸುರಸಂಹಾರ | - ಡಿ.ಎಸ್. ಬದ್ರಿನಾಥ್ | 21 |
| ಕನಕಗಿರಿಯ ಕನಕಾಚಲಪತಿ ದೇವಾಲಯ | -ಕೆಂಗೇರಿ ಚಕ್ರಪಾಣಿ | 23 |
| ಮೇಲುಕೋಟೆ ಚೆಲುವರಾಯನ ವೈರಮುಡಿ ಉತ್ಸವ | - ಶ್ರೀಮತಿ ಸುಮಾಚಂದ್ರಶೇಖರ್ | 25 |
| ಸಕಲ ಅಭೀಷ್ಟೆ ನೆರವೇರಿಸುವ ಶ್ರೀ ಧೀರೇಂದ್ರ ತೀರ್ಥರು | - ಶ್ರೀಧರ ರಾಯಸಂ | 31 |
| ಸಂಸ್ಕೃತ ಕಲಿಯೋಣ...!! | - ಆಚಾರ್ಯ ಸಮುದ್ರಾಲ ಲಕ್ಷ್ಮಣಯ್ಯ | 32 |
| ಗೀತಾ ಸಂಸ್ಕೃತಿಯಿಂದ ಮುನ್ನಡೆ | -ಡಿ.ಎಸ್. ಭೂಮಿಕ | 33 |
| ಕೊಡ್ಯಡ್ಕ (ಹೊಸನಾಡು) ಅನ್ನಪೂರ್ಣೇಶ್ವರೀ | - ಬಿ.ಆರ್. ಶ್ರೀಕಂಠಯ್ಯ | 35 |
| ಪವಿತ್ರ ನದಿ | - ಶ್ರೀಮತಿ ಸುಮನ ಬದ್ರಿನಾಥ್ | 38 |
| ಭಕ್ತ ಶಿರೋಮಣಿ ಶ್ರೀ ಕನಕದಾಸರ ವೆಂಕಟರಮಣ ಕುರಿತ ಕೀರ್ತನೆಗಳು | - ಡಾ|| ವಿಠಲರಾವ್ ಟಿ. ಗಾಯಕ್ವಾಡ್ | 42 |
| ಆರೋಗ್ಯ ಪ್ರದಾತ ಶ್ರೀ ಸೂರ್ಯ ಭಗವಂತ | -ಶ್ರೀಮತಿ | 46 |
| ನಮೋ ಶನಿದೇವಾ | - ಪ್ರಣವ | 48 |
| ಪುಸ್ತಕಾವಲೋಕನ | - ಬಿ.ಎಸ್.ರಾಮಮೂರ್ತಿ | 50 |
| ನೀತಿ ಕಥೆ - ಯದ್ಭಾವಂ ತದ್ಭವತಿ | -ಶ್ರೀಮತಿ ಸುಧಾಮಧುಸೂದನ್ | 51 |
| ಚಿತ್ರ ಕಥೆ - ಕಿರಾತಾರ್ಜುನೀಯಂ | -ಶ್ರೀಮತಿ | 52 |
| ಕ್ವಿಜ್ | - | 54 |


ಮುಖಚಿತ್ರ - ಉಭಯ ದೇವಿಯರೊಂದಿಗೆ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು, ಶ್ರೀನಿವಾಸಮಂಗಾಪುರಂ

ಹಿಂಬದಿಚಿತ್ರ - ಶ್ರೀ ಕಾಮಾಕ್ಷಿ ಸಮೇತ ಶ್ರೀ ಕಪಿಲೇಶ್ವರ ಸ್ವಾಮಿಯವರು , ಕಪಿಲತೀರ್ಥಂ


**ಗೌರವ ಸಂಪಾದಕರು**
ಡಾ || ಕೆ. ಎಸ್. ಜವಹರ್ ರೆಡ್ಡಿ , ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.



ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.


| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿವಾರ್ಷಿಕಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಶ್ರೀ ಮಹಾಲಕ್ಷ್ಮಿ

ಅತ್ಯಂತ ಪವಿತ್ರವಾದ ಈ ಫಾಲ್ಗುಣ ಮಾಸ ಅನೇಕ ವೈಶಿಷ್ಟ್ಯತೆಗಳನ್ನು ಒಳಗೊಂಡಿದೆ. ಫಲಗಳನ್ನು ನೀಡುವ ಗುಣವನ್ನು ಹೊಂದಿರುವ ಮಾಸವಾದ್ದರಿಂದ ಈ ಮಾಸಕ್ಕೆ ಫಾಲ್ಗುಣ ಮಾಸವೆಂದು ಹೆಸರು ಬಂದಿದೆಯೆಂದು ಅನೇಕ ಪುರಾಣಗಳಲ್ಲಿ ತಿಳಿಸಲಾಗಿದೆ.

ಈ ಮಾಸದ ನಿಯಾಮಕ ಗೋವಿಂದ ಅದಕ್ಕೆ ಗೋವಿಂದನ ಪ್ರೀತಿಗಾಗಿ ಶ್ರೀಲಕ್ಷ್ಮಿಯೊಂದಿಗೆ ನಾರಾಯಣನನ್ನು ಪೂಜಿಸುವಂತಹಾ ವಿಶೇಷವಾದ ಮಾಸ. ಈ ಮಾಸದಲ್ಲಿ ಪಾಡ್ಯಮಿಯಿಂದ ಮೊದಲು ಗೊಂಡು 12 ದಿನಗಳ ಕಾಲ ಸತತವಾಗಿ ಲಕ್ಷ್ಮಿನಾರಾಯಣರಿಗೆ ಪೂಜೆಗಳನ್ನು ಸಲ್ಲಿಸಿದರೆ ಹನ್ನೆರಡೂ ಮಾಸ ಗಳಲ್ಲಿ ಪೂಜೆ ಮಾಡಿದಂತೆ. ಆದ್ದರಿಂದ ಈ ಹನ್ನೆರಡು ದಿನಗಳು ಅತ್ಯಂತ ಪವಿತ್ರ ಎಂದು ನಂಬಲಾಗಿದೆ.

ಈ ಮಾಸದಲ್ಲಿ ಮುಖ್ಯವಾಗಿ ಆಚರಿಸುವಂತಹುದೆಂದರೆ "ಪಯೋವ್ರತ" ಅಥವಾ "ಕ್ಷೀರ ವ್ರತ " ಈ ವ್ರತಾಚರಣೆಯ ಫಲವಾಗಿಯೇ ಆದಿತೀದೇವಿ ವಾಮನನನ್ನು ಪಡೆದಳೆಂದು ಪುರಾಣಗಳು ತಿಳಿಸುತ್ತಿವೆ ಈ ವ್ರತದ ನಿಯಮಾನುಸಾರ ಈ ವ್ರತವನ್ನು ಆಚರಿಸುವವರು ಕೇವಲ ಕ್ಷೀರವನ್ನು ಮಾತ್ರ ಸೇವಿಸಬೇಕು. ಅದೂ ದೇವರಿಗೆ ನೈವೇದ್ಯ ಮಾಡಿದ ಹಾಲನ್ನು ಮಾತ್ರಾ ಸೇವಿಸಬೇಕಾಗುವುದು ಕ್ಷೀರದಲ್ಲಿ ಶ್ರೀಮಹಾಲಕ್ಷ್ಮಿಯೂ ನೆಲೆಸಿರುತ್ತಾಳಾದ್ದರಿಂದ ಈ ವ್ರತ ಎಲ್ಲಿಲ್ಲದ ಶ್ರೇಷ್ಠತೆ ಪಡೆದುಕೊಂಡಿದೆ.

ಹಾಗೆಯೇ ಈ ಮಾಸದಲ್ಲಿ ಅತ್ಯಂತ ಮುಖ್ಯವಾಗಿ ಆಚರಿಸುವಂತಹಾ ಹಬ್ಬವೆಂದರೆ ಹೋಲಿ ಹುಣ್ಣಿಮೆ ಅಂದು ರಾಕ್ಷಸಿಯಾದ ಹೋಲಿಕಳ ದಹನಮಾಡುವುದರ ಮೂಲಕ ನಮ್ಮಲ್ಲಿ ನೆಲೆಗೊಂಡಿರುವ ಕೆಟ್ಟ ಕಾಮನೆಗಳನ್ನು ಸುಡುವಂತಹಾ ಸಾಂಕೇತಿಕ ಆಚರಣೆ ಇದಾಗಿದೆ. ಈ ಆಚರಣೆಗೆ ಕಾಮದಹನ ಎಂದೂ ಕರೆಯುತ್ತಾರೆ.

ಜೊತೆಗೆ ಈ ಮಾಸ ಫಲಗಳನ್ನು ನೀಡುವ ಮಾಸವಾದ್ದರಿಂದ ಅನೇಕ ದಾನಗಳನ್ನು ಮಾಡುತ್ತಾರೆ. ಭೂದಾನ, ಗೋದಾನ, ಪಯೋದಾನ, ತಿಲದಾನ ಹೀಗೆ ಅನೇಕ ದಾನಗಳನ್ನು ಮಾಡಬಹುದಾಗಿದೆ.

ನಂತರ ಬರುವ ಏಕಾದಶಿಯನ್ನು ಅಮಲಕಿ ಏಕಾದಶಿ ಎನ್ನುತ್ತಾರೆ. ಈ ದಿನದಂದು ಅಮಲಕಿ ಅಂದರೆ ನೆಲ್ಲಿಕಾಯಿಯ ಮರವನ್ನು ಪೂಜಿಸಿದರೆ ಲಕ್ಷ್ಮೀದೇವಿ ಪ್ರಸನ್ನಳಾಗಿ ನಮಗೆ ಸಂಪತ್ತನ್ನು ಕರುಣಿಸುತ್ತಾಳೆ ಎಂದು ಪ್ರತೀತಿ. ಶಂಕರಾಚಾರ್ಯರು ಕನಕಧಾರಾಸ್ತೋತ್ರದ ಮೂಲಕ ಲಕ್ಷ್ಮೀ ದೇವಿಯನ್ನು ಸ್ಮರಿಸಿದಾಗ ಒಬ್ಬ ಬಡವಿಯ ಮನೆಯಲ್ಲಿ ಬಂಗಾರದ ನೆಲ್ಲಿ ಕಾಯಿಯ ಮಳೆಯನ್ನೇ ಸುರಿಸಿದ ಕಥೆ ಎಲ್ಲರಿಗೂ ತಿಳಿದದ್ದೇ ಆಗಿದೆ. ಆದ್ದರಿಂದ ಆಮಲಕಿ ವೃಕ್ಷವನ್ನು ಪೂಜಿಸಿ ಶ್ರೀಮಹಾಲಕ್ಷ್ಮೀದೇವಿಯ ಕೃಪೆಗೆ ಪಾತ್ರರಾಗೋಣ

ನಂತರ ಬರುವ ಬಹುಳ ಅಷ್ಟಮಿಯಂದು ಸೀತಾದೇವಿಯ ಜಯಂತಿ ಬರುತ್ತದೆ. ಪುರಾಣದ ಪ್ರಕಾರ ಆ ದಿನದಂದೇ ಸೀತಾದೇವಿ ಜನಕ ಮಹಾರಾಜನಿಗೆ ದೊರೆತಳಂತೆ. ಆದ್ದರಿಂದ ಸೀತಾದೇವಿಯ ಜಯಂತಿಯನ್ನು ಆಚರಿಸುವ ವಾಡಿಕೆಯಿದೆ.

ಹೀಗೆ ಲಕ್ಷ್ಮೀನಾರಾಯಣರಿಬ್ಬರಿಗೂ ಪ್ರೀತಿಕರವಾದ ಈ ಮಾಸದಲ್ಲಿ, ಅವರಿಬ್ಬರಿಗೂ ಪ್ರೀತಿಕರವಾದ ಪಯೋವ್ರತ ಹಾಗೂ ಆಮಲಕಿ ವೃಕ್ಷಕ್ಕೆ ಪೂಜಿಸುವುದರ ಮೂಲಕ ಅವರಿಬ್ಬರ ಕೃಪೆಗೆ ಪಾತ್ರರಾಗೋಣ.

**ಗೋವಿಂದಾ ....!ಗೋವಿಂದಾ! ಗೋವಿಂದಾ........!!**

# ಕೈಲಾಸ ವಾಸ ಗೌರೀಶ ಈಶ

– ಡಾ|| ಗುರುರಾಜ ಪೋಶೆಟ್ಟಿಹಳ್ಳಿ
97393 69621



ಶಿವರಾತ್ರಿಯ ಹಬ್ಬದ ಸಂಭ್ರಮದಲ್ಲಿ ವಿಶ್ವವ್ಯಾಪಿ ವಿಶ್ವೇಶ್ವರನನ್ನು ವಿಶ್ವದಾದ್ಯಂತ ಆರಾಧಿಸುವ ಈ ಸಂದರ್ಭದಲ್ಲಿ ವಿಜಯದಾಸರ ಈ ಸಾಲುಗಳು ನಮ್ಮ ಹೃದಯವನ್ನು ತಲುಪಿ ಆ ಮುಕ್ಕಣ್ಣನ ಮಹಿಮೆಯನ್ನು ಅರಹುತ್ತಾ ನಮ್ಮಲ್ಲಿರುವ ಭಕ್ತಿಯನ್ನು ಇಮ್ಮಡಿಗೊಳಿಸುತ್ತವೆ.

ಜನ ಸಾಮಾನ್ಯರ ಬಾಯಲ್ಲಿ ನಲಿದಾಡುವ ದಾಸರ ಪದಗಳು ಸಾಮಾಜಿಕ ಚಿಂತನೆಗೆ ನಮ್ಮನ್ನು ಒರೆಹಚ್ಚುತ್ತವೆ. ಹರಿದಾಸರು ತಮ್ಮ ಪದಗಳಲ್ಲಿ ಶಿವಾಮೃತವನ್ನು ಉಣಬಡಿಸಿದ್ದಾರೆ.ಶಿವ ಎಂದರೆ ಸತ್ಯ, ಸುಂದರ, ಪ್ರಶಾಂತ, ಪ್ರಸನ್ನ ಮೂರ್ತಿ.ಆದರೆ ದುಷ್ಟರಿಗೆ ಪ್ರಳಯ ತಾಂಡವದ ರುದ್ರ ಮೂರ್ತಿಯೂ ಹೌದು.ಅವನ ಅನುಗ್ರಹ ಬದುಕಿಗೆ ಧನ್ಯತೆಯನ್ನು ತಂದು ಕೊಡುತ್ತದೆ. ಚಂದ್ರಚೂಡ ಶಿವಶಂಕರ ಪಾರ್ವತಿ ರಮಣ ನಿನಗೆ ನಮೋ ನಮೋ ! ಸುಂದರ ಮೃಗಧರ ಪಿನಾಕಿ ಧನುಧರ, ಗಂಗಾಶಿರ, ಗಜಚರ್ಮಾಂಬರಧರ ಎಂದು ಶಿವನಲ್ಲಿ ಅನನ್ಯ ಶರಣಾಗುವ ಪುರಂದರದಾಸರು "ಶಿವದರುಶನ ನಮಗಾಯಿತು ಕೇಳಿ ಶಿವರಾತ್ರಿಯ ಜಾಗರಣೆ" ಎಂದು ಶಿವರಾತ್ರಿ ಸಂಭ್ರಮವನ್ನು ಕುರಿತೇ ವಿಶೇಷವಾಗಿ ಹಾಡಿದ್ದಾರೆ.'ಚಂದ್ರಚೂಡ ಶಿವಶಂಕರ' ಹಾಡಂತೂ ನಾದ,ಲಯ, ವಿಶೇಷ ಶಬ್ದಗಳ ವೈಶಿಷ್ಟ್ಯತೆಯೆಲ್ಲ ಎಲ್ಲ ಸಂಗೀತಗಾರರ ಮನ ಸೆಳೆದಿದೆ.ಈ ಹಾಡಿನ ಕೊನೆಯಲ್ಲಿ ಶಿವನನ್ನು "ಪುರಂದರ ವಿಠಲನಿಗೆ ಪ್ರಾಣಪ್ರಿಯನು ನೀನೇ"ಎಂದು ಹೇಳಿ ಪರಮಾತ್ಮನಿಗೆ ಹಾಗೂ ಹರಿದಾಸರಿಗೆ ಶಿವನು ಪ್ರಾಣಪ್ರಿಯ ಎಂದು ಹಾಡಿದ್ದಾರೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಜಗನ್ನಾಥದಾಸರು "ರುದ್ರ ನೀ ಎನ್ನನು ಪಾಲಿಸೋ ವೀರಭದ್ರಾ, ರುದ್ರ, ನೀ ಎನ್ನ ಹೃದ್ರೋಗ ಕಳೆದು ಸಮುದ್ರನಿಲಯನ ಪದಭಕುತಿಯ ಛಿದ್ರವಿಲ್ಲದೆ ನೀಡು" ಎಂಬುವ ಹಾಡಿನಲ್ಲಿ 'ವೀರಭದ್ರ ರುದ್ರ, ನಮ್ಮ ಹೃದಯ ರೋಗಗಳನ್ನು ನಿವಾರಿಸುವ ಮಹದೇವ' ಎಂದಿದ್ದಾರೆ. ಹರಿದಾಸ ಸಾಹಿತ್ಯ ಪ್ರವರ್ತಕರಾದ ಶ್ರೀಪಾದರಾಜರು 'ವೃಷಭನೇರಿದ ವಿಷಧರನ್ಯಾರೆ ಪೇಳಮ್ಮಯ್ಯ'ಎಂಬ ಹಾಡಿನಲ್ಲಿ ಶಿವ ಜಟಾ ಜೂಟಧಾರಿ, ಕೈಲಾಸವಾಸಿ, ಫಣಿಭೂಷಣ, ದಾಕ್ಷಾಯನಿ ಪತಿ, ವಿಷಕಂಠ,ಗಂಗಾಧರ ಎಂದೆಲ್ಲಾ ಪ್ರಶಂಸಿದ್ದಾರೆ. ವ್ಯಾಸರಾಜರು "ನಮೋ ಪಾರ್ವತಿ ಪತಿನುತ ಜನಪರ ನಮೋ ವಿರೂಪಾಕ್ಷ" ಎಂದು ಹಾಡಿ,ಶಿವನು ನುತ ಜನಪರ ಎಂದರೆ ಶುದ್ಧಾಂತಃ ಕರಣದಿಂದ, ನಿರ್ಮಲ ಭಕ್ತಿಯಿಂದ ಸ್ತುತಿಸುವ ದೈವ ಜನಪರನಾಗಿದ್ದಾನೆ.ಆತ ಜನರ ವಿಶೇಷ ಅಭಿಮಾನಿ ಎನ್ನುವುದನ್ನು ನಿರೂಪಿಸಿದ್ದಾರೆ.ವಾದಿರಾಜರಂತೂ ಶಿವನನ್ನು ಗುರು ಕುಲೋತ್ತುಂಗ ಎಂದು ಸ್ತುತಿಸಿದ್ದಾರೆ. ಅಷ್ಟೇ ಅಲ್ಲ ಒಂದು ಮೂರುತಿಯಲ್ಲಿ ಹರಿಹರ ದೇವರಿಬ್ಬರೂ ಇರುವುದನ್ನು ತಾವು ಕಂಡು ಅದನ್ನು ಕೀರ್ತಿಸಿದ್ದಾರೆ.

### ಶಿವನ ವಿಶೇಷ ಗುಣಗಳು

'ಕಂಡೆ ಕರುಣಾನಿಧಿಯ ಗಂಗೆಯ ಮಂಡೆಯೊಳಿಟ್ಟ ಧೊರೆಯೆ' ಎನ್ನುವ ಪ್ರಸಿದ್ಧ ಹಾಡಿನಲ್ಲಿ ಪುರಂದರದಾಸರು ಶಿವನನ್ನು ಭಸಿತ ವಿಭೂತ, ಪಶುಪತಿ, ಶಶಿಶೇಖರ, ಕಪ್ಪುಗೊರಳ,

ಕಂದರ್ಪಪಿತ, ಮುಪ್ಪುರಗೆಲಿದವ, ಕಾಮಸುಂದರ, ಗಜಚರ್ಮಾಂಬರ, ಗೌರೀವರ ಜಗದೀಶ್ವರ, ತ್ರಿಜಗ ನ್ಮೋಹಕ, ತ್ರಿಪುರಾಂತಕ, ತ್ರಿಲೋಚನ' ಎಂಬ ಅನೇಕ ವಿಶೇಷಣ ಗಳಿಂದ ಸ್ತುತಿಸಿದ್ದಾರೆ. ಕನಕದಾಸರಂತೂ ಜನರಿಗೆ 'ಶಿವಶಿವ ಎನ್ನಿರೋ ಮೂಜ಼ಗದವರೆಲ್ಲಾ' ಎಂದು ಹೇಳಿ 'ಭುವನಕ್ಕೆ ಬಲ್ಲಿದರಾಗಬೇಕೆಂದರೆ, ಸದ್ಗುರುವಾಗ ಬೇಕಾದರೆ,ತತ್ವಪತಿ ಆದಿಕೇಶವನ ಕೂಡಬೇಕಾದರೆ 'ಶಿವಶಿವ ಎನ್ನಿರೋ ' ಎಂಬ ಸಂದೇಶ ಸಾರುತ್ತಾರೆ.



### ಹರಿದಾಸ ಸಾಹಿತ್ಯದಲ್ಲಿ ಶಿವತತ್ತ್ವ

ಪ್ರಸನ್ನವೆಂಕಟದಾಸರು 'ಬೇಸರದೆಂದು ಸದಾಶಿವನೆನ್ನಿ' ಎನ್ನುತ್ತ 'ನಂಬೆ ಭವಾಂಬುಧಿ ಅಂಬಿಗನೆನ್ನಿ' ಎಂದು ಹೇಳಿ ಸದಾಶಿವ ಭವಸಾಗರ ದಾಟಿಸುವ ಮಹದೇವ ಎಂದು ಸಾರುತ್ತಾರೆ. ಕೇಳಿದ ವರವನ್ನು ನೀಡುವ, ಅಪಮೃತ್ಯುವನ್ನು ದೂರ ಮಾಡುವ ದೈವವೇ ರುದ್ರದೇವರು ಎನ್ನುತ್ತಾರೆ. ಹರಿಕಥಾಮೃತಸಾರದಂತಹ ಆಧ್ಯಾತ್ಮಿಕ ಮಹಾ ಕಾವ್ಯ ರಚಿಸಿದ ಜಗನ್ನಾಥದಾಸರು, ಶಿವನನ್ನು ಮುಕ್ತಕಂಠದಿಂದ ಪ್ರಶಂಸಿಸುತ್ತಾ ಚಂದ್ರಶೇಖರ, ನಂದಿವಾಹನ, ಮಂದಾಕಿನಿಧರ, ಗುಣಸಾಂದ್ರ, ಕೃತ್ತಿವಾಸ, ಶುಭಕಾಯ,ರುಂಡಮಾಲಿ,ಮೃಗವರಪಾಣಿ ಶೈಲಜಾರಮಣ, ತ್ರಿಪುರಾರಿ, ಸಂಭವ, ಪ್ರಮೇಥೇಶ, ಮೃಡದೇವ, ವ್ಯೂಮಕೇಶ, ಉಮಾಮನೋಹರ, ವಿರೂಪಾಕ್ಷ, ಉಗ್ರತಪ, ಲೋಚನತ್ರಯ, ಅಮರೇಶ, ಭೂತನಾಥ, ಧೂರ್ಜಟಿ, ಸುಮನೋತ್ತಂಸ, ಕಾಮಹರ, ಕೈಲಾಸಮಂದಿರ, ಸೋಮಾಸೂರ್ಯಾನಲಲೋಚನ, ಪರಮಪವಿತ್ರ, ಸುಚರಿತ್ರ, ರಾವಣಮದ ಭಂಜನ, ದಕ್ಷಯಜ್ಞ ಭಂಜನ, ವೈರಾಗ್ಯಾಧಿಪತಿ, ಯಕ್ಷಪತಿ ಸುಖ, ನಾಗಭೂಷಣ, ಪಂಪಾಪುರ ನಿವಾಸ ಎಂದು ಸ್ತುತಿಸಿದ್ದಾರೆ.

### ಸಂಗೀತ ಬದ್ಧ ರೂಪ

ಗುರುಮಹಿಪತಿದಾಸರು 'ಪಾಹಿಮಾಂ ಪಾಹಿ ಹರಮೃಡಶಂಭೋ' ಎಂಬ ಹಾಡಿನಲ್ಲಿ 'ಆದ್ರಿಧರಪ್ರಿಯ ಆದ್ರಿಕೃತಾಲಯ ಆದ್ರಿ ಜಾಮಾತಾದ್ರಿರಿಪುನುತ ಆದ್ರಿಜೆ ಪತಿ ಪಾಪಾದ್ರಿ ಕುಲಿಶಾದ್ರಿ ಶರಾಸನ ಮುದ್ರಿತಪಾಣೇ ಉನ್ಮಮತ್ತದಿಂದಲಿ ಮನ್ಮಥ ಬರಲು ದಹನ ಮಾಡಿದ ಷಣ್ಮುಖ ಜನಕನೆ ಉನ್ಮನಯೋಗಿ ಸನ್ನುತಲೀಲಾ ಜನ್ಮರತ ಘನ ಚಿನ್ಮಯರೂಪಾ' ಎಂದೂ ಸಂಗೀತ ಬದ್ಧವಾಗಿ ಹಾಡಿದ್ದಾರೆ.

ಹೆಳವನಕಟ್ಟೆ ಗಿರಿಯಮ್ಮ ಹರಿಹರರ ಬಗ್ಗೆ ಒಂದೇ ಹಾಡಿನಲ್ಲಿ ಹೇಳುತ್ತ 'ಈತ ರಂಗನಾದ ಹರಿಯು , ಆತ ಅಂಗನಾದ ಹರನು, ಕಂಗಳು ಮೂರುಳ್ಳವನಾತ, ಮಂಗಳ ದೇವೇಶನೀತ ತುಂಗ ಹೆಳವನಕಟ್ಟೆ ರಂಗನೀತ, ಅಂಗನೀತ ಎಂದು ಇಬ್ಬರನ್ನು ಒಟ್ಟಿಗೇ ಸ್ತುತಿಸಿದ್ದಾರೆ. ಬಡೇಸಾಹೇಬರೆಂದೇ ಪ್ರಖ್ಯಾತರಾದ ರಾಮದಾಸರು ನೂರೆಂಟು ನುಡಿಗಳ ಶಂಭುಶತಾಷ್ಟಕ ಎಂಬ ವಿಶಿಷ್ಟ ಕೃತಿಯನ್ನೇ ರಚಿಸಿ ಶಿವಭಕ್ತಿಯನ್ನು ಮೆರೆದಿದ್ದಾರೆ.ಹದಿನೇಳು ನುಡಿಗಳ 'ದೋಷನಾಶ ಜಗದೀಶ ಈಶ' ಎಂಬ ಅವರ ಭಜನೆ ಹಾಡು 'ದಂಡಧರನೆ ಹರ ರುಂಡಮಾಲಿ ರುದ್ರಕೊಂಡನಯನ ಸದಾನಂದ ಹರ ಜೈಜೈ ಪರಮಾನಂದ ಎಂದು ಮನತುಂಬಿ ಭಜಿಸಿದ್ದಾರೆ.ಜಗನ್ನಾಥದಾಸರ ಶಿಷ್ಯರಾದ ಪ್ರಾಣೇಶದಾಸರಂತೂ 'ಶಿವಭಕ್ತನಾಗೋ ಪ್ರಾಣಿ. ಅವನಿಯಲ್ಲಿ ಪರದಲ್ಲಿ' ಎಂದು ಕರೆ ನೀಡುತ್ತಾರೆ. ಹರಪನ ಹಳ್ಳಿ ಭೀಮವ್ವನವರು 'ಕಾಶಿ ವಿಶ್ವೇಶ್ವರ ಗಂಗಾಧರ ಹಿಂಗಿಸೆನ್ನ ಲಿಂಗ ಭಂಗ ಬಡಿಸೋ ನರಸಿಂಹ ಭಕ್ತ' ಎಂದು ಹಂಪೆಯ ವಾಸಿ ಪಂಪಾಪತಿಯನ್ನು ಸುತ್ತಿಸುತ್ತಾರೆ.

ಹರಿದಾಸ ಸಾಹಿತ್ಯದಲ್ಲಿ ಶಿವನ ಸ್ಥಾನ ಮುಖ್ಯವಾದುದು. ಏಕೆಂದರೆ ನಮ್ಮ ಮನಸ್ಸು,ಬುದ್ಧಿ,ಚಿಂತನೆ, ನಿರ್ಣಯ ನಿರ್ಧಾರಗಳನ್ನು ಉತ್ತಮವಾಗಿಸಲು ಶಿವನ ಅನುಗ್ರಹ ಅತ್ಯವಶ್ಯಕ. ಇಂದ್ರಿಯಗಳನ್ನು ನಿಯಂತ್ರಿಸಬೇಕಾದರೆ ಮಾರನನ್ನು ಗೆದ್ದ ಮನೋಹರ ಮೂರ್ತಿ ಶಿವನನ್ನು ಆರಾಧಿಸಬೇಕು. ಜಪತಪ, ಅನುಷ್ಠಾನ ತ್ಯಾಗ, ವೈರಾಗ್ಯ, ಶಾಂತಿ, ಸಹನೆ, ಸರಳತೆಯ ಸಾಕಾರದೈವ ಶಿವ.ಸೂರ್ಯ ಚಂದ್ರರು ಅವನ ಎರಡು ಕಣ್ಣುಗಳು, ಮೂರನೆಯ ಕಣ್ಣು ಜಗತ್ತನ್ನೇ ಸುಡಬಲ್ಲ ಅಗ್ನಿ. ಹಾಗೆಯೇ ಜ್ಞಾನ ಹಾಗೂ ವಿವೇಕದ ಮೂಲನೆಲೆ ಅದು ವ್ಯೂಮಕೇಶನಾದ ಅವನ ತಲೆಗೂದಲೇ ಆಕಾಶ, ಪವಿತ್ರಳಾದ ಗಂಗೆಯನ್ನೇ ಶಿರದಲ್ಲಿ ಧರಿಸಿರುವ ಪವಿತ್ರ ಸ್ವರೂಪ ಅವನು.ಅರ್ಧಾಂಗಿಗಾಗಿ ತನ್ನ ದೇಹದ ಅರ್ಧ ಭಾಗವನ್ನೇ ತ್ಯಾಗ ಮಾಡಿದ ಅವನು ಅರ್ಧನಾರೀಶ್ವರ.

### ಹರಿದಾಸರ ಭಾವ

ಮಾರುತಿ ಶಿವನ ಅವತಾರ ಎಂಬ ನಂಬುಗೆ ಹಲವರದು. ಹೇಗೆ ಶ್ರೀರಾಮಚಂದ್ರನ ಒಲುಮೆ ಸಂಪಾ



ದಿಸಲು ಹನುಮಂತನ ಆರಾಧನೆ ಮುಖ್ಯವ್ರೋ ಹಾಗೇ ಶ್ರೀಹರಿಯ ಒಲುಮೆಗೆ ಹರನ ನೆನೆಯುವುದು ಅಷ್ಟೆ ಮುಖ್ಯ ಎಂಬುದೇ ಹರಿದಾಸರ ಭಾವವಾಗಿದೆ. ಅದನ್ನೇ ವಿಜಯ ದಾಸರು "ಕೈಲಾಸವಾಸ ಗೌರೀಶ ಈಶ ತೈಲ ಧಾರೆಯಂತೆ ಮನಸು ಕೊಡು ಹರಯಲ್ಲಿ ಶಂಭೋ" ಎಂದು ಸುತ್ತಿಸುತ್ತಾರೆ. ದೀಪದಲ್ಲಿ ಬತ್ತಿಯು ಮಧ್ಯಭಾಗದಲ್ಲಿರುತ್ತದೆ. ಸುತ್ತ ತೈಲವು ಹರಿಯುತ್ತಿರುತ್ತದೆ. ಒಮ್ಮೆ ದೀಪ ಬೆಳಗಲು ಪ್ರಾರಂಭವಾದೊಡನೆ ಬತ್ತಿಯು ತನ್ನ ಸುತ್ತಣ ತೈಲವನ್ನು ತನ್ನತ್ತ ಸೆಳೆದುಕೊಳ್ಳಲು ಪ್ರಾರಂಭಿಸುತ್ತದೆ. ಇಲ್ಲಿ ಉರಿವ ದೀಪ ಏಕಾಗ್ರತೆಯ ಸಂಕೇತವಾಗುತ್ತದೆ. ಜ್ಞಾನ ಜ್ಯೋತಿಯಾಗುತ್ತದೆ. ಹಾಗೆಂದೇ ವಿಜಯದಾಸರು, ಚಂಚಲಚಿತ್ತವಾದ ಮನಸ್ಸನ್ನು ಅತ್ತಿಂದಿತ್ತ ಹರಿಯಗೊಡದೆ ಹರಿಯಲ್ಲಿ ಅನುದಿನ ನೆಲೆಸುವಂತೆ ಮಾಡೋ ಎಂದು ಬೇಡಿಕೊಳ್ಳುತ್ತಾರೆ. ಅವರು ಮುಂದುವರೆದು ಅಹಿ ಭೂಷಣನೆ ಎನ್ನ ಅವಗುಣಗಳೆಣಿಸದೇ! ವಿಹಿತ ಧರ್ಮದಲಿ ವಿಷ್ಣು ಭಕುತಿಯ ಕೊಡು ಶಂಭೋ ಎನ್ನುತ್ತಾರೆ.

### ಹರನೊಲಿದರೆ ಹರಿ ತಾನೊಲಿವ

ಹರಿಯ ಸಾಕ್ಷಾತ್ಕರಕ್ಕೆ ಹರನ ಒಲುಮೆ ಮುಖ್ಯ ಹರ ಮುನಿದರೆ ಹರಿ ತಾ ಮುನಿವ ವಾದಿರಾಜರ ಭಾವ. ಈ ಭಾವವನ್ನು 'ಧವಳ ಗಂಗೆಯ ಗಂಗಾಧರ ಮಹಾಲಿಂಗ ಮಾಧವನ ತೋರಿಸಯ್ಯ ಗುರು ಕುಲೋತ್ತುಂಗ! ನಾನು ಗುರುವೆಂಬ ನಿನ್ನ ಇನ್ನಾದರೂ ಹರಿಯ ತೋರೋ ಮುಕ್ಕಣ್ಣ॥ ಎಂಬ ಅವರ ಕೃತಿಯಲ್ಲಿ ನೋಡಬಹುದು. ವಾದಿರಾಜರು ರುದ್ರದೇವರನ್ನು ಗುರುವೆಂದೇ ಕರೆಯುತ್ತಾರೆ. ಹೇಗೆ ಗುರುವು ಆಜ್ಞಾನವೆಂಬ ಕತ್ತಲನ್ನು ಕಳೆದು ಸುಜ್ಞಾನವೆಂಬ ಬೆಳಕನ್ನು ತೋರುತ್ತಾನೋ ಹಾಗೆ ನನ್ನನಲ್ಲಿರುವ ಅಜ್ಞಾನವನ್ನು ಕಳೆದು ಚೆನ್ನ ಪ್ರಸನ್ನ ಹಯವದನನ್ನು ಅನುದಿನ ನೆನೆಯುವಂತೆ ಮಾಡೋ ಎಂದು ಪರಿಯಾಗಿ ಬೇಡುತ್ತಾರೆ. ಒಂದು ಕಡೆ ವಾದಿರಾಜಸ್ವಾಮಿಗಳು ತಮ್ಮ 'ಧವಳಗಂಗೆಯ ಗಂಗಾಧರ ಮಹಾಲಿಂಗ' ಎನ್ನುವ ಕೃತಿಯಲ್ಲಿ ಈಶ್ವರನನ್ನು 'ಗುರುಕುಲೋತ್ತುಂಗ' ಎಂದು ಸಂಭೋದಿಸುತ್ತಾರೆ.'ಅನ್ಯನಲ್ಲವ್ರೋ ನಾನು ಗುರು ಎಂಬೆ ನಿನ್ನ ಎಂದೂ ಕೂಡ ಪುನಃ ಪುನಃ ಗುರುವಿನ ಸ್ಥಾನದಲ್ಲಿರಿಸಿ ಪ್ರಾರ್ಥಿಸಿರುವುದು ನಮಗೆ ಕಂಡು ಬರುತ್ತದೆ. 'ಗುರು ದೇವ್ರೋ ಮಹೇಶ್ವರ' ಎನ್ನುವ ಅನ್ವರ್ಥಕವು ನಮಗೆ ಇಲ್ಲಿ ಗೋಚರವಾಗುತ್ತದೆ.

ಶಿವನನ್ನು ಸ್ತೋತ್ರ ಮಾಡುವುದು ಒಂದು ವಿಷಯವಾದರೆ ಇನ್ನು ಶಿವನ ಭಕ್ತರಾದವರು ಹೇಗೆ ಇರಬೇಕೆಂಬುದನ್ನೂ ಹೇಳಲು ದಾಸರು ಮರೆತಿಲ್ಲ. ದಾಸ ಶ್ರೇಷ್ಠ ಶ್ರೀಕನಕದಾಸರ 'ದಾಸನಾಗಬೇಕು ಸದಾಶಿವನ ಕೃತಿಯಲ್ಲಿ ನಾವು ಅದನ್ನು ಕಾಣಬಹುದು. 'ದಾಸನಾಗಬೇಕು ಕೇಶ ಪಂಚಕವಳಿದು ಎಂದು ಹೇಳುತ್ತ ಅವಿದ್ಯೆ, ಅಸ್ಮಿತೆ, ರಾಗ, ದ್ವೇಷ ಮರಣಭಯ ಎನಿಸಿಕೊಳ್ಳುವ ಅಭಿನಿವೇಶ ಈ ಐದು ಕ್ಲೇಶಗಳಿಂದ ಮುಕ್ತರಾದಾಗ ಮಾತ್ರ ಪರಶಿವನ ದಾಸನಾಗಬಹುದು ಅಥವಾ ಈ ಐದು ಶ್ಲೋಕಗಳಿಂದ ಹೊರ ಬರಬೇಕಾದರೆ ನಾವು ಸದಾಶಿವನ ಭಕ್ತರಾಗಲೇ ಬೇಕು ಎನ್ನುವ ಮಾರ್ಮಿಕತೆಯನ್ನೂ ಕನಕದಾಸರು ಸೂಕ್ಷ್ಮವಾಗಿ ಸೂಚಿಸಿರಲೂಬಹುದು.

### ಶಿವ ಶಿವ ಎನ್ನಿರೋ

ಅದೇ ರೀತಿ ಕನಕದಾಸರು ತಮ್ಮ ಮತ್ತೊಂದು ಕೀರ್ತನೆಯಾದ 'ಶಿವ ಶಿವ ಶಿವ ಎನ್ನಿರೋ' ಹಾಡಿನಲ್ಲಿ 'ಗುರು ಲಿಂಗ ಜಂಗಮವ ಅರಿಯಬೇಕಾದರೆ ಶಿವ ಶಿವ ಶಿವ ಎನ್ನಿರೋ'ಎಂದು ಹೇಳುವಾಗ ಅಷ್ಟಾವರಣಗಳಾದ ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಇವುಗಳನ್ನು ಅರಿತು ಅಳವಡಿಸಿಕೊಳ್ಳಲೂ ನಾವು ಶಿವ ಧ್ಯಾನ ನಿರತರಾಗಬೇಕು ಅವನ ಅನುಗ್ರಹ ಪಡೆಯಬೇಕೆಂಬುದನ್ನು ಹೇಳಿರುವುದು ನಮ್ಮ ಅನುಭವಕ್ಕೆ ಬರುತ್ತದೆ. ಇನ್ನೊಂದು ಸಂದರ್ಭವನ್ನು ತೆಗೆದು ಕೊಂಡಾಗ ಶ್ರೀಜಗನ್ನಾಥದಾಸರು ತಮ್ಮ ರಚನೆಯಾದ 'ಶರಣು ಮೃತ್ಯುಂಜಯ ಶರಣು ಸಜ್ಜನರ ಭಯ ಪರಿಹರಿಸು ಕರುಣಾಳು ಕೇಳು ಬಿನ್ನಪವ' ಎಂಬ ಕೀರ್ತನೆಯಲ್ಲಿ ಮೃತ್ಯುಂಜಯ ಸ್ವರೂಪಿಯಾದ ಮಹಾರುದ್ರ ದೇವನು ಅಪಮೃತ್ಯು ಕಳೆಯುವ ಶಕ್ತಿ ಉಳ್ಳವನಾಗಿದ್ದು ಅವನನ್ನು ಪ್ರಾರ್ಥಿಸಿದರೆ ನಮಗೆ ಬಂದೊದಗುವ ಅಕಾಲ ಮರಣಗಳಿಂದ ರಕ್ಷಿಸಿಕೊಳ್ಳಬಹುದೆಂದು ಜಗನ್ನಾಥದಾಸರ ಬಲವಾದ ನಂಬಿಕೆ.

'ಶಿವನೇ ನಾ ನಿನ್ನ ಸೇವಕನಯ್ಯ' ಎನ್ನುವ ದಾಸ ಸಾಹಿತ್ಯ, ಪರತತ್ವದ ಸಾಕ್ಷಾತ್ಕಾರವಾಗಬೇಕಾದರೆ ಶಿವ ಮನಸ್ಸು ಕೊಟ್ಟರೆ ಮಾತ್ರ ಸಾಧ್ಯ. ಹಾಗಾಗಿ ಅವನ ಉಪಾಸನೆ ಮುಕ್ತಿ ಪಥಕ್ಕೆ ರಾಜಮಾರ್ಗ ಎನ್ನುವುದನ್ನು ಸ್ಪಷ್ಟವಾಗಿ ಸಾರಿದೆ.

# ಅಗಸ್ತ್ಯ ಮಹಾಮುನಿ

- ಡಾ|| ಸಿ. ಎಸ್. ಊರ್ಮಿಳಾ
9380426830

(ಕಳೆದ ಸಂಚಿಕೆಯಿಂದ ಮುಂದುವರಿದಿದೆ)

ಈಗಾಗಲೇ ತಿಳಿಸಿದಂತೆ ಅಗಸ್ತ್ಯ ಮಹಾಮುನಿಗಳ ಮಹಿಮೆಯ ಬಗ್ಗೆ ರಾಮಾಯಣದಲ್ಲಿ ವರ್ಣಿಸಲಾಗಿದೆ. ಶ್ರೀ ರಾಮ ಚಂದ್ರನು ವನವಾಸದ ಕಾಲದಲ್ಲಿ ಲಕ್ಷ್ಮಣ ಸೀತಾ ಸಮೇತನಾಗಿ ಅಗಸ್ತ್ಯಾಶ್ರಮಕ್ಕೆ ಸುತೀಕ್ಷ್ಣ ಮಹರ್ಷಿಗಳ ಮಾರ್ಗದರ್ಶನದಂತೆ ಬಂದು ಸೇರಿದರು.

ಅಗಸ್ತ್ಯಾಸ್ಯಾಶ್ರಮೋ ಭ್ರಾತುರ್ನೂನ ಮೇಷ ಭವಿಷ್ಯತಿ||
ತಸ್ಯಾಯ ಮಾಶ್ರಮೋ ಭ್ರಾತುಸ್ತಟಾಕವನ ಶೋಭಿತಃ||

(ಶ್ರೀಮದ್ವಾಲ್ಮೀಕಿ ರಾಮಾಯಣ ಅರಣ್ಯಕಾಂಡ 11 ನೇ ಸರ್ಗ ಶ್ಲೋಕ 55 ರಿಂದ 68 )

ಅಗಸ್ತ್ಯ ಮಹಾಮುನಿಗಳು ಆಶ್ರಮದ ಸುತ್ತಮುತ್ತ ಜನರಿಗೆ ಒದಗುತ್ತಿದ್ದ ಮೃತ್ಯುವನ್ನು ತಮ್ಮ ತಪೋಬಲದಿಂದ ತಡೆಯುತ್ತಿದ್ದರು. ಪುಣ್ಯಾತ್ಮರಾದ ಆ ಮಹರ್ಷಿಲೋಕ ಕಲ್ಯಾಣವನ್ನು ಬಯಸಿ ದಕ್ಷಿಣದಿಕ್ಕಿನಲ್ಲಿ ನೆಲೆಸಿದರು. ಒಂದು ಕಾಲದಲ್ಲಿ ವಾತಾಪಿ ಇಲ್ವಲರೆಂಬ ಕ್ರೂರರಾದ ಅಣ್ಣ ತಮ್ಮಂದಿರು ಇಲ್ಲಿ ಇದ್ದರು. ಆ ರಾಕ್ಷಸರು ಇಲ್ಲಿದ್ದ ಬ್ರಾಹ್ಮಣರನ್ನು ಕೊಲ್ಲುತ್ತಿದ್ದರು. ಇಲ್ವಲನು ಬ್ರಾಹ್ಮಣರ ರೂಪವನ್ನು ಧರಿಸಿ ಸಂಸ್ಕೃತದಲ್ಲಿ ಮಾತನಾಡುತ್ತಿದ್ದನು. ತಾನು ಶ್ರಾದ್ಧ ಮಾಡಬೇಕಾಗಿದೆಯೆಂದು ಹೇಳಿ ಬ್ರಾಹ್ಮಣರಿಗೆ ನಿಮಂತ್ರಣವನ್ನು ಕೊಟ್ಟು ಕರೆಯುತ್ತಿದ್ದನು. ಅನಂತರ ಆ ನಿರ್ದಯನಾದ ರಾಕ್ಷಸನು ತನ್ನ ಮನೆಯಲ್ಲಿ ಮೇಕೆಯ ರೂಪದಲ್ಲಿದ್ದ ತಮ್ಮನಾದ ವಾತಾಪಿಯನ್ನು ಕೊಯ್ದು ಅಡಿಗೆ ಮಾಡಿ ಆ ಬ್ರಾಹ್ಮಣರಿಗೆ ವಿಧಿವತ್ತಾಗಿ ಭೋಜನ ಮಾಡಿಸುತ್ತಿದ್ದನು.

ಬ್ರಾಹ್ಮಣರ ಭೋಜನವಾದ ನಂತರ ಇಲ್ವಲನು "ವಾತಾಪಿ ಹೊರಗೆ ಬಾ " ಎಂದು ಗಟ್ಟಿಯಾಗಿ ವಾತಾಪಿಯನ್ನು ಕರೆಯುತ್ತಿದ್ದನು. ಅಣ್ಣನ ಮಾತನ್ನು ಕೇಳಿದೊಡನೆ ವಾತಾಪಿಯು ಮೇಕೆಯಂತೆ "ಮೇ! ಮೇ! ಎಂದು ಅರಚುತ್ತಾ ಆ ಬ್ರಾಹ್ಮಣರ




ಶರೀರವನ್ನು ಭೇದಿಸಿಕೊಂಡು ಹೊರಗೆ ಬರುತ್ತಿದ್ದನು. ಈ ಪ್ರಕಾರವಾಗಿ ಮಾಯಾವಿಗಳಾದ ಆ ರಾಕ್ಷಸರು ಸಾವಿರಾರು ಮಂದಿ ಬ್ರಾಹ್ಮಣರನ್ನು ಕೊಂದರು. ಹೀಗಿರುವಲ್ಲಿ ದೇವತೆಗಳು ಅಗಸ್ತ್ಯರಿಗೆ ಈ ವಿಷಯವನ್ನು ಅರುಹಿದರು.

ಅಗಸ್ತ್ಯರು ದೇವತೆಗಳ ಪ್ರಾರ್ಥನೆಯನ್ನು ಮನ್ನಿಸಿ ಇಲ್ವಲನ ನಿಯಂತ್ರಣಕ್ಕೆ ಒಪ್ಪಿದರು. ಅವರು ಶ್ರಾದ್ಧದಲ್ಲಿ ವಾತಾಪಿಯ ಮಾಂಸವನ್ನು ಭಕ್ಷಿಸಿದರು. ಇಲ್ವಲನ್ನು ಅಗಸ್ತ್ಯರನ್ನು (ವಾತಾಪಿ ಜೀರ್ಣೋಭವ ಎಂದರು.)ಕುರಿತು "ತೃಪ್ತಿಯಾಯಿತೇ? ಎಂದು ಕೇಳಿ ಉತ್ತರಾಪೋಶನವನ್ನು (ಊಟದ ನಂತರ ತೆಗೆದುಕೊಳ್ಳುವ ಪವಿತ್ರ ತೀರ್ಥ) ಹಾಕಿದನು. ಅನಂತರ ಇಲ್ವಲನು "ವಾತಾಪಿ ಹೊರಗೆ ಬಾ"- ಎಂದು ಕರೆದನು. ಹೀಗೆ ತಮ್ಮನನ್ನು ಕರೆಯುತ್ತಿದ್ದ ಬ್ರಹ್ಮ ಘಾತುಕನಾದ ಇಲ್ವಲನನ್ನು ನೋಡಿ

ಅಗಸ್ತ್ಯರು ನಗುತ್ತಾ "ಹೊರಗೆ ಬರಲು ಅವನಿಗೆಲ್ಲಿದೆ ಸಾಮರ್ಥ್ಯ? ಆ ರಾಕ್ಷಸನು ನನ್ನ ಹೊಟ್ಟೆಯಲ್ಲಿ ಜೀರ್ಣವಾದನು. ನಿನ್ನ ತಮ್ಮ ಮೇಕೆಯ ರೂಪದಲ್ಲಿ ಬಂದಿದ್ದನಲ್ಲವೇ?

ಅವನೀಗ ಯಮಲೋಕವನ್ನು ಸೇರಿದ್ದಾನೆ ಎಂದರು. ತಮ್ಮನು ಸತ್ತನೆಂಬುದನ್ನು ಕೇಳಿ ಇಲ್ವಲನು ಕೋಪಾವೇಶದಿಂದ ಆ ಮುನಿಗಳನ್ನು ಹಿಂಸಿಸಬೇಕೆಂದು ಅವರ ಕಡೆಗೆ ನುಗ್ಗಿದನು. ಮಹಾತೇಜಸ್ವಿಗಳಾದ ಅಗಸ್ತ್ಯರ ಕಣ್ಣು ಬೆಂಕಿಯಂತಾಯಿತು. ಮರುಕ್ಷಣದಲ್ಲಿ ಇಲ್ವಲನು ಸುಟ್ಟು ಬೂದಿಯಾದನು. ಅಂತಹ ಅಗಸ್ತ್ಯಮುನಿಗಳ ಆಶ್ರಮವಿದು.ಕೆರೆಗಳಿಂದಲೂ ವನಗಳಿಂದಲೂ ಕೂಡಿದ ಈ ಆಶ್ರಮ ಮನೋಹರವಾಗಿದೆ. ಎಲೈ ಲಕ್ಷ್ಮಣ ಹೀಗೆ ವಿಪ್ರರ ಮೇಲೆ ಅನುಕಂಪೆಯಿಂದ ಅಗಸ್ತ್ಯ ಮಹಾಮುನಿಗಳು ಈ ಅದ್ಭುತವಾದ ಕಾರ್ಯವನ್ನು ನಡೆಸಿದರು ಎಂದು ಶ್ರೀರಾಮ ಚಂದ್ರನು ಲಕ್ಷ್ಮಣನಿಗೆ ಈ ಘಟನೆಯನ್ನು ವಿವರಿಸಿದನು.

ಅಗಸ್ತ್ಯರು ವಿಂಧ್ಯವೆಂಬ ಪರ್ವತವನ್ನು ಸ್ತಂಭಿಸಿ (ಪರ್ವತವು ಎತ್ತರವಾಗಿ ಬೆಳೆಯದಂತೆ ಮಾಡಿ )

ಲೋಕೋತ್ತರವಾದ ಕಾರ್ಯವನ್ನು ಮಾಡಿದರೆಂದು ರಾಮಾಯಣದಲ್ಲಿ ಉಲ್ಲೇಖವಿದೆ.ಆದ್ದರಿಂದಲೇ ಅವರಿಗೆ 'ಅಗಸ್ತ್ಯರು' ಎಂಬ ಹೆಸರು ಬಂದಿತು.

ದಕ್ಷಿಣಾ ದಿಕ್ಕೃತಾ ಯೇನ ಶರಣ್ಯಾಪುಣ್ಯ ಕರ್ಮಣಾ
ತಸ್ಯೇದ ಮಾಶ್ರಮ ಪದಂ ಪ್ರಭಾವಾದ್ಯಸ್ಯ ರಾಕ್ಷಸೈ ಃ

(ರಾಮಾಯಣ ಅರಣ್ಯಾಕಾಂಡ 11. ಶ್ಲೋಕ 82)

ಮೊರೆಹೊಕ್ಕವರನ್ನು ರಕ್ಷಿಸಬಲ್ಲದೆಂಬ ವಿಖ್ಯಾತಿಯನ್ನು ದಕ್ಷಿಣದಿಕ್ಕಿಗೆ ತಂದು ಕೊಟ್ಟ ಮಹಾ ಪುಣ್ಯಾತ್ಮರ ಆಶ್ರಮ ಈ ಅಗಸ್ತ್ಯಾಶ್ರಮ ಎಂದು ಶ್ರೀರಾಮ, ಲಕ್ಷ್ಮಣನಿಗೆ ಪರಿಚಯಿಸುತ್ತಾನೆ. ಅಂತಹ ಮಹಾನುಭಾವ ಅಗಸ್ತ್ಯಮುನಿಗಳ ಆಶ್ರಮಕ್ಕೆ ಬಂದ ನಂತರ ಮಹಾಮುನಿಗಳು ಕಾಕುತ್ಸ್ಥನಿಗೆ ಪೀಠವನ್ನು ಕೊಟ್ಟು ಜಲವನ್ನಿತ್ತು ಕುಳಿತುಕೊಳ್ಳುವಂತೆ ತಿಳಿಸಿ ಕುಶಲ ಪ್ರಶ್ನೆಗಳನ್ನು ಮಾಡಿ ಆ ಮೂವರನ್ನು (ರಾಮ, ಲಕ್ಷ್ಮಣ , ಸೀತೆ) ಆದರದಿಂದ ಸತ್ಕರಿಸಿದರು.ಈ ಸತ್ಕಾರದಲ್ಲಿಯೂ ಅತ್ಯುತ್ಕೃಷ್ಟವಾದ ಸಂಗತಿ ಯೆಂದರೆ ಸೀತಾದೇವಿಯ ಪ್ರಶಂಸೆ. ಪತಿವ್ರತಾ ಧರ್ಮ ಎಂದರೇನು? ಎಂಬುದನ್ನು ಈ ಮಹರ್ಷಿಗಳು ಸೀತೆಯನ್ನೇ ಉದಾಹರಣೆಯಾಗಿ ಕೊಟ್ಟಿರುವುದು ಅತ್ಯಂತ ವೈಶಿಷ್ಟ್ಯಯುತವಾಗಿದೆ. ಅಗಸ್ತ್ಯ ಮುನಿಗಳು ಸೀತಾದೇವಿಯ ಸೌಶೀಲ್ಯವನ್ನು ಹೀಗೆ ಹೊಗಳುತ್ತಾರೆ.

ಅಧ್ವ ಶ್ರಮೇಣ ವಾಂ ಖೇದೋ ಬಾಧತೇ ಪ್ರಚುರಶ್ರಮಃ

----------------------------------------

--------------------------------------

ಶ್ಲಾಘ್ಯಾಚ ವ್ಯಪದೇಶ್ಯಾ ಚ ಯಥಾ ದೇವೀ ಹ್ಯರುಂದತಿ

(ವಾಲ್ಮೀಕಿ ರಾಮಾಯಣ ಅರಣ್ಯಕಾಂಡ 13 ನೇ ಸರ್ಗ, ಶ್ಲೋಕ 2 ರಿಂದ 7)

ಎಲೈ ಶ್ರೀರಾಮ ನನ್ನನ್ನು ವಂದಿಸುವುದಕ್ಕಾಗಿ ಸೀತಾ ಲಕ್ಷ್ಮಣರೊಡನೆ ಇಷ್ಟು ದೂರ ಬಂದಿರುವೆಯಲ್ಲವೆ? ಕಾಲುದಾರಿ ನಡೆದು ನಿಮಗೆ ಆಯಾಸವಾಗಿದೆ.ತುಂಬ ಬಳಲಿದ್ದೀರಿ. ಮಿಥಿಲೇಶ್ವರನ ಪುತ್ರಿಯಾದ ಈ ಜಾನಕಿಗೆ ವಿಶ್ರಾಂತಿ ಅಗತ್ಯವಾಗಿ ಬೇಕಾಗಿದೆಯೆಂದು ನೋಡಿದರೇನೇ ಕಾಣಿಸುತ್ತದೆ. ಸುಕುಮಾರಿಯಾದ ಇವಳು ಈ ತರಹದ ಕಷ್ಟಗಳಿಂದ ನೊಂದವಳಲ್ಲ. ಅರಣ್ಯಗಳಲ್ಲಿ ಕ್ಲೇಶಗಳು ಬಹಳವಾಗಿವೆ. ಗಂಡನಲ್ಲಿರುವ ಪ್ರೇಮಾತಿಶಯದಿಂದ ಇಂತಹ ಅರಣ್ಯಕ್ಕೆ ಬಂದಿದ್ದಾಳೆ.ರಾಮ, ಇವಳಿಗೆ ಇಲ್ಲಿ ಸಂತೋಷವಾಗುವಂತೆ ನೋಡಿಕೋ.ಸೀತೆಯು ನಿನ್ನನ್ನು ಹಿಂಬಾಲಿಸಿ ಬಂದು ಬಹು ಕಷ್ಟವಾದ ಕೆಲಸಕ್ಕೆ ಕೈ ಹಾಕಿದ್ದಾಳೆ.ರಘುನಂದನ, ಸಾಮಾನ್ಯವಾಗಿ ಹೆಂಗಸರು ಹೇಗಿರುತ್ತಾರೆಂದರೆ, ಗಂಡನು ಅನುಕೂಲವಾಗಿ ಸುಖದಲ್ಲಿದ್ದಾಗ ಅವನನ್ನು ಪ್ರೀತಿಸುತ್ತಾರೆ. ಒಂದು ವೇಳೆ ಅವನು ಕಷ್ಟದಲ್ಲಿದ್ದರೆ ದೂರದಲ್ಲಿದ್ದು ಬಿಡುತ್ತಾರೆ. ಈ ಜಗತ್ತು ಸೃಷ್ಟಿಯಾದಂದಿನಿಂದ ಇದು ಸ್ತ್ರೀಯರ ಸ್ವಭಾವವಾಗಿದೆ.ಸ್ತ್ರೀಯರಲ್ಲಿ ಮಿಂಚುಗಳ ಚಂಚಲತೆ ಇದೆ. ಶಸ್ತ್ರಗಳ ತೀಕ್ಷ್ಣತೆ ಇದೆ. ಗರುಡ ವಾಯುವಿನ ಶೀಘ್ರತೆ ಇದೆ. ಆದರೆ ನಿನ್ನ ಪತ್ನಿಯಲ್ಲಿ ಇಂಥ ಯಾವ ದೋಷಗಳೂ ಇಲ್ಲ. ಇವಳ ನಡತೆ ಪ್ರಶಂಸನೀಯವಾದದ್ದು. ಪತಿವ್ರತೆಯರಲ್ಲಿ ಅಗ್ರಗಣ್ಯಳು. ಈಕೆ ಸಾಕ್ಷಾತ್ ಅರುಂಧತೀ ದೇವಿಗೆ ಸರಿಸಮಾನಳು"- ಎಂದು ಅಗಸ್ತ್ಯ ಮುನಿಗಳು ಸೀತಾದೇವಿಯ ಸದ್ಗುಣಗಳನ್ನು,ಸಾಧಾರಣವಾದ ಸ್ತ್ರೀಯರ (ಸಹಜವಾದ) ಗುಣಗಳನ್ನು ಪಟ್ಟಿ ಮಾಡುತ್ತಾ ಕೆಲವೇ ವಾಕ್ಯಗಳಲ್ಲಿ ಪತಿವ್ರತೆಯೆನಿಸಿಕೊಳ್ಳುವವಳು ಹೇಗಿರಬೇಕೆಂದು ಸೀತಾದೇವಿಯನ್ನು, ಅರುಂಧತಿ ದೇವಿಯೊಡನೆ ಹೋಲಿಸುತ್ತಾ ಇಡೀ ಸ್ತ್ರೀ ಕುಲಕ್ಕೆ ಸಂದೇಶ ನೀಡಿದ್ದಾರೆ. ಇಂದಿಗೂ ನಮ್ಮಲ್ಲಿ ವಿವಾಹ ಮಹೋತ್ಸವದ ಸಂದರ್ಭದಲ್ಲಿ 'ಅರುಂಧತಿ' ನಕ್ಷತ್ರವಿರುವ ದಿಕ್ಕನ್ನು ನೂತನ ಸತಿ-ಪತಿಯರಿಗೆ ಪುರೋಹಿತರು ತೋರಿಸುವ ಪರಿಪಾಠವಿದೆ.ಇದೇ ನಮ್ಮ ಸನಾತನ ಧರ್ಮ ಆಚಾರ, ವಿಚಾರಗಳ

ವೈಶಿಷ್ಟ್ಯ. ಇರಲಿ ಮುಂದೆ ಅಗಸ್ತ್ಯರು ಏನು ಮಾಡಿದರೆಂಬುದನ್ನು ನೋಡೋಣ.

ಅಗಸ್ತ್ಯ ಮಹಾಮುನಿಗಳು ತಮ್ಮ ಪರ್ಣಕುಟೀರಕ್ಕೆ ಕರೆತಂದು , ಅವರಿಗೆ ಫಲ, ಮೂಲ, ಪುಷ್ಪಗಳನ್ನು ತರಿಸಿಕೊಟ್ಟ ತಾವು ಇಟ್ಟಿರುವ ಶಸ್ತ್ರಾಸ್ತ್ರಗಳ ಕೊಠಡಿಗೆ ಕರೆದೊಯ್ದರು, ಅಗಸ್ತ್ಯ ಮುನಿಗಳು ಅವುಗಳನ್ನೆಲ್ಲಾ ತೋರಿಸಿ ಹೀಗೆ ಹೇಳಿದರು. "ಎಲೈ ರಾಮ, ಸುವರ್ಣ ರತ್ನಗಳಿಂದ ಭೂಷಿತವಾದ ಈ ದಿವ್ಯ ಚಾಪವನ್ನು ನೋಡು ಇದು ವಿಷ್ಣುವಿನ ಚಾಪ ವಿಶ್ವಕರ್ಮನೇ ನಿರ್ಮಿಸಿದ್ದು, ಸೂರ್ಯನಂತೆ ಬೆಳಗುವ ಈ ಅಮೋಘಾಸ್ತ್ರವು ಬ್ರಹ್ಮದತ್ತವಾದದ್ದು, ಈ ಎರಡು ಬತ್ತಳಿಕೆಗಳನ್ನು ಇಂದ್ರನು ನನಗೆ ಕೊಟ್ಟಿದ್ದಾನೆ. ಇವುಗಳಲ್ಲಿರುವ ಬಾಣಗಳು ಅಕ್ಷಯವಾದವು. ಬೆಂಕಿಯಂತೆ ಬೆಳಗುವ ಬಾಣಗಳಿಂದ ಇವು ತುಂಬಿವೆ. ಈ ಚಿನ್ನದ ಒರೆಯಲ್ಲಿ ಚಿನ್ನದ ಹಿಡಿಕೆಯುಳ್ಳ ಖಡ್ಗವಿದೆ. ಇದನ್ನು ಪೂರ್ವದಲ್ಲಿ ವಿಷ್ಣುವು ಈ ಧನುಸ್ಸನ್ನು ಹಿಡಿದು ಯುದ್ಧ ನೋಡಿ ಮಹಾದೈತ್ಯರನ್ನು ಸಂಹರಿಸಿದ್ದಾನೆ.ದೇವತೆಗಳಿಗೆ ಕಳೆದುಹೋದ ಐಶ್ವರ್ಯವನ್ನು ದೊರಕಿಸಿಕೊಟ್ಟಿದ್ದಾನೆ.

ಎಲೈ ವೀರಾಗ್ರಣಿ, ಇದು ವಿಷ್ಣುವು ಉಪಯೋಗಿಸಿದ ಅದೇ ಧನಸ್ಸು, ಅದೇ ಬತ್ತಳಿಕೆಗಳು, ಅದೇ ಬಾಣ, ಅದೇ ಖಡ್ಗ ಇವುಗಳನ್ನು ಸ್ವೀಕರಿಸು. ನಿನಗೆ ವಿಜಯವಾಗಲಿ, ದೇವೇಂದ್ರ ನಲ್ಲಿ ವಜ್ರಾಯುಧವಿರುವಂತೆ ಈ ಆಯುಧ ಸಾಮಾಗ್ರಿಯು ನಿನ್ನ ವಶದಲ್ಲಿರಲಿ,ಎಂದು ಹೇಳಿ ಶಸ್ತ್ರಾಸ್ತ್ರಗಳನ್ನು ಶ್ರೀರಾಮನಿಗೆ ಒಪ್ಪಿಸಿದರು.ಘನತೆ ಘನತೆಯನ್ನು ಗೌರವಿಸುವುದು ಸಹಜವೇ ತಾನೇ ಶ್ರೀರಾಮನು ಅತ್ಯಂತ ಸಂತುಷ್ಟನಾಗಿ ಎಲ್ಲ ಶಸ್ತ್ರಾಸ್ತ್ರಗಳನ್ನು ತನ್ನ ವಶದಲ್ಲಿ ಇಟ್ಟುಕೊಂಡನು.

ಇನ್ನೊಂದು ಮುಖ್ಯವಾದ ಸಂಗತಿಯೆಂದರೆ ಶ್ರೀರಾಮ ರಾವಣನೊಡನೆ ಯುದ್ಧ ಮಾಡಿ ಬಳಲಿ, ಜಯೋಪಾಯವನ್ನು ಕಾಣದೆ ಚಿಂತಾಕ್ರಾಂತನಾಗಿದ್ದಾಗ ಅಗಸ್ತ್ಯರು ಅಲ್ಲಿಗೆ ಬಂದು ಸೂರ್ಯೋಪಾಸನೆಯಿಂದ ರಾಮನಿಗೆ ಜಯಲಭಿಸುವುದೆಂದು ಭರವಸೆಕೊಟ್ಟು ರಾಮನಲ್ಲಿ ಧೈರ್ಯವನ್ನು ತುಂಬಿದ ಪ್ರಸಂಗ. ಇದೇ ಜಗತ್ ಪ್ರಸಿದ್ಧವಾದ ಅಗಸ್ತ್ಯರು ಉಪದೇಶಿಸಿದ ' ಆದಿತ್ಯ ಹೃದಯ ಸ್ತೋತ್ರ ಶ್ರೀರಾಮನು ಅಗಸ್ತ್ಯರಿಂದ ಉಪದೇಶ ಪಡೆದ ಬಳಿಕ ತ್ರಿರಾಚಮ್ಯ ಶುಚೀರ್ಭೂತ್ವಾ ಧನುರಾದಾಯ ವೀರ್ಯ ವಾನ್ - ಅಂದರೆ ಮೂರು ಸಲ ಆಚಮನ ಮಾಡಿ ಧನಸ್ಸನ್ನು ಕೈಗೆ ತೆಗೆದುಕೊಂಡನು. ಆದಿತ್ಯ ಹೃದಯವನ್ನು ಹೇಳಿದನು.

ನಂತರ ವಿಜಯೋನ್ಮುಖನಾದನು.ನಂತರ ರಾವಣ ನನ್ನು ವಧಿಸಿ ವಿಜಯಿಯಾದನು.ಇಂದಿಗೂ"ಆದಿತ್ಯ ಹೃದಯ ಸ್ತೋತ್ರ"ವನ್ನು ಪಠಿಸಿದರೆ ಜಯ ಖಂಡಿತ ಎಂದು ಎಲ್ಲರ ಅಭಿಪ್ರಾಯವಾಗಿದೆ. ಅಂತಹ ಪವಿತ್ರಶ್ಲೋಕವನ್ನು ನಾವೂ ಪ್ರತಿ ನಿತ್ಯವೂ ಪ್ರಾತಃ ಕಾಲದಲ್ಲಿ ಪಠಿಸೋಣ.


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 9-00 ರಿಂದ 10-00 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಶ್ರೀ ವಾದಿರಾಜರು ಮತ್ತು ತೀರ್ಥ ಪ್ರಬಂಧ

– ಡಾ॥ ರಾಮಚಂದ್ರದಾಸ್ .ಸಿ.ಜೆ.
94833 84584

ಕನ್ನಡ ಹರಿದಾಸಸಾಹಿತ್ಯದ ಪ್ರಾರಂಭದ ಹಂತ
ದಲ್ಲಿ ಅದನ್ನು ಬೆಳೆಸಿ ಪೋಷಿಸಿದ ಯತಿತ್ರಯ ಮಹನೀ
ಯರಲ್ಲಿ ಶ್ರೀ ವಾದಿರಾಜರೂ ಒಬ್ಬರು. ಮಾಧ್ವಪರಂ ಪರೆ
ಯಲ್ಲಿ ಇವರಿಗೆ ವಿಶೇಷ ಸ್ಥಾನವಿದೆ."ಕುಡುಮ" ಎಂಬ
ಊರಿನಲ್ಲಿ ಶ್ರೀ ಮಂಜುನಾಥನನ್ನು ಪ್ರತಿಷ್ಠಾಪಿಸಿ, ಆ
ಕ್ಷೇತ್ರವನ್ನು "ಧರ್ಮಸ್ಥಳ"ಎಂದು ನಾಮಕರಣ ಮಾಡಿ
ದವರು ಶ್ರೀ ವಾದಿರಾಜರು. ಕೋಟೇಶ್ವರದ ಬ್ರಾಹ್ಮಣರನ್ನು
ತಮ್ಮ ಮಠದ ಶಿಷ್ಯರನ್ನಾಗಿಸಿ ಪುರಸ್ಕರಿಸಿದ ಔದಾರ್ಯ
ಇವರದು.ಹರಿಭಕ್ತರಾಗಿದ್ದ ಶ್ರೀ ಕನಕದಾಸರನ್ನು ಪ್ರೀತ್ಯಭಿ
ಮಾನಗಳಿಂದ ಕಂಡು, ಸಾಮಾಜಿಕ ಕಳಕಳಿಯನ್ನು ವ್ಯಕ್ತ
ಪಡಿಸಿದವರು, ಶ್ರೀಮದಾಚಾರ್ಯರ ಬಳಿಕ ವಿವಿಧ ಕ್ಷೇತ್ರ
ಗಳಲ್ಲಿ ಮಹತ್ವಪೂರ್ಣ ಕೆಲಸಗಳನ್ನು ಮಾಡಿದವರಲ್ಲಿ
ಇವರು ಅಗ್ರಗಣ್ಯರು. ವಾದಿಗಳಿಗೆ ಮೃಗರಾಜ ನೋಪಾದಿ
ಯಲ್ಲಿದ್ದು, ನಿಗ್ರಹ ಮಾಡಿದ ಅನ್ವರ್ಥನಾಮಕರಿವರು,
ಶ್ರೀವಾದಿರಾಜರ ಗ್ರಂಥಗಳಲ್ಲಿ ವಿಷಯಕ್ಕೆ ತಕ್ಕ ಭಾಷೆ,
ಭಾಷೆಗೆ ತಕ್ಕ ಭಾವನೆಯಿದ್ದು,ಯುಕ್ತಿ ಬಲದಿಂದ ಸಿದ್ಧಾಂತ
ಸ್ಥಾಪನೆ ಮಾಡುವುದರಲ್ಲಿ ನಿಸ್ಸೀಮರು.ಇವರ ಜೀವನ



ದಲ್ಲಿ ಅಸಾಧಾರಣ ಸಂಗತಿಗಳು ಹೇರಳವಾಗಿ ಕಂಡು ಬರುತ್ತವೆ.
ಇವುಗಳಿಗೆ ದಾಸರ ಪದಗಳು, ಸುಳಾದಿಗಳು, ಸ್ತೋತ್ರಗಳೇ ಆಧಾರ.
ಋಜುಗಣಸ್ಥರು, ಭಾವೀ ಸಮೀರರು ಆದ ಶ್ರೀಲಾತವ್ಯ ನಾಮಕರು,
ಆಸ್ತಿಕರು, ಸಾತ್ವಿಕ ರನ್ನುದ್ಧರಿಸಲೋಸುಗ ಕ್ರಿ.ಶ. 1480 ರ ಶಾರ್ವರಿ
ಸಂವತ್ಸರದ ಮಾಘ ಶುದ್ಧ ದ್ವಾದಶಿಯಂದು, ರಾಮಾಚಾರ್ಯ ಮತ್ತು
ಗೌರಮ್ಮನವರ ಪುತ್ರರತ್ನರಾಗಿ, ಶ್ರೀವಾಗೀಶತೀರ್ಥರ ಪರಮಾನು
ಗ್ರಹದಿಂದ, ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲೂಕಿನ
ಕುಂಭಾಸಿ ಬಳಿಯಿರುವ "ಹೂವಿನಕೆರೆಯಲ್ಲಿ ಅವತರಿಸಿದ್ದು, ಆ
ಜಾಗಕ್ಕೆ ಗೌರಿಗದ್ದೆಯೆಂಬ ಹೆಸರಿದೆ. ಆ ಮಗುವಿಗೆ "ಭೂವರಾಹ"
ನೆಂದು ನಾಮಕರಣವಾಯಿತು. ಚೌಲೋಪನಯನದ ನಂತರ
ಶ್ರೀವಿದ್ಯಾನಿಧಿತೀರ್ಥರಲ್ಲಿ ವಿದ್ಯಾಭ್ಯಾಸಕ್ಕಾರಂಭವಾಯಿತು.
ಸಾಮಾನ್ಯ ಬಾಲಕರಿಗಿರುವಂತಹ ಜಿಹ್ವಾಚಾಪಲ್ಯ, ಕ್ರೀಡಾ ಚಾಪಲ್ಯ
ಇತ್ಯಾದಿಗಳಿರದೆ, ಕೇವಲ ಅಧ್ಯಾತ್ಮಿಕ ಭಾವವಾದ ಗುರು ಭಕುತಿ
ಬೇಕು! ಹಿರಿಯರ ಕರುಣಬೇಕು.ಹರಿ ಕಥೆಗಳು ನಿತ್ಯ ಕೇಳು ತಿರ
ಬೇಕು. ವಿರಕುತಿ ಬೇಕು ವಿಷ್ಣುವಿನಾರಾಧನೆ ಬೇಕು। ವರಮಂತ್ರ
ಜಪಬೇಕು,ತಪಬೇಕು ಪರಗತಿಗೆ! ಶ್ರೀ ಹಯವದನನ ಪರಮಾನು
ಗ್ರಹ! ಬೇಕು ವಿಷಯ ನಿಗ್ರಹಬೇಕು! ಎಂಬ ಎಲ್ಲ ಗುಣಗಳೂ ಭೂ
ವರಾಹನಲ್ಲಿ ಮೇಳೈಸಿದ್ದವು.ಇವೆಲ್ಲವನ್ನರಿತ ವಾಗೀಶ ತೀರ್ಥರು
ಪೀಠದ ಮಹತ್ವ ಮತ್ತು ಹೊಣೆಗಾರಿಕೆಯನ್ನರಿತು, ಇದಕ್ಕೆ ಅಗತ್ಯ
ವಾಗಿರುವ ಸದ್ವಂಶ, ಸದ್ವಿದ್ಯೆ, ಸದ್ವರ್ತನಾ, ವಿರಕ್ತಿ, ಭಕ್ತಿ, ಉಪಾ
ಸನಾಶಕ್ತಿ ಇತ್ಯಾದಿ ಗುಣಗಳ ಗಣಿಯಾದ ಭೂವರಾಹನಿಗೆ ಸನ್ಯಾಸಾ
ಶ್ರಮವಿತ್ತು, ಅವರಿಗೆ "ಶ್ರೀವಾದಿ ರಾಜತೀರ್ಥ" ರೆಂದು ನಾಮಕರಣ
ಮಾಡಿ ತಮ್ಮ ಸಂಸ್ಥಾನದ ಉತ್ತರಾಧಿಕಾರಿಯನ್ನಾಗಿ ಮಾಡಿದರು.

ನಿಷ್ಕಪಟಿಯಾದ ಇವರ ತಾಯಿ ಗೌರಮ್ಮನು ಪುತ್ರೋ
ತ್ಸವಕ್ಕಾಗಿ ಮಾಡಿಕೊಂಡ ಲಕ್ಷಾಭರಣ ಸೇವೆಯನ್ನು ಶ್ರೀಗಳವರು
ಮಹಾಭಾರತಕ್ಕೆ "ಲಕ್ಷಾಲಂಕಾರ"ವೆಂಬ ಟೀಕೆಯನ್ನು ರಚಿಸಿ,
ತಾಯಿಯ ಹರಕೆಯನ್ನು ಪೂರೈಸಿದವರು.ಇದರ ಜೊತೆಗೆ ತೀರ್ಥ
ಪ್ರಬಂಧ, ರುಕ್ಮಿಣೀಶ ವಿಜಯ,ಯುಕ್ತಿಮಲ್ಲಿಕಾದಿ ಸಂಸ್ಕೃತ ಗ್ರಂಥ
ಗಳನ್ನು ಹಾಗೆಯೇ ಲಕ್ಷ್ಮೀ ಶೋಭಾನೆ, ವೈಕುಂಠ ವರ್ಣನಾದಿ ಕನ್ನಡ
ಗ್ರಂಥಗಳನ್ನು ಜೊತೆಗೆ ಕೃತಿ ಸುಳಾದಿ ಇತ್ಯಾದಿಗಳನ್ನು ರಚಿಸಿ
ಸಾರಸ್ವತ ಲೋಕಕ್ಕೆ ನೀಡಿ ಅಪಾರ ಸೇವೆಸಲ್ಲಿಸಿದ್ದಾರೆ. ತುಳು ಭಾಷೆ
ಯಲ್ಲಿಯೂ ಕೆಲವು ಕೃತಿ ಇತ್ಯಾದಿಗಳನ್ನು ರಚಿಸಿದ್ದಾರೆ. ಪಂಢರ


ಪುರದಲ್ಲಿ ರೈತನೊಬ್ಬನಿಗೆ ಹಯಮುಖನ ದರ್ಶನ ಮಾಡಿಸಿದವರು, ಶ್ರೀಸೂಕ್ತ ಮಂತ್ರದಿಂದ ಸುವರ್ಣವೃಷ್ಠಿ ಕರೆಸಿ ಬ್ರಾಹ್ಮಣನ ದಾರಿದ್ರ್ಯ ಪರಿಹರಿಸಿದರು. ಕುಮಾರಧಾರಾ,ನೇತ್ರಾವತಿ ನದಿಗಳ ಸಂಗಮ ಸ್ಥಾನವಾದ ಕಟೀ ಶಿವಾಲಯದಲ್ಲಿ ದಂಡತೀರ್ಥ ನಿರ್ಮಾಣ ಮಾಡಿದರು. ವಾದಿರಾಜರು ನೀಡಿದ ಮಂತ್ರಾಕ್ಷತೆ ಮಹಿಮೆಯಿಂದ, ಕೈತಪ್ಪಿ ಹೋಗುತ್ತಿದ್ದ ಸ್ವಾದಿ ಸಂಸ್ಥಾನವು ಪುನಃ ಅರಸಪ್ಪನಾಯಕನಿಗೆ ದೊರೆಯಿತು. ಅಲ್ಪಾಯುವಾಗಿದ್ದ ಆತನ ಅಳಿಯನನ್ನು,ಲಕ್ಷ್ಮೀ ಶೋಭಾನೆ ಪದ ರಚಿಸಿ ಶ್ರೀ ಹರಿಯ ಕರುಣದಿಂದ ಬದುಕಿಸಿದರು. ಉಡುಪಿಯ ಪರ್ಯಾಯ ಪದ್ಧತಿಯಲ್ಲಿ ಬದಲಾವಣೆಗಳನ್ನು ತಂದರು. ಬದರಿಕಾಶ್ರಮದಿಂದ ಶ್ರೀ ತ್ರಿವಿಕ್ರಮ ಮೂರ್ತಿಯನ್ನು ನಾರಾಯಣ ಭೂತನಿಂದ ತರಿಸಿ, ಧವಳಗಂಗೆಯನ್ನು ನಿರ್ಮಾಣ ಮಾಡಿ ಮಹಾಲಿಂಗನನ್ನು ಅದರ ದಡದಲ್ಲಿ ಸ್ಥಾಪಿಸಿ, ಶಾ.ಶಕ 1504 ನೇ ಚಿತ್ರಭಾನು ಸಂವತ್ಸರದ ವೈಶಾಖ ಶುದ್ಧ ಪೂರ್ಣಿಮಾ ದಿವಸ ಪ್ರತಿಷ್ಠಾಪಿಸಿದವರು. ಇವರು ನಾಲ್ಕು ಪರ್ಯಾಯಗಳನ್ನು ಪೂರೈಸಿ, ಐದನೇ ಪರ್ಯಾಯವನ್ನು ತಮ್ಮ ಸಂಸ್ಥಾನದ ಉತ್ತರಾಧಿಕಾರಿಯಾಗಿದ್ದ ಶ್ರೀ ವೇದ ವೇದ್ಯರ ಮೂಲಕ ಮಾಡಿಸಿದರು.

### ತೀರ್ಥ ಪ್ರಬಂಧ

ತೀರ್ಥ ಕ್ಷೇತ್ರಗಳಿಗೆ ಹೋಗುವ ಯಾತ್ರೆಯು ಮೋಜಿಗಾಗಿ ಮಾಡುವ ಪ್ರವಾಸವಾಗಿರಬಾರದು. ಅದು ಭಗವದ್ಭಕ್ತಿಗೆ ಸಾಧನವಾಗಿರಬೇಕೆಂದು ತಿಳಿಸುವ ಖಂಡ ಕಾವ್ಯವೇ "ತೀರ್ಥ ಪ್ರಬಂಧ." ಶ್ರೀವಾದಿರಾಜರು ಭಾರತ ದೇಶಾದ್ಯಂತ ಸಂಚರಿಸಿ ರಚಿಸಿದ ಲಘು ಕಾವ್ಯ. ಶ್ರೀ ರಾಜರು, ಸಂಚಾರವನ್ನು ರಜತ ಪೀಠಪುರದಿಂದ ಪ್ರಾರಂಭಿಸಿ ಪಶ್ಚಿಮದ ಪುಷ್ಕರದವರೆಗೆ, ಕೃಷ್ಣಾ ನದಿಯಿಂದಾರಂಭಿಸಿ ಉತ್ತರದ ತುತ್ತ ತುದಿಯ ಬದರೀ ಕ್ಷೇತ್ರದವರೆಗೆ, ಪೂರ್ವದ ಪುರಿಜಗನ್ನಾಥದಿಂದಾರಂಭಿಸಿ ದಕ್ಷಿಣ ಪೂರ್ವದ ಕುಂಭ ಕೋಣದವರೆಗೆ, ದಕ್ಷಿಣದಲ್ಲಿ ಶ್ರೀರಂಗದಿಂದಾರಂಭಿಸಿ ಅನಂತ ಶಯನದವರೆಗೆ ಮಾಡಿದ ಯಾತ್ರಾ ಕ್ರಮವನ್ನು ಅನುಸರಿಸಿಯೇ ಅಯಾ ದಿಕ್ಕುಗಳಲ್ಲಿರುವ ತೀರ್ಥ ಕ್ಷೇತ್ರಗಳ ಮಹಿಮೆಗಳನ್ನು,ಪಶ್ಚಿಮ,ಉತ್ತರ, ಪೂರ್ವ ಮತ್ತು ದಕ್ಷಿಣ ಪ್ರಬಂಧಗಳಾಗಿ ವಿಂಗಡಿಸಿ ಒಟ್ಟು 235 ಶ್ಲೋಕಗಳಲ್ಲಿ ವರ್ಣಿಸಿದ್ದಾರೆ. ಈ ಪ್ರಬಂಧದ ಪ್ರಾರಂಭದಲ್ಲಿ ಅವರು ಪ್ರತಿಜ್ಞೆ ಮಾಡುತ್ತಾ, ಭಾರತ ದೇಶದಲ್ಲಿರುವ ಪವಿತ್ರಗಂಗಾದಿ ತೀರ್ಥಗಳ ಮತ್ತು ಕ್ಷೇತ್ರಗಳ ಚರಿತ್ರೆಯನ್ನು ಪೌರಾಣಿಕ ಮತ್ತು ಐತಿಹಾಸಿಕ ದೃಷ್ಠಿಯಿಂದ ಯಥಾಮತಿ ವರ್ಣಿಸುವುದಾಗಿ ಹೇಳಿ, ಗ್ರಂಥಸ್ತ ವಿಷಯದ ಸ್ಥೂಲ ಪರಿಚಯವನ್ನು ಮಾಡಿಕೊಡುತ್ತಾ, ಪುರಾಣಗಳು, ವೇದೋಪನಿಷತ್‌ಗಳಲ್ಲಡಗಿರುವ ವಿಷಯಗಳಿಂದ, ತೀರ್ಥಾಭಿಮಾನಿ ಮತ್ತು ಕ್ಷೇತ್ರಾಭಿಮಾನಿ ದೇವತೆಗಳ ಮತ್ತು ಅವರೆಲ್ಲರಂತರ್ಯಾಮಿಯಾದ ಭಗವಂತನ ಮಹಿಮೆ ಮತ್ತು ಅನುಗ್ರಹದಿಂದ ಹೇಗೆ ಪ್ರಭಾವಿತವಾಗಿವೆಂಬುದನ್ನು ಅಧ್ಯಾತ್ಮದ ಹಿನ್ನೆಲೆಯಲ್ಲಿ, ಸಂಕ್ಷಿಪ್ತ, ಸ್ವಾರಸ್ಯ ಹಾಗೂ ಹೃದಯಂಗಮವಾಗಿ ವರ್ಣಿಸಿದ್ದಾರೆ. ತೀರ್ಥ ಕ್ಷೇತ್ರಗಳ ಹೆಸರಿನ ಇತಿಹಾಸವನ್ನು ಮೂಲ ಶೋಧನೆಯಿಂದಲೇ ಕೊಟ್ಟು, ಅವುಗಳ ಮಹತ್ವಕ್ಕೆ ಪರಮಾತ್ಮನ ಮತ್ತು ಪರಿವಾರ ದೇವತೆಗಳ ಸನ್ನಿಧಾನ ವಿಶೇಷವೇ ಕಾರಣ, ಅಧ್ಯಾತ್ಮ ತತ್ವ ನಿಷ್ಠರಾಗಿ ತೀರ್ಥಕ್ಷೇತ್ರ ಸಂಚಾರ ಮಾಡುವವರಿಗೆ ಇದೊಂದು ಮಾರ್ಗದೀಪಿಕೆ,ಮಾರ್ಗದರ್ಶಿಕೆಯಾಗಿರುವ ಒಂದು ಕೈಗನ್ನಡಿಯಂತಿದೆ. ಇದು ಅಧ್ಯಾತ್ಮ ಜಿಜ್ಞಾಸುಗಳಿಗೂ ಮತ್ತು ಇತಿಹಾಸ ಸಂಶೋಧಕರಿಗೂ, ಪ್ರವಾಸಿ ಸಾಹಿತ್ಯದ ಒಂದು ಕಾವ್ಯದಂತಿದ್ದು, ಗೂಢಾರ್ಥ ಮತ್ತು ಶಾಸ್ತ್ರ ಪ್ರಮೇಯಗಳಿಂದ ಕೂಡಿದೆ. ಈ ಗ್ರಂಥಕ್ಕೆ ವಾದಿರಾಜರ ಸಾಕ್ಷಾತ್ ಶಿಷ್ಯರಾದ ಶ್ರೀನಾರಾಯಣಚಾರ್ಯ ಎನ್ನುವರು "ಗುರುಭಾವ ಪ್ರಕಾಶಿಕಾ" ಎಂಬ ವ್ಯಾಖ್ಯಾನವನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ.

ಶ್ರೀವಾದಿರಾಜರು ಈ ಗ್ರಂಥದ ಪೂರ್ವ ಪ್ರಬಂಧದಲ್ಲಿ ತಿರುಪತಿ (ವೇಂಕಟಾಚಲ ಕ್ಷೇತ್ರ) ಯನ್ನು ವರ್ಣಿಸಿದ್ದಾರೆ. ಈ ಬೆಟ್ಟವು ಶಾಲಿಗ್ರಾಮ ಶಿಲಾಮಯವಾಗಿ ಕಂಡಿದ್ದರಿಂದ ಪಾದದಿಂದ ತುಳಿಯದೆ, ಮೊಣಕಾಲಿನಿಂದ ಅವರು ಹತ್ತಿರುವುದಾಗಿ ಚರಿತ್ರೆಯಲ್ಲಿ ಉಕ್ತವಾಗಿದೆ. ತನ್ನ ಭಕ್ತರು ಶಂಖ ಚಕ್ರಾದಿಗಳನ್ನು ಧಾರಣ ಮಾಡುತ್ತಿರುವುದರಿಂದ, ಅವರಿಗೆ ಸಂಸಾರ ಸಾಗರವು ಸೊಂಟಮಟ್ಟದ್ದಾಗಿ ದಾಟಲು ಸುಲಭವಾಗಿ, ಅವರನ್ನು ರಕ್ಷಿಸಲೋಸುಗವೊ ಎಂಬಂತೆ ತೋರುತ್ತ ಅಭಯ ಹಸ್ತನಾಗಿ ವೆಂಕಟಾಚಲ ಪರ್ವತದಲ್ಲಿ ನೆಲೆಸಿದ್ದಾನೆ ಎಂದು ವರ್ಣಿಸಿದ್ದಾರೆ, ವಾದಿರಾಜರು, ಭರತ ಭೂಮಿಯನ್ನು 3 ಬಾರಿ ಸಂಚರಿಸಿ, ಪಾಮರರನ್ನು ಉದ್ಧರಿಸಿದ ಮಹಾಮಹಿಮರು.

ಶ್ರೀವಾದಿರಾಜರು,ಬ್ರಹ್ಮ,ವಿಷ್ಣು,ರುದ್ರದೇವರು ಮತ್ತು ವಾಯುದೇವರೆಂದು ತಿಳಿಸುತ್ತಾ (ಪ್ರದ್ಯುಮ್ನ, ಸಂಕರ್ಷಣ, ವಾಸುದೇವ ಮತ್ತು ನಾರಾಯಣ) ಸನ್ನಿಧಾನಯುಕ್ತ ನಾಲ್ಕು ವೃಂದಾ ವನಗಳ ಮಧ್ಯದಲ್ಲಿ ಮತ್ಸ್ಯಾದಿ ದಶಾವತಾರಾದಿಗಳಿಂದ ಶೋಭಾಯ ಮಾನವಾದ ದೊಡ್ಡದಾದ ವೃಂದಾವನದಲ್ಲಿ, ಸಶರೀರರಾಗಿ ಶಾ.ಶಕ. 1522 ರ (ಕ್ರಿ.ಶ.-1600) ಶಾರ್ವರೀ ಸಂವತ್ಸರದ ಫಾಲ್ಗುಣ ಬಹುಳ ತೃತೀಯಾ ದಿವಸದಂದು, ಪ್ರವೇಶ ಮಾಡಿ ತಮ್ಮ 120 ವರ್ಷಗಳ ಜೀವನ ಯಾತ್ರೆಯನ್ನು ಪೂರ್ಣ ಮಾಡಿದರು,ಇಂದಿಗೂ ಆ ವೃಂದಾವನದಲ್ಲಿದ್ದು ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ.



# ಕಲಿಯುಗ ಕಲ್ಪತರು ಶ್ರೀರಾಘವೇಂದ್ರರ 400 ನೇ ಪಟ್ಟಾಭಿಷೇಕ

- ಡಾ॥ ಪ್ರದೀಪ್‌ಕುಮಾರ್ ಹೆಬ್ರಿ
9844018457

ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರು ಶ್ರೀಮನ್ಮಧ್ವಾಚಾರ್ಯರ ವೇದಾಂತ ವಿದ್ಯಾಸಾಮ್ರಾಜ್ಯದ ಚಕ್ರ ವರ್ತಿಗಳೆಂದು ಶ್ರೀಸುಧೀಂದ್ರ ತೀರ್ಥ ರಿಂದ ಆಶೀರ್ವದಿಸಲ್ಪಟ್ಟ ಸುದಿನದ ೪೦೦ ನೇ ದಿವ್ಯ ಮಹೋತ್ಸವವಿಂದು. ಶ್ರೀ ಶಾಲಿ ವಾಹನ ಶಕೆ ೧೫೪೩ ನೇ ದುರ್ಮತಿ ನಾಮ ಸಂವತ್ಸರದ ಫಾಲ್ಗುಣ ಶುಕ್ಲ ಬಿದಿಗೆಯ ಶುಭದಿನದಂದು ಶ್ರೀ ಸುಧೀಂದ್ರ ತೀರ್ಥರು,ಶ್ರೀ ರಾಘವೇಂದ್ರತೀರ್ಥ, ಶ್ರೀಪಾದಂಗಳವರ ಶಿರದ ಮೇಲೆ ಸುವರ್ಣಮಯ ತಟ್ಟೆಯಲ್ಲಿ ಶ್ರೀರಾಮ-ಕೃಷ್ಣ-ವೇದವ್ಯಾಸ ಪ್ರತಿಮೆಗಳು, ಸಾಲಿಗ್ರಾಮ,ಪ್ರತಿಮೆಗಳನಿಟ್ಟು ಋಗ್ವೇದಾದಿ ಮಂತ್ರಗಳಿಂದ ಪವಿತ್ರವಾದ ಕಮಲಾದಿ ಪುಷ್ಪಗಳು,ಮೌಕ್ತಿಕಗಳು, ನವರತ್ನಗಳನ್ನು ಅನೇಕ ಶಂಖಗಳಲ್ಲಿ ತುಂಬಿ, ಪವಿತ್ರೋದಕ ಸಹಿತವಾಗಿ ಅಭಿ ಷೇಕ ಮಾಡಿದ್ದರು. ಪುರುಷ ಸೂಕ್ತ ಪಠಿಸಿದ್ದರು.ಸಮಸ್ತ ಪಂಡಿತ ಮಂಡಲಿಯೂ ಭಕ್ತಿಯಿಂದ ಜಯಘೋಷ ಮಾಡಿತ್ತು. ಪರಮ ಸುಂದರ ಭವ್ಯಾಕೃತಿಯ ಗುರುಸಾರ್ವಭೌಮರು ಮಂದಹಾಸದಿಂದ ಅಭಯಹಸ್ತ ಪ್ರದರ್ಶಿಸಿ, ನಿಮೀಲಿತಾರ್ಧ ನಯನರಾಗಿ ಪದ್ಮಾಸನಾಸೀನರಾಗಿದ್ದರು.

"“ಕಲಿಯುಗ ಕಲ್ಪತರು” ಎಂದೇ ಖ್ಯಾತರಾದ ಜಗದ್ಗುರು ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರನ್ನು ಮನಸಾರೆ ನೆನೆಯೋಣ.:-

ನಮ್ಮೀ ಭಾರತದಲ್ಲಿ ಸಕಲ ವಿದ್ಯೆಗಳಿಗೆ ಷಾಷ್ಟಿಕ ವಂಶವು ತವರು ಮನೆಯೆನಿಸಿದೆ. ಈ ಷಾಷ್ಟಿಕವಂಶದ ಗೌತಮಗೋತ್ರದ 'ಬೀಗಮುದ್ರೆ' ಮನೆತನದಲ್ಲಿ ಗುರು ಸಾರ್ವಭೌಮರು ಅವತರಿಸಿದರು.

ಕೃಷ್ಣದೇವರಾಯ ವಿಜಯನಗರದರಸನಾಗಿದ್ದ ಸಮಯದಲ್ಲಿ ಕನ್ನಡ ಸಾಮ್ರಾಜ್ಯದ ವಿವಿಧ ಭಾಗಗಳಲ್ಲಿ ವಿವಿಧ ಗೋತ್ರ - ವಂಶಗಳಲ್ಲಿ ಜನಿಸಿದ ಷಾಷ್ಟಿಕ ಮನೆತನದವರು ನೆಲೆಸಿದ್ದರು. ಈ ಮನೆತನದ ಶ್ರೀಕೃಷ್ಣಾಚಾರ್ಯ ಎಂಬುವವರು ನ್ಯಾಯ ವೇದಾಂತಾದಿ ಅಧ್ಯಯನಿಯಾ,ಗಾಂಧರ್ವಕಲೆಯ ಮಹಾ ವಿದ್ವಾಂಸರೂ ಆಗಿದ್ದರು.ಇವರಿಗೆ ವೀಣಾಕೃಷ್ಣಾಚಾರ್ಯ ಎಂಬ ಹೆಸರಿತ್ತು.ಇವರಲ್ಲೇ ರಾಜ ಶ್ರೀಕೃಷ್ಣದೇವರಾಯ ವೀಣಾವಾದನ ಕಲಿತಿದ್ದರು.ಕೃಷ್ಣಾಚಾರ್ಯರಿಗೆ ಸರ್ವಶ್ರೇಷ್ಠ ಕಲಾವಿದನನ್ನು ತಯಾರು ಮಾಡಿದ ತೃಪ್ತಿಯಿತ್ತು.

ಶ್ರೀಕೃಷ್ಣಾಚಾರ್ಯರಿಗೆ ವಿವಾಹವಾಗಿ ಬಹು ವರ್ಷಗಳಾಗಿತ್ತು. ಸಂತಾನ ಭಾಗ್ಯ ಇರಲಿಲ್ಲ ದುಃಖಿತರಾಗಿದ್ದರು. ಕೊನೆಗೂ ಭಗವಂತನ ಅನುಗ್ರಹದಿಂದ ಅವರ ಸಹಧರ್ಮಿಣಿ ರುಕ್ಮಿಣಿಬಾಯಿ ಗರ್ಭಧರಿಸಿದರು. ಜನಿಸಿದ ಮಗುವಿಗೆ “ಕನಕಾಚಲಾಚಾರ್ಯ”ಎಂದು ನಾಮಕರಣ ಮಾಡಿದರು.ಈತ ಸಕಲವಿದ್ಯಾಪಾರಂಗತನಾಗಿ ಗುರು ಹಿರಿಯರ ಹೆತ್ತವರ ಅಭಿಮಾನಕ್ಕೆ ಪಾತ್ರನಾದನು.ಇವರ ಸಹಪಾಠಿ ಶ್ರೀವ್ಯಾಸ ರಾಜರ ಬಹಿಃ ಪ್ರಾಣದಂತಿದ್ದು ಮುಂದೆ ಶ್ರೀವಿಜಯೀಂದ್ರತೀರ್ಥರೆಂದು ಪ್ರಸಿದ್ಧರಾದ ವಿಷ್ಣು ತೀರ್ಥರು.ಸಂಸಾರಿಗಳಾದ ಶ್ರೀಕನಕಾಚಲಾಚಾರ್ಯ ದಂಪತಿಗಳ ಸುಪುತ್ರ ತಿಮ್ಮಣ್ಣ.

ತಿಮ್ಮಣ್ಣನೂ ಸರ್ವ ವಿದ್ಯಾಪಾರಂಗತನಾದನು.ಆದರೆ ವಿಜಯನಗರ ಸಾಮ್ರಾಜ್ಯ ಅವನತಿ ಕಂಡಿತು, ನಾಮಾವಶೇಷವಾಯಿತು, ರಾಜಧಾನಿ ಅನಾಥವಾಯಿತು.ಕನಕಾಚಲಾಚಾರ್ಯರು ತಮ್ಮ ಸಂಸಾರ,ಬಂಧು ಬಾಂಧವರೊಂದಿಗೆ ಉಟ್ಟಬಟ್ಟೆಯಲ್ಲಿ ವಿಜಯನಗರವನ್ನು ತ್ಯಜಿಸಿ ಕುಂಭಕೋಣದತ್ತ ತೆರಳಿದರು.

ಕುಂಭಕೋಣದ ವಿದ್ಯಾ ಮಠದಲ್ಲಿ ಶ್ರೀವಿಜಯೀಂದ್ರ ತೀರ್ಥರ ಆಶ್ರಯ ಪಡೆದರು. ತಿಮ್ಮಣ್ಣನಿಗಾಗಿ ಮೂರರ ಹರೆಯ. ದಿನಗಳು ಉರುಳುತ್ತಿದ್ದಂತೆ ತಿಮ್ಮಣ್ಣ ಸಕಲ ವೇದ ಶಾಸ್ತ್ರಗಳೊಡನೆ ವೀಣಾ ವಾದನದಲ್ಲಿ ಪಾರಂಗತನಾದನು. ಪಾಂಡಿತ್ಯ ಪ್ರತಿಭಾದಿಗಳಿಂದ ಪ್ರಖ್ಯಾತನಾದನು, ತಿಮ್ಮಣ್ಣಾಚಾರ್ಯ ಎನಿಸಿದರು.

ಕ್ರಿ.ಶ. ೧೫೭೦ ರಲ್ಲಿ ತಿಮ್ಮಣ್ಣಾಚಾರ್ಯರ ವಿವಾಹ ಮಹೋತ್ಸವವು ಗೋಪಿಕಾಂಬಾ ದೇವಿಯೊಡನೆ ನೆರವೇರಿತು. ಸಮರಸದ ಬದುಕ ಸಾಗಿಸತೊಡಗಿದರು. ಆನೆಗೊಂದಿಯಲ್ಲಿ ಬದುಕು ಮುಂದುವರಿಯಿತು. ವಿವಾಹವಾಗಿ ಹತ್ತು ವರ್ಷಗಳಾದರೂ ಸಂತಾನವಾಗಿರಲಿಲ್ಲ. ಶ್ರೀನಿವಾಸ ದೇವರ ಸೇವೆಗೆ ಮುಂದಾದರು. ಭಗವಂತ ಅನುಗ್ರಹಿಸಿದ ಕಾರಣವಾಗಿ ಮೊದಲು ಮಗಳೂ ಮರುವರ್ಷ ಮಗನೂ ಜನಿಸಿದರು. ಮಗಳೇ 'ವೆಂಕಟಾಂಬಾ', ಮಗ 'ಗುರುರಾಜ' ಸುತೆಗೆ ಆರುವರ್ಷ ತುಂಬುತ್ತಿದ್ದಂತೆ ದಂಪತಿಗಳಿಗೆ ಮತ್ತೆ ಸಂತಾನದ ಆಸೆ ಉದಿಸಿತು. ತಿರುಪತಿಯ ಶ್ರೀನಿವಾಸ ದೇವರು ಕರುಣಿಸಿದ. ಶ್ರೀಶಾಲಿವಾಹನ ಶಕೆ ೧೫೧೭ ನೆಯ ಮನ್ಮಥನಾಮ ಸಂವತ್ಸರದ ಫಾಲ್ಗುಣ ಶುಕ್ಲ ಸಪ್ತಮೀ ಗುರುವಾರ (ಕ್ರಿ.ಶ. ೧೫೯೫) ಮೃಗಶಿರಾ ನಕ್ಷತ್ರದಲ್ಲಿ ಶುಭ ಗ್ರಹಗಳು ಉಚ್ಚವಾಗಿರಲು ಚಂದ್ರ ಮತ್ತು ಬೃಹಸ್ಪತ್ಯಾದಿ ಗ್ರಹಗಳು ಪೂರ್ಣ ದೃಷ್ಟಿಯುಳ್ಳ ಶುಭ 'ಲಗ್ನದಲ್ಲಿ ಸ್ವರ್ಗಾಧಿಪತಿಯಾದ ದೇವೇಂದ್ರ ಸಂಬಂಧಿಯಾದ ಪೂರ್ವ ದಿಗಂಗನೆಯು ಉಡು ರಾಜನಾದ ಚಂದ್ರನನ್ನೂ ಪ್ರಸಾದಿಸಿದಂತೆ ಗೋಪಿಕಾಂಬಾದೇವಿ ಅಖಿಲ ದ್ವಿಜರಾಜ ವಂದನೀಯ ಪಾದಾರವಿಂದನಾದ ಸುತನನ್ನು ಪ್ರಸಾದಿಸಿದರು.

ಜಗತ್ತಿನ ಅಜ್ಞಾನ ಕತ್ತಲೆಯನ್ನು ಪರಿಹರಿಸುವ ದಿನಮಣಿ ಉದಯಿಸಿದನು. ಶ್ರೀಮನ್ಮಧ್ವಾಚಾರ್ಯರ ವಂಶಸುಧಾಬ್ಧಿ ಚಂದ್ರ ಮನ ಅವತಾರವಾಯಿತು. ಜಗತ್ಕಲ್ಯಾಣಕಾರಕ, ಜಗದ್ವಂದ್ಯ, ಪರಮಮಂಗಳ ಮೂರ್ತಿ ಶ್ರೀರಾಘ ವೇಂದ್ರಗುರು ಸಾರ್ವಭೌಮರು ಅವತರಿಸಿದರು! ಭೂಮಂ ಡಲದ ಭಾಗ್ಯ ರವಿ ಧರೆಗಿಳಿದು ಬಂದನು ಜಗತ್ತಿನ ಕಲ್ಯಾಣದ ನಾಂದಿಯಾಯಿತು.

ಮಗುವಿಗೆ ವೇಂಕಟನಾಥಾಚಾರ್ಯ ಎಂದು ಹೆಸರಿಟ್ಟರು ವೇಂಕಟನಾಥ ದಿನೇದಿನೇ ಶರತ್ಕಾಲೀನ ಚಂದ್ರನಂತೆ ವರ್ಧಿಸಿದನು. ಬಾಲಸಹಜ ಲೀಲೆಗಳಿಂದ ಹೆತ್ತವರನ್ನು ಮುದಗೊಳಿಸುತ್ತಿದ್ದನು. ದಿನಗಳು ಉರುಳುತ್ತಿದ್ದಂತೆ ಅದ್ಭುತ ಬುದ್ಧಿಶಕ್ತಿ, ಪ್ರತಿಭೆ, ಸ್ವಾತಿಕ ಲೀಲೆಗಳಿಂದ ಸರ್ವರನ್ನೂ ಆನಂದದ ಲೋಲಾಡಿಸುತ್ತ ಬೆಳೆಯತೊಡಗಿದನು. ಶ್ರೀ ಶಕೆ ೧೫೨೦ನೇಯ ಹೇವಿಳಂಬಿ ಸಂವತ್ಸರದ (ಕ್ರಿ.ಶ. ೧೫೯೮) ವೈಶಾಖ ಮಾಸದ ಒಂದು ಶುಭ ದಿನ ವೇಂಕಟನಾಥನ ಜ್ಞಾನಯಜ್ಞದ ಪ್ರಾರಂಭೋತ್ಸವ ಆಗ ಸೂರ್ಯದೇವ ತನ್ನ ಹೊಂಗಿರಣಗಳಿಂದ ಭವ್ಯ ಬೆಳಕನ್ನೂ ನೀಡುತ್ತಿದ್ದ ಅಕ್ಷರಾಭ್ಯಾಸದೊಡನೆ ವೀಣಾವಾದನ ಕಲಿಕೆಯೂ ಮುಂದುವರಿಯಿತು. ಒಂದೇ ವರ್ಷದಲ್ಲಿ ವೆಂಕಟನಾಥ ವಯಸ್ಸಿಗೆ ಮೀರಿದ ಪ್ರತಿಭೆಯಿಂದ ಸಂಸ್ಕೃತ ಕನ್ನಡಗಳಲ್ಲಿ ವಾಕ್ಯ ರಚನೆ ಮಾಡಿ ಬರೆಯುವುದರಲ್ಲಿ ಪ್ರವೀಣನಾದ. ತ್ರಿಕಾಂಡ ಅಮರ ಶಬ್ಧಗಳು. ಸಮಾಸ, ಧಾತುಗಳು, ಮಂತ್ರ ಸ್ತೋತ್ರಗಳಲ್ಲೂ ಪ್ರಾವೀಣ್ಯತೆ ಗಳಿಸಿದ.

ವೆಂಕಟಾಂಬೆಯ ಮದುವೆ ವಿಜೃಂಭಣೆಯಿಂದ ನೆರವೇರಿತು. ಗುರುರಾಜ ತಂದೆಯಲ್ಲಿ ವೇದಾದಿ ಅಧ್ಯಯನ ಮಾಡಿ ಪಂಡಿತನಾದನು. ಸಂಗೀತ ವೀಣಾವಾದನದಲ್ಲೂ ಪಾರಂಗತನಾದನು. ಮದುವೆಯೂ ಆದನು. ಸೋದರಮಾವನ ಮಗಳು ಕಮಲಾದೇವಿ ಸಹಧರ್ಮಿಣಿಯಾಗಿ ಮನೆ - ಮನ ತುಂಬಿದಳು. ವೇಂಕಟನಾಥ ತಂದೆಯಿಂದ 'ಗಾಂಧಾರಗ್ರಾಮ' ಸಂಗೀತ ವಿದ್ಯೆಯ ಉಪದೇಶ ಪಡೆದನು. ಗುರುರಾಜನ ಸಂಸಾರ ಆನಂದದಿಂದಿತ್ತು. ಸೊಸೆಮಗಳಾಗಿ ಪ್ರೀತ್ಯಾದರ ಪಾತ್ರಳಾದಳು ಆದರೆ ಕೆಲವೇ ಸಮಯದಲ್ಲಿ ತಿಮ್ಮಣ್ಣಾಚಾರ್ಯರು ಶ್ರೀಹರಿಪಾದ ಸೇರಿದರು. ವೇಂಕಟನಾಥನ ವಿದ್ಯಾಭ್ಯಾಸ ಮುಂದುವರಿಯಿತು. ಉಪನಯನವೂ ಆಯಿತು. ಶ್ರೀ ಶಾಲಿವಾಹನ ಶಕೆ ೧೫೨೪ ರ ಶುಭಕೃತು ಸಂವತ್ಸರದ ವೈಶಾಖ ಶುಕ್ಲ ಪಂಚಮೀ ದಿವಸ (ಕ್ರಿ.ಶ. ೧೬೦೨) ಗುರುರಾಜಾಚಾರ್ಯ ದಂಪತಿಗಳು ಶುಭಕಾರ್ಯ ನೆರವೇರಿಸಿದರು. ವೇಂಕಟನಾಥನ ವಿದ್ಯಾಭ್ಯಾಸ ಮಧುರೆಯಲ್ಲಿ ಮುಂದುವರಿಯತೊಡಗಿತು.

ವರ್ಷಗಳು ಉರುಳಿದವು ವೇಂಕಟನಾಥನಲ್ಲಿ ತಾರುಣ್ಯವು ಪಾದಾರ್ಪಣ ಮಾಡಿತು. ಸಕಲ ವಿದ್ಯೆಗಳ ಅಭಿಮಾನಿನಿ ಚತುರವದನನ ಪಟ್ಟದರಾಣಿ ವೀಣಾಪಾಣಿ ಸರಸ್ವತಿಯ ವೇಂಕಟನಾಥರಲ್ಲಿ ಸನ್ನಿಹಿತಳಾದಳು. ವೇಂಕಟನಾಥನಲ್ಲಿ ವಿದ್ಯೆಯ ಕಲೆಯು ಅಭಿವೃದ್ಧಿಸಿತು. ವೇಂಕಟನಾಥನು ರೂಪ-ಲಾವಣ್ಯ ಸೌಂದರ್ಯ ವಿರಾಜಿತನಾಗಿ, ನವತಾರುಣ್ಯದಿಂದ ಲೋಕ ಮೋಹಕನಾಗಿ ಶೋಭಿಸತೊಡಗಿದನು. ವೇದ-ವೇದಾಂಗ ವ್ಯಾಕರಣ-ಮೀಮಾಂಸಾ- ಸಾಹಿತ್ಯ - ವೇದಾಂತ, ಸಂಗೀತ ವಿದ್ಯೆಗಳೆಂಬ ಗಂಗಾನದಿ, ಸೌಂದರ್ಯ - ಲಾವಣ್ಯ -- ಸದ್ಗುಣಗಳೆಂಬ ಗುಪ್ತಗಾಮಿನಿ ಸರಸ್ವತಿ ನದಿಯೂ ಅವನಲ್ಲಿ ಸಂಗಮಿಸಿದಂತಿತ್ತು. ಸಕಲ ಸಜ್ಜನರ ಪ್ರೇಮಾದರ - ಗೌರವಗಳಿಗೆ ಪಾತ್ರನಾದನು.

ಶ್ರೀ ಶಾಲಿವಾಹನ ಶಕೆ ೧೫೩೬ ನೇ ಆನಂದನಾಮ ಸಂವತ್ಸರದ ಚೈತ್ರಶುಕ್ಲ ಪಂಚಮೀ ದಿವಸ (ಕ್ರಿ.ಶ. ೧೬೧೪ ನೇ ಏಪ್ರಿಲ್) ವೇಂಕಟನಾಥನ ವಿವಾಹವಾಯಿತು. ಸರಸ್ವತಿ ಅವನ ಅರ್ಧಾಂಗಿಯಾದಳು. ಸಂಸಾರ ಹಾಲು-ಸಕ್ಕರೆ ಬೆರೆಸಿದಂತೆ ಸುಮಧುರವಾಗಿತ್ತು. ಇಬ್ಬರಲ್ಲೂ ಅತಿಶಯದ ಪ್ರೇಮ. ಸರಸ್ವತಿ

ಪತಿಗೆ ತಕ್ಕ ಪತಿಯೆನಿಸಿದಳು.ಸಂಸಾರ ಸಂತಸ-ಉತ್ಸಾಹ ಗಳಿಂದ ಸಾಗಹತ್ತಿತ್ತು, ಇದೇ ಸಮಯದಲ್ಲಿ ಶ್ರೀ ವಿಜಯೀಂದ್ರ ಗುರುಗಳು ಶ್ರೀಹರಿಪಾದ ಸೇರಿದರು.ಎಲ್ಲರಿಗೂ ಆಘಾತಾ ಮುಂದೆ ಕಾವೇರಿ ಪಟ್ಟಣದಲ್ಲಿ ಸಂಸ್ಕೃತ ವಿದ್ಯಾಪೀಠವನ್ನು ಪ್ರಾರಂಭಿಸಿದರು. ನಾಲ್ಕರು ತಿಂಗಳಲ್ಲೇ ವಿದ್ಯಾಪೀಠದ ಕೀರ್ತಿ ಹರಡ ತೊಡಗಿತು. ವೇಂಕಟನಾಥರ ಸರ್ವಶಾಸ್ತ್ರ ಪಾಂಡಿತ್ಯ, ಪಾಠ ಪ್ರವಚನ ವೈಖರಿ, ವಿದ್ಯಾರ್ಥಿಗಳ ಮೇಲಿನ ಪ್ರೇಮಾದರ ಇವು ಗಳಿಂದ ಆಚಾರ್ಯರ ಕೀರ್ತಿ ವಿಖ್ಯಾತವಾಯಿತು. ಮುಂದೆ ನಳ ಸಂವತ್ಸರದ ಚೈತ್ರಶುಕ್ಲ ಸಪ್ತಮೀ (ಕ್ರಿ.ಶ. ೧೬೧೬ ಎಪ್ರಿಲ್) ದಿವಸ ಶುಭಲಗ್ನದಲ್ಲಿ ಸರಸ್ವತಮ್ಮ ಪುತ್ರರತ್ನವನ್ನು ಪ್ರಸವಿಸಿದರು.

ದಿವಸಗಳು ಉರುಳಿದವು.ತುಂಬು ಆನಂದದ ಸಂಸಾರ ದಲ್ಲಿ ದರಿದ್ರಲಕ್ಷ್ಮಿ ಕಾಲಿರಿಸಿದಳು. ಕಷ್ಟಗಳ ಸರಮಾಲೆಯನ್ನೇ ಎದುರಿಸಬೇಕಾಯಿತು.ಉಪವಾಸ ದಿನ ದಿನದ ಪದ್ಧತಿಯಾ ಯಿತು. ಕಡುಬಡತನದಿಂದ ಕಂಗೆಡತೊಡಗಿದರು. ಮಗುವಿಗೆ ಕುಡಿಯಲು ಹಾಲಿಗೂ ಗತಿಯಿಲ್ಲವೆಂದಾಗಿತ್ತು. ಶ್ರೀಹರಿಯ ಅನುಗ್ರಹದಿಂದ ಕೆಲವೇ ವರ್ಷಗಳಲ್ಲಿ ಕಷ್ಟಗಳೆಲ್ಲ ಪರಿಹಾರ ವಾದವು.ಅಘಟಿತಘಟನಾಪಟುವಾದ ಪರಮಾತ್ಮ ಲೀಲಾ ವಿಲಾಸ, ಮತ್ತೆ ಮನೆಯು ಸುಖ - ಸಂತೋಷದ ಬೀಡಾಗಿತ್ತು. ನಗೆಯ ಹೊನಲು ಹರಿಯುತ್ತಿತ್ತು.

ಸಂಸಾರ ಸಹಿತರಾಗಿ ವೇಂಕಟನಾಥಾಚಾರ್ಯರು ಕುಂಭ ಕೋಣಕ್ಕೆ ಬಂದರು. ಶ್ರೀ ಸುಧೀಂದ್ರ ತೀರ್ಥರಲ್ಲಿ ಆಶ್ರಯ ಪಡೆದರು. ಅನಂತರ ವೆಂಕಟನಾಥರು ಸುಧೀಂದ್ರ ಗುರುಗಳಲ್ಲಿ ವಿವಿಧ ಶಾಸ್ತ್ರಗಳ ಉದ್ಗ್ರಂಥಗಳನ್ನು ಅಧ್ಯಯನ ಮಾಡುತ್ತ ಶ್ರೀಗಳಿಂದ ಮಾನಿತರಾದರು. ಸತತ ಮೂರು ವರ್ಷಗಳ ಕಾಲ ಗುರುಗಳು ಆಚಾರ್ಯರಿಗೆ ಪಾಠ ಹೇಳಿ ಕೃತಾರ್ಥರಾದರು. ಶ್ರೀಮದಾಚಾರ್ಯ ಪರಂಪರಾ ಅವಿಚ್ಛಿನ್ನವಾಗಿ ನಡೆದು ಬಂದ ಸತ್ ಸಂಪ್ರದಾಯ ಕ್ರಮದಲ್ಲಿ ವೇಂಕಟನಾಥರಿಗೆ ಸಮಗ್ರ ದ್ವೈತ ಶಾಸ್ತ್ರವನ್ನೂ,ನ್ಯಾಯ ಮೀಮಾಂಸಾ ವ್ಯಾಕರಣ ಶಾಸ್ತ್ರಗಳನ್ನೂ ಪಾಠ ಹೇಳಿ ಮುಗಿಸಿದರು. ಶ್ರೀಸುಧೀಂದ್ರರ ಸಮಸ್ತ ವಿದ್ಯೆಗಳೂ ವೇಂಕಟನಾಥರಲ್ಲಿ ನೆಲೆಸಿ ಶೋಭಿಸಿತು. ವೇಂಕಟನಾಥರ ಭವ್ಯವ್ಯಕ್ತಿತ್ವ ತೇಜಸ್ಸು ಎಲ್ಲರ ಆಕರ್ಷಣಾ ಗಾರುಡಿಯಾಯಿತು.

ಶ್ರೀ ಸುಧೀಂದ್ರತೀರ್ಥರು ಮಹಾಸಂಸ್ಥಾನ ಪರಂಪರಾ ಪ್ರಾಪ್ತ ದಿಗ್ವಿಜಯ ಯಾತ್ರೆಗೆ ಮಂದಾದರು. ರಾಜಮನ್ನಾರು ಗುಡಿಯಲ್ಲಿ ವೆಂಕಟನಾಥಾಚಾರ್ಯರು ಅದ್ವೈತವಾದದ ಸನ್ಯಾಸಿಗಳನ್ನು ಸೋಲಿಸಿದರು.'ಮಹಾಭಾಷ್ಯಾಚಾರ್ಯ' ಪ್ರಶಸ್ತಿಯಿಂದ ಗೌರವಿ ಸಲ್ಪಟ್ಟರು ತಂಜಾಪುರದ ವಾದದಲ್ಲಿ ಗೆದ್ದು ಗೌರವಿಸಲ್ಪಟ್ಟರು. ಶ್ರೀರಂಗದಲ್ಲಿ ಕವಿರಾಜಮಿಶ್ರರನ್ನು ಸೋಲಿಸಿದರು.ತಂಜಾ ವೂರಿನಲ್ಲಿ ಮಹಾಭಾಷ್ಯ ಭಟ್ಟಾಚಾರ್ಯ ವೆಂಕಟನಾಥಾಚಾರ್ಯ ಎಂಬ ಬಿರುದಿನಿಂತ ಗೌರವಿಸಲ್ಪಟ್ಟರು ತಪ್ತ ಮುದ್ರಾಂಕನದ ವ್ಯಾಕ್ಯಾರ್ಥ ವಿಜಯಿಗಳಾದರು ಕುಂಭಕೋಣಕ್ಕೆ ಹಿಂದಿರುಗಿದ ನಂತರ ಗೂಢಭಾವಪ್ರಕಾಶವೆಂಬ ವ್ಯಾಖ್ಯಾನವನ್ನು ರಚಿಸಿದರು.ಅಣುಮಧ್ವವಿಜಯಕ್ಕೆ ವ್ಯಾಖ್ಯಾನ ರಚಿಸಿ ಗೌರವಿಸಲ್ಪಟ್ಟರು.

ದಿನಗಳು ಉರುಳಿದವು. ಶ್ರೀ ಮಧ್ವನವಮೀ ಕಾರ್ಯಕ್ರಮ ಗಳೂ ಮುಗಿದವು. ಒಮ್ಮೆ ಗುರುಸುಧೀಂದ್ರತೀರ್ಥರಿಗೆ ಕನಸಿನಲ್ಲಿ ಶ್ರೀಮೂಲರಾಮಚಂದ್ರ ದೇವರು ಪ್ರತ್ಯಕ್ಷರಾಗಿ ವೇಂಕಟ ನಾಥರಿಗೆ ಲೋಕಕಲ್ಯಾಣಾರ್ಥವಾಗಿ 'ಪರಮಹಂಸಾಶ್ರಮ ವನ್ನು ಕರುಣಿಸಿ,ತನ್ನ ಹೆಸರಿಟ್ಟು ಅನುಗ್ರಹಿಸಲು ಆಜ್ಞಾಪಿಸಿದರು. ಅವನು ಅದೃಶ್ಯನಾದಂತೆ ಶ್ರೀವೇದವ್ಯಾಸ ದೇವರು ದರ್ಶನ ನೀಡಿ ಅದನ್ನೇ ಸೂಚಿಸಿ ಅದೃಶ್ಯರಾದರು.ತಕ್ಷಣ ಶ್ರೀಮಧ್ವಾ ಚಾರ್ಯರು ಕಾಣಿಸಿಕೊಂಡು 'ವೇಂಕಟನಾಥರಿಗೆ ಶೀಘ್ರ ತುರ್ಯಾ ಶ್ರಮವನ್ನು ಕೊಟ್ಟು ತಮ್ಮ ಮಹಾಸಂ ಸ್ಥಾನವನ್ನು ಒಪ್ಪಿಸಿ ಕೊಡ ಬೇಕೆಂದು ಆಜ್ಞಾಪಿಸಿ ಕಣ್ಮರೆಯಾದರು.

ಕೆಲವು ದಿನಗಳ ಅನಂತರ ಶ್ರೀಸುಧೀಂಧ್ರತೀರ್ಥರು ವೇಂಕಟಾನಾಥಾಚಾರ್ಯರನ್ನು ತಮ್ಮ ಏಕಾಂತ ಮಂದಿರಕ್ಕೆ ಕರೆಸಿಕೊಂಡು ತಮ್ಮ ಅನುಭವಕ್ಕೆ ಬಂದುದೆಲ್ಲವನ್ನು ವಿವರಿಸಿ ದರು. ಸನ್ಯಾಸಕ್ಕೆ ಕರೆ ನೀಡಿದರು. ವೇಂಕಟನಾಥರ ಮನದಲ್ಲಿ ವೈಚಾರಿಕ ಕ್ರಾಂತಿ ಕುಡಿಯೊಡೆಯಿತು. ನಿರ್ಧಾರಕ್ಕೆ ಬದಲಾಗದೆ ತೊಳಲಾಡಿದರು. ಚಿಂತೆಗೆ ಕೊನೆಯಿಲ್ಲವಾಯಿತು. ವೇಂಕಟ ನಾಥಾಚಾರ್ಯರ ಅಂತರಂಗದಲ್ಲಿ ವಾಗ್ದೇವಿ ಗೋಚರಿಸಿದಳು, ಎಚ್ಚರಿಸಿದಳು. ಶ್ರೀದೇವಿಯ ಅಭಯಹಸ್ತದಿಂದ ಮಿಂಚಿನ ಬಳ್ಳಿಯಂತಹ ಬೆಳಕು ಹೊರಟು ವೇಂಕಟನಾಥರ ಹೃದಯ ವನ್ನು ಪ್ರವೇಶಿಸಿತು.ಅದರ ಶರೀರದಲ್ಲಿ ವಿದ್ಯು ತ್ಪೂರ್ಣವಾದ ಆವುದೋ ಮಹಾಶಕ್ತಿಯೊಂದು ಪ್ರವಹಿಸಿ ದಂತಾಯಿತು.

ವಿದ್ಯಾಭಿಮಾನಿನಿ ಸರಸ್ವತಿದೇವಿಯ ಪ್ರತ್ಯಕ್ಷದರ್ಶನ-ಉಪದೇಶಾದಿಗಳಿಂದ ರೋಮಾಂಚಿತರಾದ ಆಚಾರ್ಯರ ಮನೋದೌರ್ಬಲ್ಯ ಮಾಯವಾಯಿತು, ಕತ್ತಲು ಕಳೆಯಿತು. ದಿವ್ಯ ಪ್ರಕಾಶದ ಹೊಂಬೆಳಕಿನಲ್ಲಿ ಮುಂದಿನ ಮಾರ್ಗ ಗೋಚರಿ ಸಿತು.ಅರುಣೋದಯವಾದಂತೆ ಮನಸ್ಸು ಸ್ಥಿರವಾಯಿತು. ಮನದಲ್ಲಿ ಆನಂದ ತುಂಬಿತು!

ಗುರುಗಳಲ್ಲಿ ಆಚಾರ್ಯರು ಎಲ್ಲವನ್ನು ಒಪ್ಪಿಸಿದರು. ಗುರುಗಳು ಆಶೀರ್ವದಿಸಿದರು. ಆಚಾರ್ಯರ ಮನ ಉಲ್ಲಸಿತ ವಾಗಿತ್ತು, ಅವರಾಸೆಯಂತೆ ಸುತನ ಉಪನಯನ ಕಾರ್ಯವೂ ವೈಭವದಿಂದ ನೆರವೇರಿತು.ಸಂಭ್ರಮ ಮುಗಿದಂತೆ ವೇಂಕಟ ನಾಥಾಚಾರ್ಯರು ಆಶ್ರಮ ಸ್ವೀಕರಿಸುವ ಸುದ್ಧಿ ಕರ್ಣಾಕರ್ಣಿಕೆ ಯಾಯಿತು. ಸರಸ್ವತಮ್ಮನವರಿಗೆ ವಜ್ರಾಘಾತವಾದಂತಾ ಯಿತು. ದುಃಖಾಶ್ರು ಧಾರಾಕಾರ ಹರಿಯಿತು.

ಅಂದುರಾತ್ರಿ ಪತಿ-ಪತ್ನಿಯರಲ್ಲಿ ಈ ಕುರಿತಾಗಿಯೇ ವಾದ-ವಿವಾದ ಸರಸ್ವತಮ್ಮ ನವರ ಪ್ರೇಮನಿವೇದನೆಗಳೆಲ್ಲವೂ ವಿಫಲವಾಯಿತು. ಆಚಾರ್ಯಾರು ಅಚಲರಾಗಿದ್ದರು.ಪತಿಯ ಚರಣಗಳಲ್ಲಿ ಶಿರವಿರಿಸಿ ಕಣ್ಣೀರಿನಲ್ಲಿ ಪತಿಯ ಪಾದವನ್ನು



ತೊಳೆಯುತ್ತ ನಿಶ್ಚಲರಾಗಿದ್ದ ಸತಿಯನ್ನು ವೇಂಕಟನಾಥಾಚಾರ್ಯರು ನಾನಾ ವಿಧವಾಗಿ ಸಮಾಧಾನ ಮಾಡತೊಡಗಿದರು. ದುಃಖ ಕಣ್ಣೀರಿನಿಂದಲೇ ಇಬ್ಬರೂ ಆ ರಾತ್ರಿಯನ್ನು ಕಳೆದರು. ಸೂರ್ಯೋದಯವಾಗುತ್ತಿರುವುದನ್ನು ಗಮನಿಸಿ ಆಚಾರ್ಯರು ಅತಿ ಕಷ್ಟದಿಂದ ಮೇಲೆದ್ದು ಹೊರಟುಬಿಟ್ಟರು. ಸರಸ್ವತಮ್ಮ ಬೊಬ್ಬಿಟ್ಟು ಎಚ್ಚರ ತಪ್ಪಿಬಿದ್ದರು.

ಶ್ರೀ ವೇಂಕಟನಾಥಾಚಾರ್ಯರ ಸನ್ಯಾಸಾಶ್ರಮದ ವಾರ್ತೆ ಎಲ್ಲೆಡೆ ಹರಡಿತು. ಶ್ರೀ ಶಾಲಿವಾಹನಶಕೆ ೧೫೪೩ ನೇ ಸಂವತ್ಸರದ (ಕ್ರಿ.ಶ. ೧೬೨೧) ಫಾಲ್ಗುಣ ಶುದ್ಧಪಾಡ್ಯ ಪ್ರಾತಃಕಾಲ ಶ್ರೀಮಠದಲ್ಲಿ ಅಸಾಧ್ಯ ಜನ ಜಂಗುಳಿ ಸನ್ಯಾಸಾಶ್ರಮ ಪ್ರದಾನ ಸಮಾರಂಭ ವೀಕ್ಷಿಸಲು ಕುತೂಹಲದಿಂದ ಸಹಸ್ರಾರು ಜನ ವಿದ್ವಾಂಸರು ಧಾರ್ಮಿಕರು, ಭೂಸುರರು, ಪುರ ಪ್ರಮುಖರು ರಾಜ್ಯದ ಮಂತ್ರಿ ಸೇನಾನಿ, ರಾಜಕೀಯ ಧುರಂಧರರು,ಮಹಾರಾಜ ರಘುನಾಥ ನಾಯಕ ಆಸ್ಥಾನ ಪುರೋಹಿತರಾದಿಯಾಗಿ ಸಮಸ್ತ ಜನರೂ ತಮತಮಗೆ ವಿಹಿತಾಸನಗಳಲ್ಲಿ ಮಾಡಿಸಿದ್ದರು.

ಶ್ರೀ ವೆಂಕಟಾನಾಥಾಚಾರ್ಯರು ಶ್ರೀಮದಾಚಾರ್ಯ ಪರಂಪರಾಪ್ರಾಪ್ತ ಸತ್ಸಂಪ್ರದಾಯದಂತೆ ವಿದ್ಯುಕ್ತವಾಗಿ ಪರಮ ಹಂಸಾಶ್ರಮವನ್ನು ಸ್ವೀಕರಿಸಿದರು. ಕಾಷಾಯಾಂಬರ ದಂಡಕಮಂಡಲು ಧಾರಿಯಾಗಿ ಗುರು ಸನ್ನಿಧಿಗೆ ಕರೆದೊಯ್ಯಲು ಸಿದ್ಧವಾಗಿದ್ದ ಸುವರ್ಣ ಪಲ್ಲಕಿಯಲ್ಲಿ ಮಂಡಿಸಿದರು. ಆಗವರು ಉದಯಿಸುವ ಸೂರ್ಯನಂತೆ ಪ್ರಕಾಶಿಸುತ್ತಿದ್ದರು. ಆಗ ಶ್ರೀಮಠದ ಸಮಸ್ತ ಬಿರುದಾವಳಿ,ವಾದ್ಯವೈಭವ,ಸುವರ್ಣ-ರಜತ ದಂಡಧಾರಿಗಳು, ಪಂಡಿತ ಮಂಡಲಿ ಯವರು ನೂತನ ಯತಿವರ್ಯರನ್ನು ವೈಭವದಿಂದ ಶ್ರೀಮತ್ಸುಧೀಂದ್ರ ತೀರ್ಥಗುರು ಪಾದರ ಸನ್ನಿಧಿಗೆ ಕರೆದುಕೊಂಡು ಹೊರಟರು.

ನೂತನ ಯತೀವರರು ರಾಜದ್ವಾರವನ್ನು ದಾಟಿ ರಾಜಸಭೆಯನ್ನು ಪ್ರವೇಶಿಸಿದರು. ಮುಂದಿನ ಕಾರ್ಯಕ್ರಮಗಳೆಲ್ಲವೂ ಒಂದೊಂದಾಗಿ ನಡೆಯ ತೊಡಗಿದವು. ಕೊನೆಗೆ ಶ್ರೀ ಮಠದ ಅಧಿಕಾರಿಗಳು, ಈಗ ಪೂಜ್ಯಶ್ರೀ ಸುಧೀಂದ್ರ ಗುರುಪಾದರು ತಮ್ಮ ಪ್ರಿಯಶಿಷ್ಯರಾದ ನೂತನ ಯತಿವರ್ಯರಿಗೆ ನಾಮಕರಣ ಪೂರ್ವಕವಾಗಿ ದ್ವೈತ ಸಾಮ್ರಾಜ್ಯ ವಿದ್ಯಾಸಿಂಹಾಸನದಲ್ಲಿ ಪಟ್ಟಾಭಿಷೇಕ ಮಾಡಿ ಆಶೀರ್ವದಿಸುತ್ತಾರೆ ಎಂದು ಘೋಷಿಸಿದರು. ಸಭಾಸದರು ಉತ್ಸಾಹ ಸಂಭ್ರಮದಿಂದ ಶಾಂತವಾಗಿ ಆನಂದದಿಂದ ಕರಘೋದಿಸಿ ಎದ್ದು ನಿಂತರು ಶ್ರೀ ಸುಧೀಂದ್ರತೀರ್ಥರು.

**"ಶ್ರೀರಾಘವೇಂದ್ರತೀರ್ಥ ಶ್ರೀಪಾದಂಗಳವರು"**

ಎಂಬ ಅನ್ವರ್ಥಕ ನಾಮವನ್ನು ತಮ್ಮ ವರ ಕುಮಾರರಿಗೆ ಕರುಣಿಸಿ ತುಂಬು ಹೃದಯದಿಂದ ಆನಂದಭಾಷ್ಪಸಿಕ್ತನಯನರಾಗಿ ಆಶೀರ್ವದಿಸಿದರು. ಪರಮಾನಂದ ತುಂದಿಲರಾದ. ಸಮಸ್ತ ಸಭಾಸದರೂ ಏಕ ಕಂಠದಿಂದ "ಶ್ರೀಮದ್ರಾಜಾಧಿರಾಜ ಶ್ರೀ ಮದ್ರಾಘವೇಂದ್ರ ಗುರುಸಾರ್ವಭೌಮ ಜಯ ಜಯ ಎಂದು ಹರ್ಷಧ್ವನಿಗೈದರು. ಆ ಯತಿಪುಂಗವರಾಗ ಶೃಂಗಾರವಾದ ಶಿಂಗಪೀಠದಲ್ಲಿ ಕಂಗೊಳಿಸಿದರು.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**

# ವರ್ಣಮಯ ಹೋಳಿ ಹಬ್ಬ

**ಶ್ರೀಮತಿ. ಕೆ.ವಿ. ಪದ್ಮಾವತಿ**

99722 22791

**ಹೋ**ಳಿ ಎಂದರೆ ಬಣ್ಣದೋಕುಳಿ - ಸಡಗರ - ಸರಸ ಚೆಲ್ಲಾಟಗಳ ದೃಶ್ಯ ಕಣ್ಮುಂದೆ ಬರುತ್ತದೆ. ಹೌದು, ಇದು ಸರಸ - ಸಂತೋಷಗಳ ಬಣ್ಣವನ್ನು ಹೆಚ್ಚಿಸಲೆಂದೇ ಬರುವ ಹಬ್ಬ. ಭಾರತದ ಅತಿ ಪ್ರಾಚೀನ ಹಬ್ಬಗಳೆಲ್ಲ ಸರಸ ವಿನೋದಗಳಿಂದ ಕೂಡಿರುವಂತಹವು. ಇಲ್ಲಿ ದೇವರ ಧ್ಯಾನ, ಪೂಜೆ, ದಾನ ಧರ್ಮಗಳು ಎಷ್ಟು ಮುಖ್ಯವೋ ಸಂತಸ - ಸಂಭ್ರಮಗಳೂ ಕೂಡ ಅಷ್ಟೇ ಮುಖ್ಯ.

ವಸಂತೋತ್ಸವವು ಫಾಲ್ಗುಣ - ಚೈತ್ರಮಾಸಗಳುದ್ದಕ್ಕೂ ಜರುಗುವ ವೈವಿಧ್ಯಮಯ - ವರ್ಣಮಯ ಉತ್ಸವಸರಣಿ, ಇದು ರಾಜ ಪೋಷಣೆಯಲ್ಲಿ ಭಾರೀ ಪ್ರಮಾಣದ ನಾಡಹಬ್ಬವಾಗಿ ನಡೆಯುತ್ತಿತ್ತು. ಊರ ಜನರಿಗೆ ಹಾಗೂ ಪ್ರವಾಸಿಗರೆಲ್ಲ ಭಾರಿ ವೆಚ್ಚದಲ್ಲಿ ರಸಮಯ ಔತಣಗಳನ್ನು,ವಸತಿ ಸೌಕರ್ಯ ಗಳನ್ನೂ, ಹಲವು ಬಗೆಯ ಮನೋರಂಜನೆ ಹಾಗೂ ಧಾರ್ಮಿಕ ಕಲಾಪಗಳನ್ನು ಆಯೋಜಿಸಲಾಗುತ್ತಿತ್ತು. ಈ ವಾರ್ಷಿಕ ಉತ್ಸವಗಳಿಗಾಗಿಯೇ ದೇಗುಲಗಳಲ್ಲಿ,ಪ್ರಮುಖ ಬೀದಿಗಳಲ್ಲಿ, ಅರಮನೆಯ ಅಂಗಳದಲ್ಲಿ ವಸಂತ - ಮಂಟಪ, ವಸಂತ - ಭವನ, ಸರಸ್ವತೀ-ಭವನಾದಿಗಳನ್ನು ಕಟ್ಟಿಸಿಡಲಾಗುತ್ತಿತ್ತು! ನಮ್ಮ ಪ್ರಾಚೀನ ದೇಗುಲಗಳಲ್ಲಿನ ವಿಶಾಲ ಅಂಗಳಗಳು, ವಸಂತ ಮಂಟಪಗಳು, ಓಕುಳಿಯಾಡಲು ಬಳಸಲಾಗುತ್ತಿದ್ದ ಕಲ್ಲಿನ ಕೊಳಗಳು, ಬಗೆ ಬಗೆಯ ವಾದ್ಯಗಳು,ಸಂಪ್ರದಾಯದ ಗೀತ ನೃತ್ಯಗಳು ಕಥೆಗಳೂ ಮುಂತಾದವು ಇದನ್ನೇ ಸಾರುತ್ತವೆ.

ಬಣ್ಣಗಳು ಕೇವಲ ಕಣ್ಣಿಗೆ ಹಿತ ನೀಡುವ ವಸ್ತುಗಳಾಗದೇ ನಮ್ಮ ಸುಪ್ತ ಆಕಾಂಕ್ಷೆಗಳನ್ನು ಪ್ರಕಟಿಸುವ ವೈವಿಧ್ಯಮಯ ಸಂಕೇತಗಳಾಗುತ್ತವೆ. ಅರ್ಥಪೂರ್ಣ ರೂಪಕಗಳಾಗುತ್ತವೆ. ಇಲ್ಲದ ದೇವರನ್ನು ಕಾಣಲು, ವಿಕಾರಗೊಳ್ಳುವ ಮಾನವನ ಹಣೇಬರಹವನ್ನು ಬದಲಿಸಲು,ಬದುಕಿನ ಬೇಗೆಯಿಂದ ತಪ್ತಗೊಂಡ ಮನಸ್ಸನ್ನು ತಣಿಸಲು,ಪ್ರೇಮಕಾಮಗಳನ್ನು ಸಾಧಿಸಲು,ಮಕ್ಕಳಿಗೆ ಉಣಿಸಲು,ಬೆಚ್ಚಗಿನ ತಾಯ ಮಮತೆಯನ್ನು ಅರಿಯಲು, ಹಿತವಾದುದನ್ನು ಹಂಚಿಕೊಳ್ಳಲು, ಸುಪ್ತ ಭಾವನೆಗಳನ್ನು ಅಭಿವ್ಯಕ್ತಿಸಲು,ಅಷ್ಟೇ ಏಕೆ ಮೋಕ್ಷ ಸಾಧನೆಗೂ ಕೂಡ ಈ ಬಣ್ಣಗಳು ಸೋಪಾನಗಳಾಗಿವೆ ಎಂದರೆ ಅತಿಶಯೋಕ್ತಿಯಲ್ಲ.

ಹೋಳಿ ಆಚರಣೆಯು ಒಂದು ನವಾನೇಷ್ಟಿಯಜ್ಞ. ಉತ್ತರ ಭಾರತದ ಹೋಳಿ ಆಚರಣೆಗೆ ಪೌರಾಣಿಕ ಕತೆಯೊಂದರ ಸ್ಫೂರ್ತಿಕಾರಣ. ದಕ್ಷಿಣ ಭಾರತದಲ್ಲಿ ಆಚರಿಸುವ ಹೋಳಿಗೂ ಪುರಾಣದ ಕತೆಯಾದ ಮನ್ಮಥನ ಕತೆ ಆಸರೆಯಾಗಿದೆ. ಉತ್ತರ ಭಾರತದ್ದು ಪ್ರಹ್ಲಾದನ ಕತೆ, ಪ್ರಹ್ಲಾದನಿಗೆ ಒಬ್ಬ ಚಿಕ್ಕಮ್ಮ ಅವಳ ಅಣ್ಣ ಹಿರಣ್ಯಕಶಿಪು ತನ್ನ ಮಗ ಪ್ರಹ್ಲಾದನನ್ನು ಅವಳ ತೊಡೆಯ ಮೇಲೆ ಕೂರಿಸಿ ಅವನಿಗೆ ಬೆಂಕಿಯಿಡುತ್ತಾನೆ. ಪ್ರಹ್ಲಾದ ಪರಮ ಹರಿಭಕ್ತ,ಪ್ರಹ್ಲಾದನ ಹರಿಭಕ್ತಿಯಿಂದಾಗಿ ಹೋಲಿಕಾ ಆ ಅಗ್ನಿಯನ್ನು ಸುಟ್ಟು ಭಸ್ಮವಾಗುತ್ತಾಳೆ. ಪ್ರಹ್ಲಾದ ಉಳಿದು ಕೊಳ್ಳುತ್ತಾನೆ. ಈ ಘಟನೆ ಘಟಿಸಿದ್ದೂ ಇಂದು ಹೋಳಿ ನಡೆಯುವ ದಿನವೇ. ಇದು ದುಷ್ಟ ನಿಗ್ರಹ, ದುರ್ಗುಣದ ದಿನವಾಗಿತ್ತು. ಹೋಲಿಕಾ ಸತ್ತ ದಿನವಾದ್ದರಿಂದ ಹೋಳಿಗೆ ಆ ಹೆಸರು ಬಂತು.

ಹೋಳಿಯ ಸಮಯ ಚಳಿ ಕಡಿಮೆಯಾಗಿ ಗಿಡ ಮರ ಬಳ್ಳಿಗಳು ಚಿಗುರುವ ಕಾಲ. ವಸಂತಾಗಮನದ ಶುಭಾರಂಭ. ಉತ್ತರ ಭಾರತದಲ್ಲಿ ಗೋಧಿ ಕಡಲೇ ಕೊಯ್ಲಿಗೆ ಬಂದಿರುತ್ತದೆ. ಮಾನವನ ಉಪಯೋಗಕ್ಕೆಂತಲೇ ಬೆಳೆದು ನಿಂತ ಈ ಬೆಳೆಗೆ ಭಗವಂತನ ಕೃಪೆಯೇ ಕಾರಣವೆಂಬ ಭಾವನೆ. ಆದ್ದರಿಂದ ಮೊದಲ ನೈವೇದ್ಯ ಅವನಿಗೆ. ಇನ್ನೊಂದು ದುಷ್ಟನಿಗ್ರಹದ ದಿನ. ದೈತ್ಯ ಶಕ್ತಿಯ ದಮನ. ಈ ಎರಡೂ ಭಗವಂತನ ದೊಡ್ಡ ಗುಣದಿಂದಾದ್ದು. ಈ ದಿನ ಹಸುವಿನ ನಾಲ್ಕೂ ಗೊರಸುಗಳ ಅಡಿಯ ಧೂಳು ತೆಗೆದು ಅದರೊಂದಿಗೆ ಧಾನ್ಯಗಳ ಹಾಲು ತೆನೆ ಬೆರಸಿ, ಸುಡವುದರ ಮೂಲಕ ಆಹುತಿ ಕೊಡುತ್ತಾರೆ. ಇದರಿಂದ ಭೂಮಿ ಫಲವತ್ತಾಗುತ್ತದೆಂಬ ನಂಬಿಕೆ. ಇದು ಹೋಳಿ ಹಬ್ಬಕ್ಕೆ ಮುನ್ನಾದಿನ ನಡೆಯುವ ಕಾರ್ಯರೂಪ. ಈ ಮಂಗಲೋತ್ಸವ ದಿನ ಜನ್ಮ ಜನ್ಮಾಂತರದಿಂದಲೂ ಇದ್ದ ವೈರ ವೈಮನಸ್ಸು ಸಾಯುತ್ತದಂತೆ. ಪ್ರೀತಿ, ಅನುರಾಗ, ವಾತ್ಸಲ್ಯದ ಮಹಾಪರ್ವ ಹೋಳಿ ಮಹೋತ್ಸವ, ಹೋಲಿ ಒಂದು ಯಜ್ಞವೆಂದು ಕರೆದ ಹಿರಿಯರು ಈ ರೀತಿ ನಡೆದುಕೊಂಡು ಭಸ್ಮವಂದನೆ ಮಾಡುತ್ತಾರೆ. ಭಗವಂತನಿಗೆ ಅಭಿಷೇಕವಾಗುತ್ತದೆ. ಆದರೀಗ ಇದರ ಅಂತರಾರ್ಥ ಅರಿಯದೇ ಬಡಾ ಹೋಲಿಯೆಂದು ಹೋಲಿ ಹೈ ಎಂದು ಕೂಗುತ್ತಾ ಬಣ್ಣ ಎರಚುತ್ತಾರೆ. ಪುಂಡಾಟಿಕೆಯ ಪರ್ವವಾಗಿ ಮಾರ್ಪಟ್ಟಿದೆ. ಏನೇ ಆದರೂ ಹೋಳಿ ಹಬ್ಬ ಸೌಹಾರ್ದತೆಗೆ ನಾಂದಿ ಹಾಡುತ್ತಿರುವುದಂತೂ ಸುಳ್ಳಲ್ಲ.



ಹೋಳಿ ಹಬ್ಬವೆಂದರೆ ರಂಗಿನಾಟ. ಬಣ್ಣದ ಓಕುಳಿಯೊಡನೆ ಆಡುವ ಚೆಲ್ಲಾಟ ಬಣ್ಣದೊಡನಾಟ ಮನಸ್ಸಿಗೆ ಮುದ ಕೊಟ್ಟರೆ, ಆಯ್ಕೆ ಮಾಡಿಕೊಳ್ಳುವ ಬಣ್ಣ ಮನೋ ಭಾವನೆಯ ಪ್ರತೀಕವಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನದೆ ಆದ ವ್ಯಕ್ತಿತ್ವ ಹೊಂದಿರುತ್ತಾನೆ. ಅವನ ಅರಿವಿಗೆ ಬಾರದಂತೆ ಅವನ ಸುತ್ತ ಪ್ರಭಾವಲಯ (ದಿವ್ಯಪ್ರಭೆ ಅಥವಾ ಔರ) ಹರಡಿಕೊಂಡಿರುತ್ತದೆ. ಈ ದಿವ್ಯ ಪ್ರಭೆಯನ್ನು ಆದರಿಸಿಯೇ ವ್ಯಕ್ತಿಯ ವ್ಯಕ್ತಿತ್ವ ಅಥವಾ ಆಧ್ಯಾತ್ಮಿಕ ಸಾಧನೆಯಲ್ಲಿ ಆತನೆಷ್ಟು ಮುಂದೆ ಸಾಗಿದ್ದಾನೆ.ಆತನ ಚಿಂತನೆಗಳು ಉದಾತ್ತ ವಾಗಿವೆಯೋ ಇಲ್ಲವೋ ಎಂಬುದನ್ನು ತಿಳಿದು ಕೊಳ್ಳಬಹುದು.

ಉದಾಹರಣೆಗೆ, ನೀವು ಆಧ್ಯಾತ್ಮ ಸಾಧನೆಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿರುವ ವ್ಯಕ್ತಿಯೊಬ್ಬನನ್ನು ನೋಡುತ್ತೀರಿ. ಆತ ತೀರಾ ಸಾಮಾನ್ಯ ಮನುಷ್ಯನಂತೆ ಕಂಡರೂ, ಸರಳ ಉಡುಗೆಗಳನ್ನು ತೊಟ್ಟಿದ್ದರೂ ನಿಮ್ಮ ಗಮನ ಸೆಳೆಯುತ್ತಾನೆ. ಕಾರಣ, ಆತನ ಸುತ್ತಲಿರುವ ದಿವ್ಯ ಪ್ರತಿಭೆಯ ಹೊಳಹು. ಆ ಬೆಳದಿಂಗಳ ಬೆಳಗು, ಅದೇ ಮತ್ತೊಬ್ಬ ವ್ಯಕ್ತಿ ಅದೆಷ್ಟೇ ಸುರ ದ್ರೂಪಿಯಾಗಿದ್ದರೂ ಗಮನ ಸೆಳೆಯುವುದಿಲ್ಲ. ಕಾರಣ ಆತನ ಸುತ್ತಲಿರುವ ದಿವ್ಯ ಪ್ರಭೆ ಮಂಕಾಗಿರುತ್ತದೆ.

ಹೋಳಿ,ಫಲವಂತಿಕೆಯನ್ನು ವೃದ್ಧಿಸುವ ಹಾಗೂ ವರ್ಷವನ್ನು ಪುನಃಶ್ಚೇತನ ಗೊಳಿಸುವ ಹಬ್ಬ. ಹೋಳಿ ಹುಣ್ಣಿಮೆ ದಿವಸ ಕಾಮನ ಸುಂದರ ಪ್ರತಿಮೆ ಮಾಡಿಸಿ ಶೃಂಗರಿಸಿ, ಊರಿನಲ್ಲಿರುವ ಕಾಮನ ಕಟ್ಟೆಯ ಮೇಲೆ ಹಂದರ ಕಟ್ಟಿ ಇಟ್ಟಿರುತ್ತಾರೆ.ಎಡಗಡೆ ಚೆಲುವೆಯಾದ ಆಕರ್ಷಕ ಮೈಕಟ್ಟಿನ ರತಿದೇವಿಯ ಮೋಹಕ ಪ್ರತಿಮೆಯನ್ನು ಕೆಲವು ಕಡೆ ಇಡುವುದುಂಟು. ಕೆಲ ಊರುಗಳಲ್ಲಿ ಸರಕಾರಿ ಕಾಮಣ್ಣ, ದೈವದ ಕಾಮಣ್ಣ, ಓಣಿಯ ಕಾಮಣ್ಣ ಎಂದು ಮೂರು ಕಾಮಣ್ಣರನ್ನು ಪೂಜಿಸುತ್ತಾರೆ. ಸರಕಾರಿ ಕಾಮಣ್ಣನಿಗೆ ಊರ ದೈವದವರಿಂದ ಓಣಿಯ ಕಾಮಣ್ಣನಿಗೆ ಓಣಿಯ ಭಕ್ತರಿಂದ ಮಾನ ಮನ್ನಣೆ ದೊರೆಯುತ್ತದೆ.

'ಕಾಮನ ಮಾನ'ಗಳೆಂಬ ಭೂಮಿ ಉಂಬಳಿಯಾಗಿ ನೀಡಿದ ದಾಖಲೆ ಗಳಿವೆ. ಹೋಳಿ ಹಬ್ಬಕ್ಕೆ ದೊಡ್ಡ ಪರಂಪರೆ ಇದೆ. ಕಾಮನ ವಿಚಾರವಾಗಿ ಋಗ್ವೇದ ಅಥವಾ ವೇದಗಳಲ್ಲಿಯೂ ಉಲ್ಲೇಖವಿದೆ. ಸ್ಕಂದ ಪುರಾಣ ಮತ್ತು ಶಿವ ಪುರಾಣದಲ್ಲಿ ಕಾಮನ ಉಲ್ಲೇಖ ಬರುತ್ತದೆ. ಬುದ್ಧನು ಕಾಮನನ್ನು ಗೆದ್ದ ವರ್ಣನೆಗಳು ಬೌದ್ಧ ಸಾಹಿತ್ಯದಲ್ಲಿದೆ. ಪ್ರಸಿದ್ಧ ಸಂಸ್ಕೃತ ನಾಟಕಕಾರ ಕಾಳಿದಾಸನೂ ತನ್ನ ಕಾವ್ಯದಲ್ಲಿ ಹೋಳಿಯನ್ನು ಉಲ್ಲೇಖಿಸಿದ್ದಾನೆ.

ಹೋಳಿಗೆ ತಿನ್ನುವ ಹೋಳಿಗೆ ಹೇಳುತ್ತಿದ್ದಂತೆ 'ನನ್ನನ್ನು ಹಾಲು ತುಪ್ಪದಲ್ಲಿ ಮುಳುಗಿಸಿದರೆ ನೀವು ತೇಲುತ್ತೀರಿ' ನನ್ನನ್ನು ತೇಲಿಸದಿದ್ದರೆ ನೀವು ಮುಳುಗುತ್ತೀರಿ ಎನ್ನುತ್ತದಂತೆ ಇದರ ಅರ್ಥ. ಬರಿ ಹೋಳಿಗೆ ತಿನ್ನುವುದು ಸರಿಯಲ್ಲ. ಹೋಳಿಗೆಯ ಜೊತೆಗೆ ಹಾಲು ತುಪ್ಪ ತಿನ್ನಬೇಕು ಎನ್ನುತ್ತಾರೆ ಹಿರಿಯರು.

ಹೋಳಿ ಹುಣ್ಣಿಮೆಗೂ ಹೋಳಿಗೆ ಊಟಕ್ಕೂ ಅದೇನೋ ಅವಿನಾಭಾವ ಸಂಬಂಧವಿದೆ.ಹೋಳಿ ಹುಣ್ಣಿಮೆಯ ಕಾಮನನ್ನು ಸುಟ್ಟು ಬಿಸಿ ಹೋಳಿಗೆ ತಿನ್ನುತ್ತಾ ಬಾಯಿ ಬಡಿದುಕೊಳ್ಳುವ ಪಡ್ಡೆ ಹೈದರಿಗೇನು ಕಡಿಮೆ ಇಲ್ಲ. ಹೋಳಿ ಹುಣ್ಣಿಮೆಗೂ, ಹೋಳಿಗೆಗೂ ಶತಶತಮಾನಗಳ ಇತಿಹಾಸವಿದೆ.

ಯಾವುದೇ ಹಬ್ಬ ಹರಿದಿನಗಳಿರಲಿ ಬಗೆ ಬಗೆಯ ಸಿಹಿ ಊಟ ಮಾಮೂಲು. ಅದರಲ್ಲೂ ಯುಗಾದಿ ಹಾಗೂ ಹೋಳಿ ಹುಣ್ಣಿಮೆಯ ಹಬ್ಬದಲ್ಲಿ ಹೂರಣದ ಹೋಳಿ ಗೆಗೆ ಹೆಚ್ಚಿನ ಪ್ರಾಶಸ್ತ್ಯ.ಹೋಳಿಗೆ ಊಟ ಸಿಹಿ ಊಟದಲ್ಲಿಯೇ ಅಗ್ರಸ್ಥಾನ ಪಡೆದಿದೆ.

**ಬಣ್ಣದೋಕುಳಿ ಕೇವಲ ಮನರಂಜನೆಗಲ್ಲ!**

ಮಾತ್ರವಲ್ಲದೆ ವೈಜ್ಞಾನಿಕ ತಳಹದಿಯ ಪ್ರತಿಬಿಂಬದಂತಿರುವ ಹೋಳಿ ಹಬ್ಬ ಶಾಂತಿ,ಸೌಹಾರ್ದತೆ ಹಾಗೂ ಸಮೃದ್ಧಿ ಸಂಕೇತ ಬಣ್ಣಗಳ ಬಳಕೆ ಸಮಾಜ ಕ್ಕೊಂದು ವಿಶಿಷ್ಟ ಸಂದೇಶ ಸಾರುವ ವೈವಿಧ್ಯತೆಯ ಪ್ರತೀಕ ಎನ್ನಲಾಗುತ್ತಿದೆ. ಒಟ್ಟಿನಲ್ಲಿ ಹಳೆಯದೆಲ್ಲವ ಮರೆತು ಹೊಸ ಚಿಗುರಿನೊಡನೆ ಬೆರೆತು ಗತವೈಭವ ಸ್ಮರಿಸುವ ರಂಗು-ರಂಗಿನ ಬಣ್ಣದೋಕುಳಿ ಭವಿಷ್ಯದ ಯುವ ಪೀಳಿಗೆಯ ಭವಿ ತವ್ಯಕ್ಕೆ ಸಮೃದ್ಧಿಯ ಬುತ್ತಿಯಾಗಲಿ ಎನ್ನುವ ಆಶಯಕ್ಕೆ ಇಂಬು ನೀಡಲಿ ಎನ್ನುವುದು ಸರ್ವ ಜನಾಂಗಗಳ ಆಶಾಭಾವ.




# ತ್ರಿಪುರಾಸುರ ಸಂಹಾರ

**ಡಾ|| ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ : ಡಿ.ಎಸ್.ಬದ್ರಿನಾಥ್**

ಭಾಗವತ ಶ್ರೇಷ್ಠನಾದ ಪ್ರಹ್ಲಾದನ ಚರಿತೆಯನ್ನೂ, ಹಿರಣ್ಯಕಶಿಪುವಿನ ವಧೆಯನ್ನೂ, ನೃಸಿಂಹನ ಲೀಲೆಯನ್ನು ವರ್ಣಿಸಿದ ನಾರದ ಮುನಿ, ಅವುಗಳನ್ನು ಶ್ರದ್ಧೆಯಿಂದಾಲಿಸುವ ನರನು ಚಿಂತಾರಾಹಿತ್ಯನಾಗಿ ಭಗವಧಾಮಕ್ಕೆ ಖಂಡಿತ ವಾಗಿ ಸೇರುತ್ತಾನೆಂದು ಹೇಳಿದ್ದಾರೆ. ಅನಂತರ ಆತನು ಪ್ರಹ್ಲಾದ ಚರಿತ್ರೆಯನ್ನು ಅತ್ಯಂತ ಶ್ರದ್ಧೆಯಿಂದ ಕೇಳುತ್ತಿರುವ ಧರ್ಮರಾಜನನ್ನು ಪ್ರೋತ್ಸಾಹಿಸುತ್ತಾ "ಧರ್ಮರಾಜಾ! ದೇವದೇವನಾದ ಶ್ರೀಕೃಷ್ಣನು ಸಾಮಾನ್ಯ ಮಾನವನಂತೆ ನಿಮ್ಮ ಮನೆಯಲ್ಲಿ ವಾಸವಾಗಿರುವುದರಿಂದ ನೀವು (ಪಾಂಡವರು) ಎಷ್ಟೋ ಭಾಗ್ಯಶಾಲಿಗಳು. ಈ ವಿಷಯವು ಕುರಿತು ತಿಳಿದಿರುವ ಋಷಿ ಮುನಿಗಳು ಯಾವಾಗಲೂ ನಿಮ್ಮ ಮನೆಗೆ ಭೇಟಿ ಮಾಡುತ್ತಿರುತ್ತಾರೆ. ಸಾಧು ಸಂತರ ದಿವ್ಯಾನಂದ ಸುಖ ಹೇತುವಾದ ಶ್ರೀ ಕೃಷ್ಣನು ನಿಮಗೆ ಪರಮಮಿತ್ರನು, ಹಿತೈಷಿಯು, ಬಂಧು, ಆತ್ಮ ನಾಗಿದ್ದಾನೆ. ವಾಸ್ತವದಲ್ಲಿ ಆತನು ನಿಮಗೆ ಆರಾಧ್ಯನೇ ಆಗಿರುವುದರಿಂದ ಒಂದು ಸಂದರ್ಭದಲ್ಲಿ ಆ ದೇವೇಶನು ನಿಮಗೆ ಸೇವಕನಾಗಿ ಮತ್ತೊಮ್ಮೆ ಗುರುವಾಗಿ ಚಲಿಸುತ್ತಿರುತ್ತಾನೆ. ಬ್ರಹ್ಮರುದ್ರಾದಿ ಮಹನೀಯರೇ ಶ್ರೀಕೃಷ್ಣ ತತ್ತ್ವವನ್ನು ಸಂಪೂರ್ಣವಾಗಿ ಮುಕ್ತಾಮುಕ್ತವಾಗಿ ವರ್ಣಿಸಲಾರರು. ಮೌನಧ್ಯಾನ ಭಕ್ತಿ ವೈರಾಗ್ಯಯುಕ್ತರಾಗಿರುವ ಮಹಾಮುನಿಗಳಿಂದ ಭಕ್ತರಕ್ಷಕನೆಂದು ಅರ್ಚಿಸಲ್ಪಡುವ ಆ ದೇವದೇವನು ನಿಮ್ಮ ಸಖ್ಯದಿಂದ ಪ್ರಸನ್ನನಾಗಿರುವನು!" ಎಂದು ಹೇಳಿದ್ದಾರೆ.

ಈ ನಾರದ ಧರ್ಮರಾಜರ ಸಂವಾದವು ಸಾಕ್ಷಾತ್ ಶ್ರೀಕೃಷ್ಣನ ಸನ್ನಿಧಿಯಲ್ಲೇ ಘಟಿಸಿದೆ. ಧರ್ಮರಾಜನು ಶ್ರೀಕೃಷ್ಣನ ಅಗ್ರಪೂಜೆ ಮಾಡಿದ ಅದ್ಭುತವಾದ ಸಂದರ್ಭದಲ್ಲಿ ಜರುಗಿದ ಸಂವಾದ ವಿವರಗಳು ಹೀಗಿವೆ. ಈ ಸಂವಾದವು ಶ್ರೀಮದ್ಭಾಗವತದಲ್ಲಿ ಸಪ್ತಮ ಸ್ಕಂದದಲ್ಲಿ ಚರ್ಚಿಸಲ್ಪಟ್ಟಿದೆ.

ಮಾಯಾವಿಯಾದ ಮಯನೆಂಬ ದಾನವನು ಶಿವನ ಯಶಸ್ಸನ್ನು ಭಂಗಿಸಿರಲು ಆ ಪರಿಸ್ಥಿತಿಯಲ್ಲಿ ಶ್ರೀಕೃಷ್ಣನೇ ಮಹದೇವನನ್ನು ರಕ್ಷಿಸಿದನೆಂದು ನಾರದಮುನಿ ತಿಳಿಸಿದ್ದಾರೆ. ಆ ವಿಷಯವನ್ನು ಕುರಿತು ಧರ್ಮರಾಜ ಕುತೂಹಲವನ್ನು ತೋರ್ಪಡಲು ನಾರದರು ತ್ರಿಪುರಾಸುರ ಸಂಹಾರ ವಿಷಯವನ್ನು ವಿವರಿಸಿದ್ದಾರೆ.

ಕೃಷ್ಣಕಾರುಣ್ಯದ ಮೂಲಕ ಶಕ್ತಿ ಸಂಪನ್ನರಾದ ದೇವತೆಗಳು ದಾನವರನ್ನು ಸೋಲಿಸಲು ಅವರೆಲ್ಲರೂ ಮಯ ದಾನವನನ್ನು ಆಶ್ರಯಿಸಿದ್ದಾರೆ. ಆಗ ಮಯನು ಸ್ವರ್ಣ, ರಜತ, ಕಬ್ಬಿಣ ಲೋಹಗಳಿಂದ ನಿರ್ಮಿತವಾದ ಪುರಗಳನ್ನು ನಿರ್ಮಿಸಿಕೊಟ್ಟಿದ್ದಾನೆ. ಅವು ಅಸಾಧಾರಣವಾದ ವಸ್ತು ಸಾಮಗ್ರಿಗಳನ್ನು ಹೊಂದಿದುದಾಗಿದ್ದು ವಿಮಾನಗಳನ್ನು ಹೋಲಿವೆ. ತ್ರಿಪುರಗಳನ್ನು ಹೊಂದಿದ ಅಸುರರು ಬಲೋನ್ಮತ್ತರಾಗಿ ಮರಳಿ ಮೂರು ಲೋಕಗಳನ್ನು ಧ್ವಂಸ ಮಾಡಲಾರಂಭಿಸಿದ್ದಾರೆ. ತ್ರಿಪುರವಾಸದ ಕಾರಣವಾಗಿ ಅಸುರರು ದೇವತೆಗಳಿಗೆ ಅಗೋಚರರಾಗಿದ್ದಾರೆ. ಅನೂಹ್ಯವಾದ ಬಂದೊದಗಿದ ವಿಪತ್ತುನಿಂದ ಚಿಂತಾಕ್ರಾಂತರಾದ ದೇವತೆಗಳು ಶಿವನ ಬಳಿಗೆ ಹೋಗಿ ತಮ್ಮ ಕಷ್ಟಗಳನ್ನು ವಿವರಿಸಿದ್ದಾರೆ. ತಮ್ಮನ್ನು ದಯವಿಟ್ಟು ಕಾಪಾಡಬೇಕೆಂದು ಪ್ರಾರ್ಥಿಸಿದ್ದಾರೆ. ಆಗ ಅಪಾರ ಶಕ್ತಿವಂತನಾದ ಶಿವನು ಅವರಿಗೆ ಅಭಯವಿತ್ತು ಅಸುರರು ವಾಸವಾಗಿದ್ದ ತ್ರಿಪುರಗಳ ಮೇಲೆ ಶರ ವರ್ಷವನ್ನೈದಿದ್ದಾನೆ. ಶಿವನ ಬಾಣದಿಂದ ತ್ರಿಪುರಗಳು ಕಂದಿ ಹೋಗಿವೆ. ಅದರೊಳಗಿನ ಅಸುರರು ಅಸುನೀಗಿದ್ದಾರೆ.ತನ್ನ ಶಕ್ತಿಗೇ ಸವಾಲಿನಂತೆ ಪರಿಣಮಿಸಿದ ಈ ಪರಿಸ್ಥಿತಿಯನ್ನು ಕಂಡ ಮಯ ದಾನವನು ಪ್ರಾಣ ಕಳೆದುಕೊಂಡ ಅಸುರರೆಲ್ಲರನು ತಾನೇ ನಿರ್ಮಿಸಿದ ಅಮೃತ ಕೂಪದಲ್ಲಿ ಹಾಕಿದ್ದಾನೆ.ಅಮೃತ ಸ್ಪರ್ಶವಾಗುತ್ತಲೇ ಅಸುರರೆಲ್ಲರೂ ಪುನಃಶ್ಚೇತನರಾಗಿದ್ದಾರೆ.ಅಮೃತದ ಪ್ರಭಾವದಿಂದ ಅವರುಗಳು ವಜ್ರಾಯುಧಕ್ಕೂ ಚದುರಲಾಗದ ದೇಹಗಳನ್ನು ಹೊಂದಿ ಹೊರಕ್ಕೆ ಬಂದಿದ್ದಾರೆ.ಅದರಿಂದ ಶಿವನು ಚಿಂತಾಗ್ರಸ್ಥನಾಗಿದ್ದಾನೆ.ಅದನ್ನು ಕಂಡ ವಿಷ್ಣು ಪರಮಾತ್ಮನು ಮಯ ದಾನವನು ಸೃಷ್ಟಿಸಿದ ಉತ್ಪಾತವನ್ನು ಶಮನಗೊಳಿಸಲು ಒಂದು ಉಪಾಯವನ್ನು ಆಲೋಚಿಸಿದ್ದಾನೆ.

ಈ ಉಪಾಯದನುಸಾರ ವಿಷ್ಣುವು ಗೋರೂಪವನ್ನು ಧರಿಸಿದ್ದಾರೆ. ಬ್ರಹ್ಮನು ಗೋವತ್ಸರೂಪವನ್ನು ಧಾರಣೆ ಮಾಡಿದ್ದಾನೆ. ಇಬ್ಬರೂ ಕೂಡಿ ತ್ರಿಪುರಗಳಲ್ಲಿ ಪ್ರವೇಶಿಸಲು ವಿಷ್ಣುವು ಅಮೃತಕೂಪದಲ್ಲಿರುವ ಅಮೃತವನ್ನು

ಪೂರ್ತಿಯಾಗಿ ಕುಡಿದು ಬಿಟ್ಟಿದ್ದಾನೆ. ಅಸುರರು ಗೋವನ್ನು, ಗೋವತ್ಸವನ್ನು, ನೋಡುತ್ತಿದ್ದರೂ ಭಗವನ್ಮಾಯೆಗೊಳಗಾಗಿ ಅದರ ಕೆಲಸವನ್ನು ತಡೆಗಟ್ಟಲಿಲ್ಲ. ಗೋವು ಕರುಗಳು ಅಮೃತವನ್ನು ಕುಡಿದು ಬಿಟ್ಟಿವೆಯೆಂದು ಕೇಳುತ್ತಲೇ ಮಯನು ವಿಧಿ ಲಿಖಿತವನ್ನು ಯಾರೂ ತಡೆಯಲಾರರೆಂದು ಇತರ ಅಸುರರ ಮುಂದೆ ಹೇಳಿದ್ದಾನೆ.

ಆಗ ದೇವದೇವನಾದ ಶ್ರೀಕೃಷ್ಣನು ಸ್ವಶಕ್ತಿ ದ್ವಾರ ರಥ, ಸಾರಥಿ,ಧ್ವಜ,ಅಶ್ವಗಳನ್ನು,ಗಜ,ಧನುರ್ಬಾಣಗಳನ್ನು, ಕವಚವೇ ಮೊದಲಾದ ಸಮಸ್ತ ಪರಿಕರಗಳನ್ನು ಶಿವನಿಗೆ ಧಾರೆಯೆರೆದಿದ್ದಾನೆ.ಆ ವಿಧವಾಗಿ ಸಕಲ ಸಿದ್ಧತೆಗಳಿಂದ ಸನ್ನದ್ಧನಾದ ಶಿವನು ದಾನವರೊಂದಿಗೆ ಹೋರಾಡಲು ಸನ್ನದ್ಧನಾಗಿ ಮಧ್ಯಾಹ್ನ ಕಾಲಕ್ಕೆ ತ್ರಿಪುರಗಳನ್ನು ನಾಶ ಮಾಡಿದ್ದಾನೆ.ಆಗ ದೇವತೆಗಳು, ಋಷಿಗಳು, ಪಿತೃದೇವತೆಗಳು,ಸಿದ್ಧಗಣಗಳು, ಇತರ ಮಹನೀಯರು ಜಯಜಯಕಾರಗಳನ್ನು ಘೋಷಿಸುತ್ತಾ ಶಿವನ ಮೇಲೆ ಪುಷ್ಪವೃಷ್ಟಿಯನ್ನೇಗರೆದಿದ್ದಾರೆ.ಅಪ್ಸರೆಯರು ಆನಂದ ಭರಿತರಾಗಿ ನೃತ್ಯಗೈದಿದ್ದಾರೆ. ಈ ವಿಧವಾಗಿ ತ್ರಿಪುರಗಳನ್ನು ನಾಶಮಾಡಿ ಶಿವನು ತ್ರಿಪುರಾರಿಯಾಗಿ ಹೆಸರು ಪಡೆದಿದ್ದಾನೆ. ನಂತರ ಆತನು ಬ್ರಹ್ಮಾದಿ ದೇವತೆಗಳಿಂದ ಪೂಜಿತವಾಗಿ ತನ್ನ ಲೋಕಕ್ಕೆ ಹೊರಟು ಹೋಗಿದ್ದಾನೆ.ಶ್ರೀಕೃಷ್ಣನು ತೋರಿದ ಅದ್ಭುತವಾದ ಲೀಲೆಯನ್ನು ಪ್ರಾಮಾಣಿಕರಿಂದ ಕೇಳುವುದರಿಂದ ಎಲ್ಲರೂ ಪುನೀತರಾಗುತ್ತಾರೆಂದು ನಾರದ ಮುನಿ ಧರ್ಮರಾಜನಿಗೆ ಹೇಳಿದ್ದಾರೆ.

ಪ್ರಹ್ಲಾದನ ವೃತ್ತಾಂತವನ್ನು ತ್ರಿಪುರನಾಶವನ್ನು ನಾರದರಿಂದ ಕೇಳಿಕೊಂಡ ಧರ್ಮರಾಜ ಆ ಮಹನೀಯನ ಮೂಲಕ ಮಾನವನ ಸಹಜ ಧರ್ಮವನ್ನು, ವರ್ಣಾಶ್ರಮ ಧರ್ಮವನ್ನು ಕೂಡಾ ಕೇಳಿ ತಿಳಿಯಬೇಕೆಂದುಕೊಂಡಿದ್ದಾನೆ.ನಾರದ ಮುನಿ ಮಾನವರ ಪರಮಗುರುವೆಂದು ಧರ್ಮರಾಜನಿಗೂ ಗೊತ್ತು. ಮಾನವರಿಗೆ ಭಕ್ತಿಯೋಗವನ್ನು ಕಲಿಸಲೆಂದೇ ನಾರದಮುನಿ ಭಕ್ತಿ ಸೂತ್ರಗಳನ್ನು ಹೇಳಿ ಕೊಟ್ಟಿದ್ದಾರೆ.ನಿಜದಲ್ಲಿ ಮಾನವನಾದವನು ಧರ್ಮದ ಕುರಿತು, ಪರಿಪೂರ್ಣ ಜೀವನವನ್ನು ಕುರಿತು ನಾರದಮುನಿಯಿಂದಲೇ ಗುರು - ಶಿಷ್ಯ ಪರಂಪರೆಯಲ್ಲಿಯೇ ಉಪದೇಶ ಪಡೆದುಕೊಳ್ಳಬೇಕು. ಧರ್ಮರಾಜನ ಜಿಜ್ಞಾಸೆಯನ್ನರಿತು ಆನಂದಿಸಿದ ನಾರದಮುನಿ ಕಡೆಗೆ ಸರ್ವಜೀವ ಸಂರಕ್ಷಕನಾದ ಶ್ರೀ ಕೃಷ್ಣನಿಗೆ ನಮಸ್ಕರಿಸಿ ತಾನು ನಾರಾಯಣನಿಂದ ಕೇಳಿಸಿಕೊಂಡ ಸನಾತನ ಧರ್ಮ ವಿವರಿಸಲು ಮೊದಲಿಟ್ಟಿದ್ದಾನೆ.

ದೇವದೇವನಾದ ಶ್ರೀಹರಿಯೇ ಸಮಸ್ತ ವೇದಜ್ಞಾನ ಸಾರವೂ, ಸಮಸ್ತ ಧರ್ಮಮೂಲವೂ,ಪರಮಪ್ರಾಮಾಣಿಕರಿಗೆ ಸ್ಮೃತಿಯೇ ಆಗಿದ್ದಾನೆ. ಅದನ್ನೇ ಧರ್ಮವಾಗಿ ಸ್ವೀಕರಿಸಬೇಕು. ಇದರ ಆಧಾರವಾಗೇ ಮನಸ್ಸು,ಆತ್ಮ, ದೇಹಗಳಿಂದ ಸಮಸ್ತವೂ ಸಂತೃಪ್ತಿ ಪಡೆಯುತ್ತವೆ. ಸತ್ಯ, ದಯ, ತಪಸ್ಸು (ಪ್ರತ್ಯೇಕ ದಿನಗಳಲ್ಲಿ ಉಪದೇಶಿಸುವುದು) ದಿನಕ್ಕೆರಡು ಬಾರಿ, ಸ್ನಾನವನ್ನು ಮಾಡುವುದು,ಸಹನೆ,ಒಳ್ಳೆಯದು ಕೆಟ್ಟದೆಂಬ ವಿವೇಚನೆ,ಮನೋನಿಗ್ರಹ,ಇಂದ್ರಿಯ ನಿಗ್ರಹ, ಅಹಿಂಸೆ, ಬ್ರಹ್ಮಚರ್ಯ,ದಾನ,ಶಾಸ್ತ್ರಾಧ್ಯಯನ,ಸರಳತೆ, ಸಂತೋಷ ಸಾಧು ಜನ ಸೇವೆ, ಅನಗತ್ಯವಾದ ವ್ಯಾಪ್ತಿಗಳನ್ನು ನೆಮ್ಮದಿಯಿಂದ ಬೀಳ್ಕೊಡುವುದು ಅಗತ್ಯವಾದ ಕಾರ್ಯಗಳ ವ್ಯರ್ಥತೆಯನ್ನು ಗಮನಿಸುವುದು. ಮೌನವಾಗಿ ಗಂಭೀರವಾಗಿರುವುದು, ವ್ಯರ್ಥ ಪ್ರಸಂಗಗಳನ್ನು ಮಾಡದಿರುವುದು ಆತ್ಮಾನಾತ್ಮ ವಿವೇಕ, ಜೀವಿಗಳಿಗೆಲ್ಲಾ (ಮಾನವರಿಗೆ, ಪ್ರಾಣಿಗಳಿಗೂ) ಸಹಾ ಸಮಾನವಾಗಿ ಆಹಾರವನ್ನು ಕೊಡುವುದು, ಪ್ರತಿಜೀವಿಯನ್ನು (ಪ್ರಮುಖವಾಗಿ ಮಾನವನ)ಭಗವದಂಶವೆಂದು ವಂದಿಸುವುದು, ದಾಸ್ಯ ಮಾಡುವುದು,ಸಖ್ಯ ಮಾಡುವುದು,ಆತ್ಮನಿವೇದನೆ ವೆಂಬುದು ಮಾನವರು ಅನುಸರಿಸಬೇಕಾದ ಧರ್ಮಗಳು.ಈ ಲಕ್ಷಣಗಳನ್ನು ಹೊಂದಿದ ಮಾನವನು ದೇವೇಶನನ್ನು ಪ್ರಸನ್ನನಾಗಿಸಬಲ್ಲ.

ಗರ್ಭಧಾನಾದಿ ಸಂಸ್ಕಾರಗಳಿಂದ ಸಂಸ್ಕರಿಸಲ್ಪಟ್ಟವರೇ ದ್ವಿಜರು ಅಂತಹ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು,ತಮ್ಮ ವಂಶಾವಳಿಯ ಮೂಲಕ, ನಡುವಳಿಕೆಯ ಮೂಲಕ ಪುನೀತರಾಗಿ ಭಗವಧಾರಾಧನೆ,ವೇದಾಧ್ಯಯನವನ್ನು, ದಾನಗಳನ್ನು ಕೈಗೊಳ್ಳಬೇಕು.ಮನೋನಿಗ್ರಹ ಇಂದ್ರಿಯ ನಿಗ್ರಹ, ತಪಸ್ಸು, ಶುಚಿ, ಕ್ಷಮಾಗುಣ ಸರಳತೆ ಜ್ಞಾನದಯೆ, ಸತ್ಯಸಂಧತೆ, ಭಗವದಾಶ್ರಯ ಎನ್ನುವುದು ಬ್ರಾಹ್ಮಣರ ಲಕ್ಷಣಗಳು,ಯುದ್ಧದಲ್ಲಿ ಶೌರ್ಯವು, ವೀರತ್ವವು, ಧೈರ್ಯ ತೇಜಸ್ಸು ತ್ಯಾಗ, ದೇಹಾ ಗತ್ಯಗಳ ನಿಯಂತ್ರಣ, ಕ್ಷಮೆ, ಬ್ರಾಹ್ಮಣರ ಕುರಿತು ಅನುರಕ್ತಿ ಪ್ರಸನ್ನತೆ, ಸತ್ಯಸಂಧತೆಯೆನ್ನುವುವು ಕ್ಷತ್ರಿಯ ಗುಣಗಳು. ಗುರುವು,ವಿಷ್ಣುವು, ಕುರಿತು ಭಕ್ತಿ ಹೊಂದಿರುವುದು, ಧರ್ಮಾರ್ಥ ಕಾಮಗಳ ಸಿದ್ಧಿಗಾಗಿ ಯತ್ನಿಸುವುದು, ಗುರುಶಾಸ್ತ್ರ ವಾಕ್‌ಗಳನ್ನು ವಿಶ್ವಾಸ ಹೊಂದುವುದು, ಧನಾರ್ಜನೆಗಾಗಿ ಪ್ರಾಮಾಣಿಕವಾಗಿ ಯತ್ನಿಸುವುದು ಇವು ವೈಶ್ಯರ ಲಕ್ಷಣಗಳು. ಪತಿಯನ್ನು ಸೇವಿಸುವುದು. ಅನುಕೂಲವತಿಯಾಗಿರುವುದು,ಪತಿಯ ಕಡೆಯವರ ಬಂಧು ಮಿತ್ರರೊಂದಿಗೆ ಅನುಕೂಲಳಾಗಿರುವುದು,ಪತಿ ಮಾಡುವ ವ್ರತಗಳನ್ನು ಪಾಲಿಸುವುದು, ಎಂಬ ನಾಲ್ಕು ನಿಯಮಗಳನ್ನು ಪತಿವ್ರತೆಯಾದ ಸ್ತ್ರೀಯು ಪಾಲಿಸಬೇಕು. ಸಾಧ್ವಿಯಾದ ಸ್ತ್ರೀ ಲೋಭರಹಿತಳಾಗಿ ಎಲ್ಲಾ ಪರಿಸ್ಥಿತಿಗಳಲ್ಲಿ ಸಂತುಷ್ಟರಾಗಿರುವುದು ಗೃಹಕಲಾಪಗಳನ್ನು ದಕ್ಷತೆಯಿಂದ ನಿರ್ವಹಿಸುತ್ತಾ ಇರಬೇಕು. ಸತ್ಯವಾದ, ಪ್ರಿಯವಾದ ನುಡಿಗಳನ್ನು ಹೇಳುವಂತವಳಾಗಬೇಕು. ಸಮಾಧಾನದಿಂದಿರುವವಳಾಗಬೇಕು.ಶುಚಿ-ಶುಭ್ರತೆಗಳಿಂದ ಕೂಡಿರುವಳಾಗಬೇಕು.ಈ ರೀತಿಯಾಗಿ ಆಕೆ ಪತಿತನಾದ ಪತಿಯನ್ನು ಅನುರಾಗದಿಂದ ಸೇವಿಸಬೇಕು.ಲಕ್ಷ್ಮಿ ದೇವಿಯಂತೆ ಪತಿಯನ್ನು ಸೇವಿಸಿದ ವನಿತೆ ಭಕ್ತನಾದ ಪತಿಯೊಂದಿಗೆ ವೈಕುಂಠಕ್ಕೆ ಹೋಗಿ ನಿತ್ಯ ಸುಖಿಯಾಗುತ್ತಾಳೆಂದು ನಾರದಮುನಿ ಬಣ್ಣಿಸಿದ್ದಾರೆ.

# ಕರ್ನಾಟಕದ ವೈಷ್ಣವ ದೇವಾಲಯಗಳು

5



# ಹೆಡತಲೆ ಶ್ರೀ ಲಕ್ಷ್ಮಿಕಾಂತ ದೇವಾಲಯ

- ಕೆಂಗೇರಿ ಚಕ್ರಪಾಣಿ
94483 86886

ನಂಜನಗೂಡಿನಿಂದ ಆಗ್ನೇಯಕ್ಕೆ ಸುಮಾರು ಹದಿನಾಲ್ಕು ಕಿ.ಮೀ. ದೂರದಲ್ಲಿರುವ ಗ್ರಾಮ ಹೆಡತಲೆ. ಶಾಸನಗಳಲ್ಲಿ ಎಡತಲೆ ಎಂದು ಕರೆದಿರುವ ಹೆಡತಲೆಯಲ್ಲಿ ಅತ್ಯಂತ ಮನೋಹರವಾದ ಲಕ್ಷ್ಮೀಕಾಂತ ದೇವಾಲಯವಿದೆ. ಹೆಡತಲೆಯ ಊರ ನಡುವೆ ಇರುವ ಲಕ್ಷ್ಮೀಕಾಂತ ದೇವಾಲಯವು ಹೊಯ್ಸಳದೊರೆ ಮೂರನೆಯ ಬಲ್ಲಾಳನ ಕಾಲದಲ್ಲಿ (1292) ನಿರ್ಮಿತವಾದ ಸುಂದರ ಆಲಯವಾಗಿರುವುದು.ದೇವಾಲಯವು ತ್ರಿಕೂಟಾಚಲವಾಗಿದ್ದು ಪ್ರಧಾನ ಗರ್ಭಗುಡಿಯಲ್ಲಿ ಶ್ರೀ ಲಕ್ಷ್ಮಿಕಾಂತ ಸ್ವಾಮಿ ಉತ್ತರ ಗರ್ಭಗುಡಿಯಲ್ಲಿ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ಹಾಗೂ ದಕ್ಷಿಣ ಗರ್ಭಗುಡಿಯಲ್ಲಿ ಶ್ರೀ ವೇಣುಗೋಪಾಲನ ಅಂದದ ಮೂರ್ತಿಗಳಿವೆ. ಪ್ರಧಾನ ಗರ್ಭಗುಡಿಗೆ ಶಿಖರವಿದೆ. ದೇವಾಲಯದ ನವರಂಗವು ನಾಲ್ಕು ಕಂಬಗಳನ್ನು ಹೊಂದಿದ್ದು ಮಧ್ಯದ ಭುವನೇಶ್ವರಿಯು ಮೂರು ಅಡಿ ಆಳವಿದ್ದು, ಕಮಲಗಳ ವಿನ್ಯಾಸದಿಂದ ಕಲಾತ್ಮಕವಾಗಿದೆ. ಕಣಶಿಲೆಯಿಂದ ನಿರ್ಮಿತವಾದ ದೇವಾಲಯವಾದರೂ ಬಳಪದ ಕಲ್ಲಿನಲ್ಲಿ ಮಾಡಿದ ಕಲಾತ್ಮಕತೆ ಎದ್ದು ಕಾಣುತ್ತದೆ.

ಪ್ರಧಾನ ಗರ್ಭಗುಡಿಯಲ್ಲಿರುವ ಲಕ್ಷ್ಮೀಕಾಂತನು ಒಂದು ಸೊಗಸಾದ ಮೂರ್ತಿಯಾಗಿದ್ದು ಸುಮಾರು ಐದು ಅಡಿ ಎತ್ತರವಿದ್ದು ಚರ್ತುಭುಜನಾಗಿರುತ್ತಾನೆ. ದೇವನ ಮೇಲಿನ ಬಲಗೈಯಲ್ಲಿ ಪದ್ಮವನ್ನು ಮೇಲಿನ ಎಡಗೈಯಲ್ಲಿ ಗದೆಯನ್ನು ಹಿಡಿದಿರುವನು ಹಾಗೂ ಕೆಳಗಿನ ಬಲಗೈಯಲ್ಲಿ ಶಂಖವನ್ನು ಎಡಗೈಯಲ್ಲಿ ಚಕ್ರವನ್ನು ಧರಿಸಿರುವನು. ಉತ್ತರ ಗರ್ಭಗುಡಿಯಲ್ಲಿರುವ ನರಸಿಂಹ ಸ್ವಾಮಿಯು ಲಕ್ಷ್ಮಿಯೊಂದಿಗೆ ಅಸೀನನಾಗಿರುವನು ನರಸಿಂಹ ದೇವನ ಮುಖದಲ್ಲಿ ವಿಶೇಷ ಕಳೆಯಿರುವುದು ಸ್ವಾಮಿಯನ್ನು ಏಕಾಗ್ರ ಚಿತ್ತದಿಂದ ನೋಡಿದಾಗ ತಿಳಿಯುವುದು ದಕ್ಷಿಣ ಗರ್ಭಗುಡಿಯಲ್ಲಿರುವ ವೇಣುಗೋಪಾಲ ಸ್ವಾಮಿಯೂ ಸಹಾ ಬಹಳ ಆಕರ್ಷಕವಾಗಿದೆ. ನವರಂಗದಲ್ಲಿ ಲಕ್ಷ್ಮೀಕಾಂತ ಸ್ವಾಮಿಯ ಬಲಭಾಗದಲ್ಲಿ ಶ್ರೀ ಶ್ರೀರಂಗಪ್ರಿಯಸ್ವಾಮಿಗಳಿಂದ ಪ್ರತಿಷ್ಠಾಪಿತವಾದ ಆಂಡಾಳ್ ತಾಯಿಯ ವಿಗ್ರಹವಿದೆ ಬಲಭಾಗದಲ್ಲಿ ಸಮೀಪದ ಶಿಥಿಲ ದೇವಾಲಯದಿಂದ ತಂದಿರಿಸಿರುವ ಚನ್ನಕೇಶವನ ಮೂರ್ತಿಯಿದೆ.

**ಚಮತ್ಕಾರಿಕ ಹದಿನಾರು ಮುಖಗಳ ಚಾವಡಿ......**

ಲಕ್ಷ್ಮೀಕಾಂತ ದೇವಾಲಯದ ಮುಂದೆ ಪ್ರತ್ಯೇಕವಾಗಿ ಇಪ್ಪತ್ತನಾಲ್ಕು ಕಂಬಗಳ ಮುಖಮಂಟಪವಿದೆ. ವೃತ್ತಾಕಾರದ ಮುಖಮಂಟಪದಲ್ಲಿ ಹದಿಮೂರು ಭುವನೇಶ್ವರಿಗಳಿದ್ದು ಮಧ್ಯದ ಭುವನೇಶ್ವರಿಯು ಆಳವಾಗಿ ಕಲಾತ್ಮಕವಾಗಿದೆ. ಮಂಟಪಕ್ಕೆ ನಾಲ್ಕು ದಿಕ್ಕಿನಲ್ಲಿಯೂ ಪ್ರವೇಶದ್ವಾರವಿದೆ. ದೇವಾಲಯದ ಜೀರ್ಣೋದ್ಧಾರ ಸಂದರ್ಭದಲ್ಲಿ ಉತ್ತರ ದಿಕ್ಕಿನಲ್ಲಿದ್ದ ದ್ವಾರವನ್ನು ತೆರೆಯಲಾಗಿದೆ. ಮಂಟಪದಲ್ಲಿ ಇಪ್ಪತ್ತನಾಲ್ಕು ಕಂಬಗಳಿದ್ದು ಸುತ್ತಲೂ ಕುಳಿತುಕೊಳ್ಳಲು ಹದಿನಾರು ಜಗುಲಿಗಳಿವೆ. ಹೆಡತಲೆಯಲ್ಲಿ ಹೊಯ್ಸಳರ ಕಾಲದಲ್ಲಿ ಭೀಮಣ್ಣ ದಂಡನಾಯಕ ಎಂಬ ನಾಯಕನು ಆಳ್ವಿಕೆ ನಡೆಸುತ್ತಿದ್ದನು (ಇದಕ್ಕೆ ಶಾಸನಾಧಾರವೂ ಲಭ್ಯವಿದೆ.) ಈತನಿಗೆ ಹದಿನಾರು ಜನ ಅಳಿಯಂದಿರು ಹಿಂದಿನ ಕಾಲದಲ್ಲಿ ಅತ್ತೆಯು ಅಳಿಯನ ಮುಖವನ್ನು ನೇರವಾಗಿ ನೋಡುವಂತಿರಲಿಲ್ಲ. ಇದಕ್ಕೆ ಆತನ ಮೇಲಿನ ಗೌರವವು ಕಾರಣವಿರಬೇಕು. ಭೀಮಣ್ಣ ದಂಡನಾಯಕನು ತನ್ನ ಮಗಳು ಅಳಿಯಂದಿ



ರನ್ನೂ ನೋಡ ಬೇಕೆನಿಸಿದಾಗ ಎಲ್ಲರನ್ನು ಒಟ್ಟಿಗೆ ಕರೆಸುತ್ತಿದ್ದನು.ದಂಪತಿಗಳು ಮಂಟಪದ ಉತ್ತರ ಭಾಗದಲ್ಲಿ ಆಸೀನ ರಾಗುತ್ತಿದ್ದರು.ಮಗಳು ಮತ್ತು ಅಳಿಯಂದಿರು ತಲಾ ಒಂದೊಂದು ಜೋಡಿ ಅಲ್ಲಿರುವ ಹದಿನಾರು ಜಗುಲಿಗಳ ಮೇಲೆ ಕೂಡುತ್ತಿದ್ದರು. ಇಲ್ಲಿ ವಿಶೇಷವೇನೆಂದರೆ ರಾಜನಿಗೆ ಹದಿನಾರು ಜನ ದಂಪತಿಗಳು ಕಾಣುತ್ತಿದ್ದರು. ಆದರೆ ರಾಣಿಗೆ ಕೇವಲ ಹೆಣ್ಣು ಮಕ್ಕಳು ಮಾತ್ರ ಕಾಣುತ್ತಿದ್ದು ಯಾವ ಅಳಿಯನ.ಮುಖವೂ ಕಾಣುವುದಿಲ್ಲ. ಪ್ರತಿಯೊಬ್ಬ ಅಳಿಯಂದಿರ ಮುಂದೆ ಯಾವುದಾದರೊಂದು ಕಂಬವು ಅಡ್ಡ ಬಂದು,ಆಕೆಗೆ ಅಳಿಯಂದಿರು ಕಾಣ ದಂತೆ ಚಮತ್ಕಾರವಾಗಿ ನಿರ್ಮಿಸಲಾಗಿದೆ. ಮುಖ ಮಂಟಪವನ್ನು ನಿರ್ಮಿಸಿದ ಅಂದಿನ ವಾಸ್ತು ಶಿಲ್ಪಿಯ ಚಾತುರ್ಯಕ್ಕೆ ತಲೆ ಬಾಗಲೇ ಬೇಕು.ಈ ಚಾವಡಿಗೆ ಹದಿ ನಾರು ಮುಖಗಳ ಚಾವಡಿ ಎಂತಲೂ ಹೆಸರಿದೆ.

ಹೆಡತಲೆಯ ಲಕ್ಷ್ಮೀಕಾಂತ ದೇವಾ ಲಯದ ಅರ್ಚಕರಾದ ಶ್ರೀ ನಾರಾಯಣ್ ರವರು ಮುಖಮಂಟಪದ ಕಲಾತ್ಮಕತೆ ಯನ್ನು ಸೊಗಸಾಗಿ ವಿವರಿಸುವುದರಲ್ಲಿ ಸಿದ್ಧಹಸ್ತರು. ಯಾವರೀತಿ ಈ ಕಂಬ ಗಳು ಜಗುಲಿಗಳು ರೂಪಗೊಂಡಿವೆ ಎಂದು ಕಣ್ಣಿಗೆ ಕಟ್ಟುವಂತೆ ವಿವರಿಸು ತ್ತಾರೆ. ಹೆಡತಲೆಯ ದೇವಾಲಯವನ್ನು ದರ್ಶಿಸುವ ಪ್ರವಾಸಿಗ ಮರೆಯದೆ ಶ್ರೀ ನಾರಾಯಣ್‌ರವರಿಂದ ಕೇಳಿ ತಿಳಿದು ಕೊಂಡರೆ ಆತನಿಗೆ ಈ ಮಂಟಪ ವಿಶೇ ಷತೆಯ ಅರಿವಾಗುವುದು.



ಹೆಡತಲೆಯ ಲಕ್ಷ್ಮೀಕಾಂತ ದೇವಾಲಯವನ್ನು ಶ್ರೀ ಧರ್ಮಸ್ಥಳ ಮಂಜುನಾಥ ಧರ್ಮೋತ್ಥಾನ ಟ್ರಸ್ಟ್ ಮತ್ತು ಟಿ.ವಿ.ಎಸ್. ಕಂಪನಿಯವರು ಮೂಲ ಸ್ವರೂಪದಂತೆಯೆ ಜೀರ್ಣೋ ದ್ಧಾರ ಮಾಡಿರುವರು. ಶ್ರೀ ಶ್ರೀ ರಂಗಪ್ರಿಯಸ್ವಾಮಿಗಳು ತಮ್ಮ ಆರಾಧ್ಯದೈವವಾದ ಲಕ್ಷ್ಮೀಕಾಂತ ಸ್ವಾಮಿಗೆ ವಿಶೇಷ ಸೇವೆಯನ್ನು ಸಲ್ಲಿಸಿರುವರು. ಪೂಜ್ಯರ ಸ್ವಂತ ಊರು ಹೆಡತಲೆಯಾಗಿರುತ್ತದೆ. ಸ್ವತಃ ಸಂಸ್ಕೃತ ಪಂಡಿತರಾಗಿದ್ದ ಶ್ರೀಗಳು ಹಲವಾರು ಆಧ್ಯಾತ್ಮಿಕ ಗ್ರಂಥಗಳ ಕರ್ತೃ ಹಾಗೂ ಅಷ್ಟಾಂಗಯೋಗ ವಿಜ್ಞಾನ ಕೇಂದ್ರದ ಸ್ಥಾಪಕರೂ ಸಹ ಶ್ರೀಗಳು ಕ್ರಿ.ಶ. 2002 ರಲ್ಲಿ ಆ ದೇವಾಲಯದಲ್ಲಿ ಆಂಡಾಳ್ ತಾಯಿಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಹಾಗೂ ದೇವಾಲಯಕ್ಕೆ ಬ್ರಹ್ಮರಥ ಮತ್ತು ದೇವಾಲಯದ ಮುಂದೆ ಧ್ವಜಸ್ತಂಭವನ್ನು ಸ್ಥಾಪಿಸಿದ್ದಾರೆ. ಕ್ರಿ.ಶ.2012 ರಲ್ಲಿ ಸ್ವಾಮೀಜಿಯವರು ವೈಕುಂಠ ವಾಸಿಗಳಾದರು. ಶ್ರೀ ಶ್ರೀಗಳ ಬೃಂದಾವನ ಮಂದಿರವು ಲಕ್ಷ್ಮೀಕಾಂತ ದೇವಾಲಯದ ಸಮೀಪದಲ್ಲಿದೆ.

ಹೆಡತಲೆಯ ಸಮೀಪ ಹೆಮ್ಮರಗಾಲ ಎಂಬ ಗ್ರಾಮವಿದ್ದು ಅಲ್ಲಿ ಸುಂದರವಾದ ಸಂತಾನ ಗೋಪಾಲಕೃಷ್ಣನ ದೇವಾಲಯವಿದೆ.ಕೌಂಡಿನ್ಯ ಮಹರ್ಷಿಗಳಿಂದ ಪೂಜಿತನಾದ ವೇಣುಗೋಪಾಲಸ್ವಾಮಿಯನ್ನು ಸಂತಾನ ಭಾಗ್ಯವಿಲ್ಲದ ದಂಪತಿಗಳು ಈ ದೇವಾಲಯಕ್ಕೆ ಬಂದು ಸ್ವಾಮಿಗೆ ಸೇವೆಯನ್ನು ಸಲ್ಲಿಸಿದರೆ ಅವರಿಗೆ ಮಕ್ಕಳ ಭಾಗ್ಯ ಲಭಿಸುವುದೆಂಬ ನಂಬಿಕೆ ಇಲ್ಲಿಯ ಭಕ್ತರದ್ದು.

**ಹೀಗೆ ಬನ್ನಿ...**

ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕು ಹೆಡತಲೆಯ ಲಕ್ಷ್ಮೀಕಾಂತ ದೇವಾಲಯವು ನಂಜನಗೂಡಿನಿಂದ ಹದಿನಾಲ್ಕು ಕಿ.ಮೀ. ದೂರದಲ್ಲಿದೆ. ನಂಜನ ಗೂಡು ಚಾಮರಾಜನಗರ ರಸ್ತೆಯಲ್ಲಿ ಬದನವಾಳು ಎಂಬ ಗ್ರಾಮ ಸಿಗುತ್ತದೆ. ಊರಿನ ಆರಂಭದಲ್ಲಿ ಬಲಗಡೆ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಅಂದವಾದ ಕಮಾನು ಗೋಚರಿಸುತ್ತದೆ. ಅಲ್ಲಿ ತಿರುಗಿ ಮುಂದೆ ಸಾಗಿದರೆ ಮೊದಲು ಹೆಡತಲೆ ನಂತರ ಹೆಮ್ಮರಗಾಲ ಸಿಗುವುದು.



# ಮೇಲುಕೋಟೆ ಚೆಲುವ ರಾಯನ ವೈರಮುಡಿ ಉತ್ಸವ

- ಶ್ರೀಮತಿ. ಸುಮಾ ಚಂದ್ರಶೇಖರ್
9880060354

ಇದೇ ಮಾರ್ಚ್ 24 ರಂದು ಮೇಲುಕೋಟೆಯ ಚೆಲುವ ರಾಯನಿಗೆ ವೈರಮುಡಿ ಉತ್ಸವ. ನಾಡಿನೆಲ್ಲೆಡೆಯಿಂದ ಭಕ್ತ ಸಮೂಹ ಊಧೋ ಉಧೋ ಎಂದು ಬಂದು ನೆರೆಯುತ್ತದೆ. ಏಕೆ? ಏನಿದೆ ಅಂಥ ಆಕರ್ಷಣೆ ಈ ಉತ್ಸವದಲ್ಲಿ?

ಈಗ ನಾಡಿನೆಲ್ಲೆಡೆ ಜಾತ್ರೆಗಳ ಸಮಯ,ಸಡಗರ. ಜನಪದದ ಸಮುದಾಯ ಬದುಕಿನ ಅತ್ಯುತ್ತಮ ನಿದರ್ಶನ. ಈ ಜಾತ್ರೆಗಳಿಗೆ ಪ್ರತಿಯೊಂದಕ್ಕೂ ತಮ್ಮದೇ ಆದ ಐತಿಹ್ಯ, ಸ್ಥಳ ಪುರಾಣಗಳುಂಟು. ಜನರ ಬದುಕಿನ ಹಸನಾದ ಮುಖ ಈ ಜಾತ್ರೆಗಳು. ದಿನನಿತ್ಯದ ಇತಿಮಿತಿಗಳನ್ನು ಮರೆತು ಜನೋಲ್ಲಾಸದಲ್ಲಿ ಮೈಮರೆಸಿ ಬಿಡುತ್ತವೆ ಈ ದೈವ-ಜನಜೀವೋತ್ಸವಗಳು. ದೈವದಾಸರೆಯಲ್ಲಿ ಬದುಕಿನ ಸವಾಲುಗಳನ್ನು ಎದುರಿಸಲು ಅಂತಃಸತ್ವವನ್ನು ಧಾರೆಯೆರೆಯುತ್ತವೆ. ಈ ಉತ್ಸವಗಳು ಪೀಳಿಗೆಯಿಂದ ಪೀಳಿಗೆಗೆ ಬಳುವಳಿಯಾಗಿ ಜನ ಪದಕ್ಕೆ ಚಿರಂತನ, ಚಿರನೂತನ ಸ್ವತ್ತಾಗಿದಕ್ಕಿರುವುದೇ ಜಾತ್ರೆಗಳ ವಿಶೇಷ.

ದಕ್ಷಿಣ ಭಾರತದ ಪ್ರಸಿದ್ಧ ಪುಣ್ಯಕ್ಷೇತ್ರಗಳಲ್ಲಿ ಮೇಲುಕೋಟೆಯೂ ಒಂದು. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನಲ್ಲಿರುವ ಈ ಕ್ಷೇತ್ರಕ್ಕೆ ತಿರುನಾರಾಯಣಪುರ ಎಂದೂ ಹೆಸರಿದೆ. 12ನೇ ಶತಮಾನದಲ್ಲಿ ಶ್ರೀ ರಾಮಾನುಜಾಚಾರ್ಯರು ಇಲ್ಲಿ 12 ವರ್ಷಗಳ ಕಾಲ ತಂಗಿದ್ದರಂತೆ. ಆದ್ದರಿಂದಲೇ ಇದು ಶ್ರೀ ವೈಷ್ಣವರ ಪ್ರಮುಖ ಭಕ್ತಿ ಕೇಂದ್ರ ಎನಿಸಿದೆ.

ಮೇಲುಕೋಟೆಯ ಬೆಟ್ಟದ ಮೇಲೆ ಯೋಗನರಸಿಂಹ ನೆಲೆಸಿದ್ದಾನೆ.ದೇಗುಲದಲ್ಲಿರುವ ಉತ್ಸವಮೂರ್ತಿ ಲೋಹದ ವಿಗ್ರಹದ ಚೆಲುವ ನಾರಾಯಣ ಸ್ವಾಮಿಯನ್ನು 'ರಾಮಪ್ರಿಯ'ಎಂದೂ ಕರೆಯುತ್ತಾರೆ. ತ್ರೇತಾಯುಗದಲ್ಲಿ ರಾಮ ಈ ವಿಗ್ರಹವನ್ನು ಪೂಜಿಸುತ್ತಿದ್ದು ಬಳಿಕ ಚಂದ್ರವಂಶದ ರಾಜನಾದ ಶ್ರೀಕೃಷ್ಣನಿಗೆ ಇದು ಹಸ್ತಾಂತರಿಸಲ್ಪಟ್ಟಿತ್ತು. ಹೀಗಾಗಿ ರಾಮ, ಕೃಷ್ಣ - ಇಬ್ಬರೂ ಪೂಜಿಸಿದ ವಿಗ್ರಹ ಇದು ಎಂದು ಪ್ರತೀತಿ. ಪ್ರತಿವರ್ಷವೂ ಮೂರ್‍ನಾಲ್ಕು ಲಕ್ಷ ಜನರನ್ನು ಸೆಳೆಯುವ ವೈರಮುಡಿ ಉತ್ಸವ ನಡೆಯುವುದು ಇಲ್ಲಿನ ವಿಶೇಷ.ಈ ಉತ್ಸವದ ಸಂದರ್ಭದಲ್ಲಿ ಇಡಿಯ ಮೇಲುಕೋಟೆಯಲ್ಲೆಲ್ಲ ಹಬ್ಬದ ವಾತಾವರಣ ನೆಲೆಯೂರಿರುತ್ತದೆ.

## ಪುರಾಣ ಪ್ರಗಾಥೆ

ಕೃತಯುಗದಲ್ಲಿ ದತ್ತಾತ್ರೇಯರು ಇಲ್ಲಿನ ವೇದಪುಷ್ಕರಣೀ ತೀರದಲ್ಲಿ ತಮ್ಮ ನಾಲ್ಕು ಶಿಷ್ಯರಿಗೆ ಚತುರ್ವೇದಗಳನ್ನು ಉಪದೇಶಿಸಿದ್ದರಿಂದ ಇದು ವೇದಾದ್ರಿ ಎಂದೂ, ನರ-ನಾರಾಯಣರು ಇಲ್ಲಿ ನೆಲೆಸಿ ತಪಸ್ಸು ಮಾಡಿದ್ದರಿಂದ ದಕ್ಷಿಣಬದರಿ ಎಂದೂ, ಕೃತಯುಗದಲ್ಲಿ ಸನಕಾದಿ ಮುನಿ ವಂದ್ಯರು ನಾರಾಯಣನ ಮೂರ್ತಿಯನ್ನು ಇಲ್ಲಿ ಪ್ರತಿಷ್ಠಿಸಿ ಪೂಜಿಸಿದ್ದರಿಂದ ನಾರಾಯಣಾದ್ರಿ ಎಂದೂ,ದ್ವಾಪರದಲ್ಲಿ ಕೃಷ್ಣ - ಬಲರಾಮರು ಉತ್ಸವಮೂರ್ತಿಯನ್ನು ಇಲ್ಲಿಗೆ ತಂದು ಸೇರಿಸಿ ಕೆಲಕಾಲ ಇಲ್ಲೇ ಇದ್ದು ಆರಾಧಿಸಿದ್ದರಿಂದ ಯಾದವಾದ್ರಿ ಎಂದು,ಕಲಿಯುಗದಲ್ಲಿ ಯತಿಶ್ರೇಷ್ಠ ಆಚಾರ್ಯ ರಾಮಾನುಜರಿಂದ ಪುನರುಜ್ಜೀವನಗೊಂಡದ್ದರಿಂದ ಯತಿಶೈಲ ಎಂದೂ, ಮೈಸೂರು ಅರಸರ ಕಾಲದಲ್ಲಿ ಕೋಟೆ ಕಟ್ಟಲ್ಪಟ್ಟಿದ್ದರಿಂದ ಮೇಲುಕೋಟೆ ಎಂದೂ ಈ ಊರೂ ಹೆಸರು ಪಡೆದಿದೆ.

## ವೈರಮುಡಿಯ ರೋಚಕತೆ!

ಕೃಷ್ಣಾವತಾರ ಕಾಲದಲ್ಲೊಮ್ಮೆ ಪ್ರಹ್ಲಾದನ ಮೊಮ್ಮಗನಾದ ವಿರೋಚನನು ಕ್ಷೀರಾಬ್ಧಿಶಾಯಿಯಾದ ಶ್ರೀಮನ್ನಾರಾಯಣನ ಮುಡಿಯಿಂದ ಈ ವಜ್ರಕಿರೀಟವನ್ನು ಅಪಹರಿಸಿಕೊಂಡು ಹೋಗಿ ಪಾತಾಳದಲ್ಲಿ ಅಡಗಿದನಂತೆ. ಆಗ ಗರುಡನು ಏಕಾಂಗಿಯಾಗಿ ಪಾತಾಳಕ್ಕೆ ಲಗ್ಗೆಯಿಟ್ಟು ಆ ರಾಕ್ಷಸನನ್ನು ಸಂಹರಿಸಿ ಈ ವಜ್ರಕಿರೀಟವನ್ನು ಮರಳಿ ವೈಕುಂಠಕ್ಕೆ ಒಯ್ಯುತ್ತಿದ್ದನಂತೆ. ಹಾಗೆ ಹಾರಿ ಹೋಗುತ್ತಿರುವಾಗ ಈ ಯಾದವಾದ್ರಿಯ ಬಳಿ ಈತನ ವೇಗ ಕುಂಠಿತವಾಯಿತಂತೆ. ಏಕೆಂದು ಗರುಡನು ಆಶ್ಚರ್ಯಗೊಂಡು ನೋಡಿದರೆ,ಚೆಲುವರಾಯನ ಮೂರ್ತಿ ಗೋಚರಿಸಿದಂತೆ, ಸಾಕ್ಷಾತ್ ತನ್ನ ಸ್ವಾಮಿಯಾದ ಶ್ರೀಮನ್ನಾರಾಯಣನನ್ನೇ ಕಂಡಂತಾಗಿ ಈ ಮುಡಿಯನ್ನು ಆ ಮೂರ್ತಿಯ ತಲೆಗಿಡಲು ಸರಿಯಾಗಿ ಹೊಂದಿಕೊಂಡಿತಂತೆ, ಆನಂದದಿಂದ ಆ ಉತ್ಸವ ಮೂರ್ತಿಯನ್ನು ತನ್ನ ಹೆಗಲ ಮೇಲೆ ಹೊತ್ತು ಗರುಡನು ಮನಸ್ವಿಯಾಗಿ ಹಾರಾಡಿದನಂತೆ. ಹೀಗೆ ಈ ವೈರಮುಡಿ ಮೇಲುಕೋಟೆಯ ಚೆಲುವನನ್ನು ಸೇರಿತು.

## ಇತಿಹಾಸದ ಪುಟಗಳಲ್ಲಿ

ಕಾಲಾಂತರದಲ್ಲಿ ಊರು ದೆಹಲಿಯ ಸುಲ್ತಾನರ ದಾಳಿಯಿಂದ ಕೊಳ್ಳೆ ಹೊಡೆಯಲ್ಪಟ್ಟು ಪಾಳುಬಿದ್ದಿತ್ತು.




ಭಗವಂತನ ಮೂಲಮೂರ್ತಿ ಹುತ್ತಗಟ್ಟಿ ಮರೆಯಾಗಿತ್ತು. ಉತ್ಸವಮೂರ್ತಿ ದೂರದ ದೆಹಲಿಯ ಖಜಾನೆ ಸೇರಿತ್ತು. ಈ ಹೊತ್ತಿನಲ್ಲಿ ತಮಿಳು ನಾಡಿನಲ್ಲಿ ಶೈವ-ವೈಷ್ಣವ ಭಿನ್ನಮತ ತಾರಕಕ್ಕೇರಿತ್ತು. ಶೈವಪರವಾದ ರಾಜ ಕ್ರಿಮಿ ಕಂಠಚೋಳನ ವೈಷ್ಣವ ವಿರೋಧಿ ಕಿರುಕುಳದಿಂದ ಬೇಸತ್ತು ಆಚಾರ್ಯ ರಾಮಾನುಜರು ಕನ್ನಡನಾಡಿಗೆ ತಮ್ಮ ಶಿಷ್ಯರ ಸಮೇತ ವಲಸೆ ಬಂದರು. (ಕ್ರಿ.ಶ.1096) ತೊಂಡನೂರಿನ ಹೊಯ್ಸಳ ಅರಸ ಬಿಟ್ಟಿ ದೇವನ ಮಗಳಿಗೆ ಹಿಡಿದಿದ್ದ ರೋಗವನ್ನು ಹೋಗಲಾಡಿಸಿದರು. ಜೈನನಾಗಿದ್ದ ಅರಸನಿಗೆ ಗುರುವಾಗಿ ಶ್ರೀವೈಷ್ಣವ ದೀಕ್ಷೆ ಇತ್ತು ವಿಷ್ಣುವರ್ಧನ ಎಂದು ಹೆಸರಾಗಿಸಿದರು. ಹೀಗಿರುತ್ತ ಅವರ ಲಾಂಛನಧಾರಣೆಗೆ ಅಗತ್ಯವಾದ ಶ್ವೇತಮೃತ್ತಿಕೆ ಮುಗಿದು ಹೋಯಿತು. ಚಿಂತಿ ಸುತ್ತಿರಲು ಒಂದು ಸ್ವಪ್ನವಾಯಿತು. ಶ್ರೀಮನ್ನಾರಾಯಣನು ಕಾಣಿಸಿಕೊಂಡು, ತಾನು ಯಾದವಾದ್ರಿಯ ಹುತ್ತವೊಂದರಲ್ಲಿ ಮುಚ್ಚಿಹೋಗಿರುವುದಾಗಿಯೂ, ಅಲ್ಲೇ ತಾರ್ಕ್ಷ್ಯವಕ್ಷೇತ್ರದಲ್ಲಿ ಲಾಂಛನ ಧಾರಣೆಗೆ ಬೇಕಾದ ಬಿಳಿ ಮಣ್ಣು ದೊರೆಯುವುದೆಂದೂ ಹೇಳಿದನು.

### ಉತ್ಸವಗಳ ಏರ್ಪಾಡು

ರಾಮಾನುಜರದು ಆದಿಶೇಷನ ಅವತಾರ. ಲಕ್ಷ್ಮಣನೂ ಸಹ ಆದಿಶೇಷಾಂಶನೇ. ಶೆಲ್ವಪ್ಪಿಳ್ಳೆಯೋ ಸಾಕ್ಷಾತ್ ಶ್ರೀರಾಮನೇ ಅರ್ಚಿಸಿದ ಮೂರ್ತಿ. ಶ್ರೀ ರಾಮನಿಗೆ ಮೊದಲು ಪಟ್ಟಾಭಿಷೇಕ ನಿಗದಿಯಾಗಿದ್ದು ಮೀನಮಾಸ ಪುಷ್ಯ ನಕ್ಷತ್ರದಂದು. ಅಂದು ಅದು ಕೈಕೇಯಿಯಿಂದಾಗಿ ನಿಂತು ಹೋಗಿತ್ತು, ಆ ಕೊರತೆಯನ್ನು ನೀಗಲು ಅದೇ ದಿನದಂದು, ರಾಮಪ್ರಿಯನಾದ ಚೆಲುವರಾಯನಿಗೆ ವೈರಮುಡಿ ಉತ್ಸವ ನಡೆದಂತೆ ಏರ್ಪಡಿಸಿದರು ಆಚಾರ್ಯರು.

### ಜಾತ್ಯಾತೀತತೆಯ ನೈಜ ಆಚರಣೆ

ಹೀಗೆ ಶ್ವೇತಮೃತ್ತಿಕೆಯ ಸಲುವಾಗಿ ಮೇಲುಕೋಟೆಗೆ ಬಂದು (ಕ್ರಿ.ಶ. 1099) ರಾಮಾನುಜರು ಅಲ್ಲಿದ್ದ ಮೂಲವಾಸಿಗಳಾದ ಆದಿಕರ್ನಾಟಕರ ಸಹಾಯದಿಂದ ಹುತ್ತವನ್ನು ಕಂಡು ಹಿಡಿದು, ಹಾಲು ಹೊಯ್ದು ಕರಗಿಸಿ, ದೊರೆತ ನಾರಾಯಣನ ಮೂರ್ತಿಯನ್ನು ವಿಷ್ಣುವರ್ಧನನ ಸಹಾಯದಿಂದ ಪುನರ್ ಪ್ರತಿಷ್ಠೆ ಮಾಡಿದರು. ಈ ನಿರ್ಮಾಣ ಕಾರ್ಯ 1117 ರ ವರೆಗೂ ನಡೆದಿದೆ. ಈ ಕಾರ್ಯದಲ್ಲಿ ತಮಗೆ ಸಹ ಕರಿಸಿದ ಹರಿಜನರನ್ನು ತಿರುಕ್ಕುಲತ್ತಾರ್ ಶ್ರೇಷ್ಠಕುಲದವರು ಎಂದು ನಾಮಕರಣ ಮಾಡಿ ಅವರಿಗೂ ದೇಗುಲಕ್ಕೆ ಪ್ರವೇಶಾವಕಾಶ ಕಲ್ಪಿಸಿದರು. ವೈರಮುಡಿ ಬ್ರಹ್ಮೋತ್ಸವದಲ್ಲಿ ಒಂದು ದಿನ (7 ನೇ ದಿನ, ರಥೋತ್ಸವದಂದು ರಾತ್ರಿ) ಅವರದೇ ಪೂರ್ಣಸೇವೆ ನಡೆ ಯುವಂತೆ ಏರ್ಪಡಿಸಿದರು. ಅದು ಇಂದಿಗೂ ನಡೆದುಬರುತ್ತಿದೆ.

### ಜನಪದ ನಂಬಿಕೆ - ಭಾವೈಕ್ಯತೆಯ ಪರಿ !

ಶ್ರೀದೇವಿ ಭೂದೇವಿಯರ ವಿಗ್ರಹಗಳೂ ಅಲ್ಲೇ ಒಂದು ಬಾವಿಯಲ್ಲಿ ದೊರಕಿದವು. ವೈರಮುಡಿ ಮೊದಲಾದ ಅನೇಕ ಆಭರಣಗಳು ಈಗ ಪಾಂಡವರ ಗುಹೆ ಎಂದು ಕರೆಯಲ್ಪಡುವ ಗುಹೆಯಲ್ಲಿ ದೊರಕಿದವು. ಉತ್ಸವಮೂರ್ತಿ ಮಾತ್ರ ದೊರೆಯಲಿಲ್ಲ. ಅದು ದೆಹಲಿಯ ಸುಲ್ತಾನನ ಮಗಳ ಬಳಿ ಅಂತಃಪುರದಲ್ಲಿ, ಅವಳ ಪ್ರಿಯವಾದ ಆಟದ ಸಾಮಾಗ್ರಿಯಾಗಿಯೆ ಇತ್ತು. ಇದನ್ನು ತರುವ ಸಲುವಾಗಿ ದೆಹಲಿಗೆ ಹೋದರು. ‘ನಿಮ್ಮ ದೇವರನ್ನು ನೀವೇ ಕರೆಯಿರಿ, ಬರು ತ್ತಾನೋ ನೋಡೋಣ ಎಂದ ಸುಲ್ತಾನ, ‘ಶೆಲ್ವಪ್ಪಿಳ್ಳೆಯೇ ವಾ ” ಎಂದು ಕರೆದರು ರಾಮಾನುಜರು. ಸುಲ್ತಾನನ ಮಗಳು ಬೀಬಿಯ ಬಳಿ ಇದ್ದ ವಿಗ್ರಹ ಮಗುವಿನಂತೆ ಪುಟಪುಟನೆ ಓಡಿ ಬಂದು ಆಚಾರ್ಯರ ತೊಡೆಯೇರಿ ಕುಳಿತಿತ್ತು! ಬೆರಗುಗೊಂಡ ಸುಲ್ತಾನ ಸಕಲ ಮರ್ಯಾದೆಯೊಂದಿಗೆ ಆಚಾರ್ಯರನ್ನು ವಿಗ್ರಹದೊಂದಿಗೆ ಕಳಿಸಿಕೊಟ್ಟ. ಬೊಂಬೆಯನ್ನು ಬಿಟ್ಟಿರಲಾರದ ಅವನ ಮಗಳೂ ಹಿಂಬಾಲಿಸಿದಳು. ಆಚಾರ್ಯರ ಅಪ್ಪಣೆಯ ಪ್ರಕಾರ ಊರ ಹೊರಗೆ ಹೊರಗಿರಮ್ಮ = ಹೊಗ ರಮ್ಮಳಾಗಿ ನೆಲೆಸಿದಳು. ಕೊನೆಗೆ ವರ ನಂದಿಯಾಗಿ ಭಗವಂತನ ಪಾದದಲ್ಲಿ ಐಕ್ಯಳಾದಳು. ಅವಳ ನೆನಪಿನಲ್ಲೂ ಸುತ್ತಲ ಗ್ರಾಮಸ್ಥರು ಹೊಗರಮ್ಮನ ಜಾತ್ರೆ ನಡೆಸುತ್ತಾರೆ. ಇದೊಂದು ಹಿಂದೂ ಮುಸ್ಲಿಂ ಭಾವೈಕ್ಯದ ಪ್ರತೀಕ ವಾಗಿದೆ.

### ವರ್ತಮಾನ

ಹೊಯ್ಸಳರ ಕಾಲದಲ್ಲಿ ಪುನರು ಜ್ಜೀವನಗೊಂಡ ಮೇಲುಕೋಟೆ ಪುನಃ ಮುಸಲ್ಮಾನರ ದಾಳಿಗೆ ತುತ್ತಾಯಿತು. 14 ನೆಯ ಶತಮಾನದಲ್ಲಿ ವಿಜಯ ನಗರದ ಅರಸರಿಂದ ಮರಳಿ ವೈಭವ ಪಡೆಯಿತು. ಆಮೇಲೆ ಮರಾಠರ ದಾಳಿ. ಕೊನೆಗೆ ಮೈಸೂರು ಅರಸರ ದಾನ ದತ್ತಿಗಳಿಂದ ಈವರೆಗೂ ನಡೆದು ಬರು ತ್ತಿದೆ. ಅವರು ರಾಜಮುಡಿ, ಕೃಷ್ಣರಾಜ ಮುಡಿ ಮೊದಲಾದ ಅನೇಕ ಆಭರಣ ಗಳನ್ನು ಸಮರ್ಪಿಸಿದ್ದಾರೆ.

ಈಗ ವೈರಮುಡಿ ಮಂಡ್ಯದ ಖಜಾನೆಯಲ್ಲಿ ಭದ್ರವಾಗಿರುತ್ತದೆ. ದೇವಾಲಯದಲ್ಲಿ ಜಿಲ್ಲಾಧಿಕಾರಿಯ ಸಮ್ಮುಖದಲ್ಲೇ ಎಲ್ಲ ಆಭರಣಗಳ, ಕಿರೀಟಗಳ ಪಾರ್ಕಾವಣೆ ನಡೆಯುತ್ತದೆ. 1000 ವರ್ಷಗಳ ಹಿಂದೆ ರಾಮಾ ನುಜರು ಏರ್ಪಡಿಸಿದ್ದ ಮುಕ್ತಪ್ರವೇಶ ನೀತಿಯನ್ನೇ ಇಂದಿನ ಸರ್ಕಾರವೂ ಅಧಿಕೃತವಾಗಿ ಘೋಷಿಸಿರುವುದ ರಿಂದ, ಆಚಾರ್ಯರ ಆಶಯಕ್ಕೆ ಯಾವುದೇ ಧಕ್ಕೆಯುಂಟಾಗಿಲ್ಲ.


ತಿರುಮಲೆ ತಿರುಪತಿ ದೇವಸ್ಥಾನಗಳು
ತಿರುಮಲೆ ಸ್ವಾಮಿಯವರ
ತೆಪ್ಪೋತ್ಸವಗಳು
24-03-2021 ರಿಂದ 28-03-2021 ರ ವರೆಗೆ



## ಶ್ರೀ ಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿ

ಓಂ ಪ್ರಕೃತ್ಯೈ ನಮಃ

ಓಂ ವಿಕೃತ್ಯೈ ನಮಃ

ಓಂ ವಿದ್ಯಾಯೈ ನಮಃ

ಓಂ ಸರ್ವಭೂತಹಿತಪ್ರದಾಯೈ ನಮಃ

ಓಂ ಶ್ರದ್ಧಾಯೈ ನಮಃ

ಓಂ ವಿಭೂತ್ಯೈ ನಮಃ

ಓಂ ಸುರಭ್ಯೈ ನಮಃ

ಓಂ ಪರಮಾತ್ಮಿಕಾಯೈ ನಮಃ

ಓಂ ವಾಚೇ ನಮಃ

ಓಂ ಪದ್ಮಾಲಯಾಯೈ ನಮಃ 10

ಓಂ ಪದ್ಮಾಯೈ ನಮಃ

ಓಂ ಶುಚ್ಯೈ ನಮಃ

ಓಂ ಸ್ವಾಹಾಯೈ ನಮಃ

ಓಂ ಸ್ವಧಾಯೈ ನಮಃ

ಓಂ ಸುಧಾಯೈ ನಮಃ

ಓಂ ಧನ್ಯಾಯೈ ನಮಃ

ಓಂ ಹಿರಣ್ಮಯ್ಯೈ ನಮಃ

ಓಂ ಲಕ್ಷ್ಮ್ಯೈ ನಮಃ

ಓಂ ನಿತ್ಯ ಪುಷ್ಟಾಯೈ ನಮಃ

ಓಂ ವಿಭಾವರ್ಯೈ ನಮಃ 20

ಓಂ ಅದಿತ್ಯೈ ನಮಃ

ಓಂ ದಿತ್ಯೈ ನಮಃ

ಓಂ ದೀಪ್ತಾಯೈ ನಮಃ

ಓಂ ವಸುಧಾಯೈ ನಮಃ

ಓಂ ವಸುಧಾರಿಣ್ಯೈ ನಮಃ

ಓಂ ಕಮಲಾಯೈ ನಮಃ

ಓಂ ಕಾಂತಾಯೈ ನಮಃ

ಓಂ ಕಾಮಾಕ್ಷ್ಯೈ ನಮಃ

ಓಂ ಕ್ಷೀರೋದಸಂಭವಾಯೈ ನಮಃ

ಓಂ ಅನುಗ್ರಹಪ್ರದಾಯೈ ನಮಃ 30

ಓಂ ಬುದ್ಧಯೇ ನಮಃ

ಓಂ ಅನಘಾಯೈ ನಮಃ

ಓಂ ಹರಿವಲ್ಲಭಾಯೈ ನಮಃ

ಓಂ ಅಶೋಕಾಯೈ ನಮಃ

ಓಂ ಅಮೃತಾಯೈ ನಮಃ

ಓಂ ದೀಪ್ತಾಯೈ ನಮಃ

ಓಂ ಲೋಕಶೋಕ ವಿನಾಶಿನ್ಯೈ ನಮಃ

ಓಂ ಧರ್ಮನಿಲಯಾಯೈ ನಮಃ

ಓಂ ಕರುಣಾಯೈ ನಮಃ

ಓಂ ಲೋಕಮಾತ್ರೇ ನಮಃ 40

ಓಂ ಪದ್ಮಪ್ರಿಯಾಯೈ ನಮಃ

ಓಂ ಪದ್ಮಹಸ್ತಾಯೈ ನಮಃ

ಓಂ ಪದ್ಮಾಕ್ಷ್ಯೈ ನಮಃ

ಓಂ ಪದ್ಮಸುಂದರ್ಯೈ ನಮಃ

ಓಂ ಪದ್ಮೋದ್ಭವಾಯೈ ನಮಃ

ಓಂ ಪದ್ಮಮುಖ್ಯೈ ನಮಃ

ಓಂ ಪದ್ಮನಾಭಪ್ರಿಯಾಯೈ ನಮಃ

ಓಂ ರಮಾಯೈ ನಮಃ

ಓಂ ಪದ್ಮಮಾಲಾಧರಾಯೈ ನಮಃ

ಓಂ ದೇವ್ಯೈ ನಮಃ 50

ಓಂ ಪದ್ಮಿನ್ಯೈ ನಮಃ
ಓಂ ಪದ್ಮಗಂಧಿನ್ಯೈ ನಮಃ
ಓಂ ಪುಣ್ಯಗಂಧಾಯೈ ನಮಃ
ಓಂ ಸುಪ್ರಸನ್ನಾಯೈ ನಮಃ
ಓಂ ಪ್ರಸಾದಾಭಿಮುಖ್ಯೈ ನಮಃ
ಓಂ ಪ್ರಭಾಯೈ ನಮಃ
ಓಂ ಚಂದ್ರವದನಾಯೈ ನಮಃ
ಓಂ ಚಂದ್ರಾಯೈ ನಮಃ
ಓಂ ಚಂದ್ರ ಸಹೋದರ್ಯೈ ನಮಃ
ಓಂ ಚತುರ್ಭುಜಾಯೈ ನಮಃ 60

ಓಂ ಚಂದ್ರರೂಪಾಯೈ ನಮಃ
ಓಂ ಇಂದಿರಾಯೈ ನಮಃ
ಓಂ ಇಂದುಶೀತಲಾಯೈ ನಮಃ
ಓಂ ಅಹ್ಲೋದಜನನ್ಯೈ ನಮಃ
ಓಂ ಪುಷ್ಟ್ಯೈ ನಮಃ
ಓಂ ಶಿವಾಯೈ ನಮಃ
ಓಂ ಶಿವಕರ್ಯೈ ನಮಃ
ಓಂ ಸತ್ಯೈ ನಮಃ
ಓಂ ವಿಮಲಾಯೈ ನಮಃ
ಓಂ ವಿಶ್ವಜನನ್ಯೈ ನಮಃ 70

ಓಂ ತುಷ್ಟ್ಯೈ ನಮಃ
ಓಂ ದಾರಿದ್ರ್ಯ ನಾಶಿನ್ಯೈ ನಮಃ
ಓಂ ಪ್ರೀತಿಪುಷ್ಕರಿಣ್ಯೈ ನಮಃ
ಓಂ ಶಾಂತಾಯೈ ನಮಃ
ಓಂ ಶುಕ್ಲಮಾಲ್ಯಾಂಬರಾಯೈ ನಮಃ
ಓಂ ಶ್ರಿಯೈ ನಮಃ
ಓಂ ಭಾಸ್ಕರ್ಯೈ ನಮಃ
ಓಂ ಬಿಲ್ವನಿಲಯಾಯೈ ನಮಃ
ಓಂ ವರಾರೋಹಾಯೈ ನಮಃ
ಓಂ ಯಶಸ್ವಿನ್ಯೈ ನಮಃ 80

ಓಂ ವಸುಂಧರಾಯೈ ನಮಃ
ಓಂ ಉದಾರಾಂಗಾಯೈ ನಮಃ
ಓಂ ಹರಿಣ್ಯೈ ನಮಃ
ಓಂ ಹೇಮಮಾಲಿನ್ಯೈ ನಮಃ
ಓಂ ಧನಧಾನ್ಯ ಕರ್ಯೈ ನಮಃ
ಓಂ ಸಿದ್ಧಯೇ ನಮಃ
ಓಂ ಸ್ತ್ರೈಣ ಸೌಮ್ಯಾಯೈ ನಮಃ
ಓಂ ಶುಭಪ್ರದಾಯೈ ನಮಃ
ಓಂ ನೃಪವೇಶ್ಮ ಗತಾನಂದಾಯೈ ನಮಃ
ಓಂ ವರಲಕ್ಷ್ಮ್ಯೈ ನಮಃ 90

ಓಂ ವಸುಪ್ರದಾಯೈ ನಮಃ
ಓಂ ಶುಭಾಯೈ ನಮಃ
ಓಂ ಹಿರಣ್ಯಪ್ರಾಕಾರಾಯೈ ನಮಃ
ಓಂ ಸಮುದ್ರ ತನಯಾಯೈ ನಮಃ
ಓಂ ಜಯಾಯೈ ನಮಃ
ಓಂ ಮಂಗಳಾದೇಯೈ ನಮಃ
ಓಂ ವಿಷ್ಣು ವಕ್ಷಃಸ್ಥಲಸ್ಥಿತಾಯೈ ನಮಃ
ಓಂ ವಿಷ್ಣುಪತ್ನ್ಯೈ ನಮಃ
ಓಂ ಪ್ರಸನ್ನಾಕ್ಷ್ಯೈ ನಮಃ
ಓಂ ನಾರಾಯಣ ಸಮಾಶ್ರಿತಾಯೈ ನಮಃ 100

ಓಂ ದಾರಿದ್ರ್ಯ ಧ್ವಂಸಿನ್ಯೈ ನಮಃ
ಓಂ ದೇವ್ಯೈ ನಮಃ
ಓಂ ಸರ್ವೋಪದ್ರವವಾರಿಣ್ಯೈ ನಮಃ
ಓಂ ನವದುರ್ಗಾಯೈ ನಮಃ
ಓಂ ಮಹಾಕಾಳ್ಯೈ ನಮಃ
ಓಂ ಬ್ರಹ್ಮವಿಷ್ಣುಶಿವಾತ್ಮಿಕಾಯೈ ನಮಃ
ಓಂ ತ್ರಿಕಾಲಜ್ಞಾನ ಸಂಪನ್ನಾಯೈ ನಮಃ
ಓಂ ಭುವನೇಶ್ವರ್ಯೈ ನಮಃ 108

ಇತಿ ಶ್ರೀ ಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿ ಸಮಾಪ್ತಿ



13-02-2021 ರಂದು ತಮಿಳುನಾಡಿನ ಚೆನ್ನೈನಲ್ಲಿರುವ ಟಿ.ನಗರ್‌ನಲ್ಲಿ ತಿ.ತಿ.ದೇ.,ಯವರ ನೇತೃತ್ವದಲ್ಲಿ ಶ್ರೀ ಪದ್ಮಾವತಿ ಅಮ್ಮನವರ ನೂತನ ಆಲಯ ನಿರ್ಮಾಣದ ಭೂಮಿ ಪೂಜೆಯಲ್ಲಿ ಪಾಲ್ಗೊಂಡ ಶ್ರೀ ಶ್ರೀ ಶ್ರೀ ವಿಜಯೇಂದ್ರ ಸರಸ್ವತಿ ಸ್ವಾಮಿಯವರು ಮತ್ತು ತಿ.ತಿ.ದೇ., ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಮತ್ತು ತಿ.ತಿ.ದೇ., ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ರವರು.



22-02-2021 ರಂದು ತಮಿಳುನಾಡಿನಲ್ಲಿರುವ ಉಳುಂದೂರು ಪೇಟೆಯಲ್ಲಿ ತಿ.ತಿ.ದೇ., ಯವರ ನೇತೃತ್ವದಲ್ಲಿ ಶ್ರೀವೆಂಕಟೇಶ್ವರ ಸ್ವಾಮಿಯವರ ನೂತನ ಆಲಯ ನಿರ್ಮಾಣದ ಭೂಮಿ ಪೂಜೆಯಲ್ಲಿ ಪಾಲ್ಗೊಂಡ ತಮಿಳುನಾಡಿನ ಮುಖ್ಯಮಂತ್ರಿ ಗೌ॥ ಶ್ರೀ. ಇ.ಕೆ. ಪಳಣಿಸ್ವಾಮಿ ಯವರು ಮತ್ತು ತಿ.ತಿ.ದೇ. ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಮತ್ತು ಪೀಠಾಧಿಪತಿಗಳು ಪಾಲ್ಗೊಂಡರು.




27-02-2021 ರಂದು ಆಡಳಿತ ಮಂಡಳಿ ಎಕ್ಸ್ - ಅಫಿಷಿಯಾ ಸದಸ್ಯರಾಗಿ ತಿರುಮಲೆ ಆಲಯದಲ್ಲಿ ಪ್ರಮಾಣ ಸ್ವೀಕಾರ ಮಾಡಿದ ಆಂಧ್ರಪ್ರದೇಶದ ದತ್ತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ॥ ಜಿ.ವಾಣಿ ಮೋಹನ್ ಐ.ಎ.ಎಸ್.,ರವರು. ಪ್ರಮಾಣ ಸ್ವೀಕಾರದ ನಂತರ ತಿರುಮಲೆ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿಯವರು ಸ್ವಾಮಿಯವರ ಚಿತ್ರಪಟವನ್ನು ನೀಡಿದರು.



16-02-2021 ರಂದು ಶ್ರೀ ಪೊಟ್ಟಿ ಶ್ರೀರಾಮುಲು ನೆಲ್ಲೂರು ಜಿಲ್ಲೆಯಲ್ಲಿ ನಡೆದ ವಸಂತಪಂಚಮಿ ಸರಸ್ವತಿ ಪೂಜೆಯ ಸಂದರ್ಭದಲ್ಲಿ ತಿ.ತಿ.ದೇ. ಆಡಳಿತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಮತ್ತು ಉನ್ನತಾಧಿಕಾರಿಗಳು ಪಾಲ್ಗೊಂಡರು.



17-02-2021 ರಂದು ನಡೆದ "ಕಲ್ಯಾಣಮಸ್ತು ಮೂಹೂರ್ತ ನಿರ್ಣಯ" ಎಂಬ ಕಾರ್ಯಕ್ರಮದಲ್ಲಿ ಪಾಲ್ಗೊಂಡ ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಡಾ॥ ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್., ಯವರು, ತಿರುಮಲೆ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ ಶ್ರೀ ಎ.ವಿ. ಧರ್ಮಾರೆಡ್ಡಿಯವರು ಮತ್ತು ಹಿಂದೂ ಧರ್ಮ ಪ್ರಚಾರ ಪರಿಷತ್ ಕಾರ್ಯದರ್ಶಿ ಆಚಾರ್ಯ ಕೆ. ರಾಜಗೋಪಾಲನ್ ರವರು ಪಾಲ್ಗೊಂಡರು.



11-02-2021 ರಂದು ಅಲಿಪಿರಿ ಬಳಿಯಿರುವ ಶ್ರೀ ಪುರಂದರದಾಸರ ವಿಗ್ರಹಕ್ಕೆ 174 ನೇ ಆರಾಧನಾ ಮಹೋತ್ಸವವನ್ನು ಪುರಸ್ಕರಿಸಿಕೊಂಡು ಪುಷ್ಪಾಂಜಲಿಯನ್ನು ಸಮರ್ಪಿಸುತ್ತಿರುವ ದಾಸಸಾಹಿತ್ಯ ಪ್ರಾಜೆಕ್ಟ್ ವಿಶೇಷಾಧಿಕಾರಿ ಶ್ರೀ ಪಿ. ಆರ್. ಆನಂದತೀರ್ಥಾ ಚಾರ್ಯರು ಮತ್ತು ಭಜನಾ ಮಂಡಳಿ ಸದಸ್ಯರು.



# ಸಕಲ ಅಭೀಷ್ಟೆ ನೆರವೇರಿಸುವ ಶ್ರೀ ಧೀರೇಂದ್ರ ತೀರ್ಥರು

ಶ್ರೀಧರ ರಾಯಸಂ

98453 27129

ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಪರಂಪರೆಯಲ್ಲಿ ಬಂದ, ಜಯರಾಮಾಚಾರ್ಯರೇ, ಧೀರೇಂಧ್ರ ತೀರ್ಥರಾಗಿ ಮೊದಲೇ, ವರದೇಂದ್ರ ತೀರ್ಥರಿಂದ ಆಶ್ರಮ ಪಡೆದಿದ್ದ ಮಹಾನ್ ಯತಿಗಳು. ಇವರ ಆಶ್ರಮ ಶಿಷ್ಯರು ಶ್ರೀ ಭುವನೇಂದ್ರ ತೀರ್ಥರು. ಶ್ರೀ ಧೀರೇಂದ್ರ ತೀರ್ಥರು ಪುಣೆಯಲ್ಲಿ ವರದೇಂದ್ರತೀರ್ಥರ ಮಾರ್ಗದರ್ಶನದಲ್ಲಿ ಸಕಲ ಶಾಸ್ತ್ರ ಪಾರಂಗತರಾಗಿ, ಪುಣೆಯಲ್ಲಿ ವಾಕ್ಯಾರ್ಥದ ವಿಜಯ ಸಾಧಿಸಿದ್ದು ಚರಿತ್ರೆಯಲ್ಲಿ ದಾಖಲೆಯಾಯಿತು. ಧೀರೇಂದ್ರತೀರ್ಥರ ಪಾಂಡಿತ್ಯ ಗಮನಿಸಿ, ಮುಂದೆ ಮಠಕ್ಕೆ ಗುರುವಾಗಲು ಸಮರ್ಥರು ಎಂದು ವರದೇಂದ್ರ ತೀರ್ಥರು ಮನಗಂಡಿದ್ದರು. ಆದರೆ ಜಯರಾಮಾಚಾರ್ಯರು ಸನ್ಯಾಸಿಯಾಗಲು ಸಿದ್ಧರಿರಲಿಲ್ಲ! ಕೇವಲ ವಾದ, ವಾಕ್ಯಾರ್ಥ, ಪಾಠ ಪ್ರವಚನದಲ್ಲಿ ಆಸಕ್ತಿ ಹೊಂದಿದ್ದರು. ವಾದೀಂದ್ರ ತೀರ್ಥರ ಗುರುಗುಣಸ್ತವನಕ್ಕೆ ವ್ಯಾಖ್ಯಾನ ಬರೆದು ಪ್ರಖ್ಯಾತರಾಗಿದ್ದರು. ಪುಣೆಯಲ್ಲಿ ವರದೇಂದ್ರತೀರ್ಥರು ಜಯರಾಮಾಚಾರ್ಯರ ಜೊತೆಗೆ ವಾಕ್ಯಾರ್ಥದಲ್ಲಿ ಜಯಭೇರಿ ಬಾರಿಸಿದಾಗ, ಅಲ್ಲಿ ದಿಗ್ಗಜರು ಜಯರಾಮಾಚಾರ್ಯರ ಪಾಂಡಿತ್ಯ ಕಂಡು ಬೆರಗಾದರು. ವರದೇಂದ್ರತೀರ್ಥರ ಅಂತ್ಯ ಕಾಲದಲ್ಲಿ ಜಯರಾಮಾಚಾರ್ಯರು ಸಂಚಾರದಲ್ಲಿದ್ದುದರಿಂದ, ಅನಿವಾರ್ಯವಾಗಿ ಪೂರ್ವಾಶ್ರಮದ ಸಹೋದರರಾದ ಲಕ್ಷ್ಮೀ ನಾರಾಯಣಚಾರ್ಯರಿಗೆ ಸನ್ಯಾಸ ನೀಡಿ, ಜಯರಾಮಾಚಾರ್ಯರ ಹತ್ತಿರ ಶಾಸ್ತ್ರ ಕಲಿಯಬೇಕೆಂದು ಆದೇಶಿಸಿದರು. ವರದೇಂದ್ರ ತೀರ್ಥರು ಪುಣೆಯಲ್ಲಿ ವೃಂದಾವನಸ್ಥರಾದ ಮೇಲೆ, ಜಯರಾಮಾಚಾರ್ಯರು ವರದೇಂದ್ರ ತೀರ್ಥರ ಉಪದೇಶ ಜ್ಞಾಪಿಸಿಕೊಂಡು, ಮೊದಲು ಕುಂಭಕೋಣದಲ್ಲಿ ವೃಂದಾವನಸ್ಥರಾಗಿದ್ದ ರಾಘವೇಂದ್ರಸ್ವಾಮಿಗಳ ಪರಮ ಗುರುಗಳಾಗಿದ್ದ, ವಿಜಯೀಂದ್ರ ತೀರ್ಥರ ದರ್ಶನ ಮಾಡಿದರು. ಅಲ್ಲಿ ಸನ್ಯಾಸ ಸ್ವೀಕಾರ ಮಾಡಿ, "ಧೀರೇಂದ್ರ ತೀರ್ಥರಾದರು. ಮೂಲರಾಮದೇವರನ್ನು ಪೂಜಿಸಿ, ನಂತರ ಭುವನೇಂದ್ರ ತೀರ್ಥರಿಗೆ ಒಪ್ಪಿಸಿದರು. ಭುವನೇಂದ್ರ ತೀರ್ಥರು, ಧೀರೇಂದ್ರ ತೀರ್ಥರ ಮಾರ್ಗದರ್ಶನದಲ್ಲಿ ಅನೇಕ ಶಾಸ್ತ್ರ, ವೇದಾಧ್ಯಯನ ಮಾಡಿದರು.

ಧೀರೇಂದ್ರ ತೀರ್ಥರು, ಪ್ರತಿನಿತ್ಯ ಮಠದ ಸಂಸ್ಥಾನ ಪೂಜೆ, ಮತ್ತಿತರ ದೇವತಾ ಕಾರ್ಯಗಳನ್ನು ಚಾಚೂ ತಪ್ಪದೆ ಮಾಡುತ್ತಿದ್ದರು. ಸಂಚಾರ ಮಾಡುತ್ತಾ, ವರದಾ ನದಿ ತೀರದ ಹಾವೇರಿ ಜಿಲ್ಲಾ ಹೊಸ ರಿತ್ತಿಗೆ ಬಂದರು. ಅಲ್ಲಿದ್ದ ಪ್ರಶಾಂತ ವಾತಾವರಣ ಧೀರೇಂದ್ರರಿಗೆ ಹಿಡಿಸಿತು. ಅಲ್ಲೇ ನೆಲೆಸಲು ನಿರ್ಧಾರ ಮಾಡಿದರು. ಅಲ್ಲಿಯ ಬಹುಜನರಿಗೆ ಅನುಗ್ರಹ ಮಾಡುತ್ತಾ, ಹರಿಸರ್ವೋತಮತ್ವ, ವಾಯು ಜೀವೋತ್ತಮತ್ವ,ಪ್ರಚಾರ, ಮಧ್ವ ಸಿದ್ಧಾಂತ ಪ್ರಸಾರ ಮಾಡಿದರು. ಜಗನ್ನಾಥದಾಸರು ಇವರನ್ನು ಸಂದರ್ಶಿಸಿದ ಮಹಾನುಭಾವರು. ಅದೇ ರೀತಿ ಹತ್ತಿರದಲ್ಲಿದ್ದ, ಸವಣೂರಿನ ಮಹಾಯತಿಗಳು, ಶ್ರೀ ಸತ್ಯಬೋಧತೀರ್ಥರು, ವಿಷ್ಣು ತೀರ್ಥರು ಇವರ ಸಮಕಾಲೀನರು. ಇವರೆಲ್ಲರೂ ಸಮಾಗಮಮಾಡಿ, ಪಾಠ, ಪ್ರವಚನ, ಚರ್ಚೆಯಲ್ಲಿ ಮಗ್ನರಾಗಿರುತ್ತಿದ್ದರು, ಅವರ ಶಾಸ್ತ್ರರ್ಥ.

ಚರ್ಚೆ,ವಾಕ್ಯಾರ್ಥ, ಸಂಭಾಷಣೆ, ಪ್ರವಚನಗಳು ಪಂಡಿತರಿಗೆ ರಸದೌತಣ ನೀಡುತ್ತಿದ್ದವು! ಇಂತಹ ವಿದ್ವತ್ ಸಮಯದ ಕಾಲಘಟ್ಟದಲ್ಲಿ, ಶ್ರೀ ಜಗನ್ನಾಥದಾಸರು, ಶ್ರೇಷ್ಠ ಗ್ರಂಥ "ಹರಿಕಥಾಮೃತಸಾರ" ರಚಿಸಿದ್ದು ವಿಶೇಷ. ಮಹಾರಾಷ್ಟ್ರದಲ್ಲಿ, ಧೀರೇಂದ್ರ ತೀರ್ಥರ ಪಾಂಡಿತ್ಯ ಕಂಡು, ಸತಾರದಲ್ಲಿ ವಿಶೇಷ ರೀತಿಯಿಂದ , ಗೌರವದಿಂದ, ಸನ್ಮಾನಿತರಾದರು. ನಂತರ ಪುಣೆಯ ಪೇಷ್ವೇ ಮಹಾರಾಜರು , ಧೀರೇಂದ್ರ ತೀರ್ಥರನ್ನು,ಆದರದಿಂದ ಗೌರವಿಸಿದ್ದು ಇತಿಹಾಸವಾಯಿತು. ಪುಣೆಯಲ್ಲಿ ಆಗಲೇ ಬೃಂದಾವನಸ್ಥರಾಗಿದ್ದ, ಇವರ ಗುರುಗಳಾದ ಶ್ರೀವರದೇಂದ್ರ ತೀರ್ಥರಿಗೆ ಪೂಜೆ, ಹಸ್ತೋದಕ ನೆರವೇರಿಸಿದರು. ವಾಪಸ್ಸು ಬರುವಾಗ, ಮಾರ್ಗ ಮಧ್ಯದಲ್ಲಿ, ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ದರ್ಶನ ಪಡೆದು ಹೊಸ ರಿತ್ತಿಗೆ ಬಂದರು. ಹೊಸರಿತ್ತಿಯಲ್ಲಿ ಕೆಲಕಾಲವಿದ್ದು, ಫಾಲ್ಗುಣ ಶುಕ್ಲ ತ್ರಯೋದಶಿ ವರದಾ ನದಿ ತೀರದ ಹತ್ತಿರ ವೃಂದಾವನಸ್ಥರಾದರು. ಇವರ ವೃಂದಾವನದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳ ಒಂದಂಶ ಸನ್ನಿಹಿತವಾಗಿ, ಸಕಲ ಭಕ್ತರಿಗೆ ಅಭೀಷ್ಟೆ ನೆರವೇರಿಸುವ ಮಹಾನ್ ಯತಿಗಳು. ಇವರ ಕೃತಿಗಳು. ಕಾರಕವಾದ, ನಾರಾಯಣೋಪನಿಷತ್, ನರಸಿಂಹ ದೇವರ ಮನ್ಯುಸೂಕ್ತ ವ್ಯಾಖ್ಯಾನ, ಗುರುಗುಣ ಸ್ತವನ ವ್ಯಾಖ್ಯಾನ, ವಿಷಯ ವಾಕ್ಯ ಸಂಗ್ರಹ .

ಧರಣಿ ಮಂಡಲೇ ಖ್ಯಾತಂ
ಧೈರ್ಯಾದಿ ಗುಣಬೃಂಹಿತಂ
ಧೀಕೃತಾ ಶೇಷವಾದೀ
ಭಂ ಧೀರ ಸಿಂಹ ಗುರುಂ ಭಜೆ!!

पञ्चमः पाठः

# ಸಂಸ್ಕೃತ ಕಲಿಯೋಣ...!!

ಪಾಠ-5

ರಚನೆ:- ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ

ನಿರ್ವಹಣೆ:- ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

एकः = ಒಬ್ಬನು, प्रातः = ಬೆಳಿಗ್ಗೆ, अस्तु = ಆಗಲಿ, अनेके = ಹಲವರು, सायम् = ಸಂಜೆ

एधि = ಇರು, कति = ಎಷ್ಟು, नक्तम् = ರಾತ್ರಿ, असानि = ಇರಲು ಬಿಡು

**ಈ ಕೆಳಗಿರುವ ಪದಗಳನ್ನು ಕನ್ನಡಕ್ಕೆ ಅನುವಾದ ಮಾಡಿರಿ.**

१. तत्र कति सन्ति?
२. एकः अद्य प्रातः तत्रासीत्।
३. सः तत्रास्तु।
४. त्वम् अद्य सायम् अत्र एधि।
५. सायं तत्र अनेके आसन्।
६. अहं तत्र असानि।
७. ते सर्वे नक्तं तत्र न सन्ति।
८. यूयं अद्य नक्तं कुत्रास्त?
९. वयं सर्वे अत्रास्म।
१०. कति अत्रासन्?

**ಉತ್ತರಗಳು**

1. ನೀನು ಇಂದು ರಾತ್ರಿ ಅಲ್ಲಿ ಇರು.
2. ಇಂದು ಬೆಳಗ್ಗೆ ಅಲ್ಲಿ ಎಷ್ಟು ಜನರಿದ್ದರು?
3. ಅಲ್ಲಿ ಒಬ್ಬನು ಇದ್ದಿದ್ದ
4. ನೀವು ಅಲ್ಲಿ ಇದ್ದೀರಾ?
5. ನಾವು ಇಲ್ಲಿ ಇಲ್ಲ.
6. ಬಹಳ ಜನರು ಆಗ ಅಲ್ಲಿದ್ದರು.
7. ನಾನು ಇಲ್ಲಿ ಇರುವವನಾಗಲಿ
8. ಅವನು ಈಗ ಎಲ್ಲಿದ್ದಾನೆ.
9. ಅವನು ಇಲ್ಲಿ ಇಲ್ಲ.
10. ನೀನು ಯಾವಾಗ ಇದ್ದೆ.

**ಈ ಕೆಳಗಿರುವ ಪದಗಳನ್ನು ಸಂಸ್ಕೃತಕ್ಕೆ ಅನುವಾದ ಮಾಡಿರಿ.**

1. ಅಲ್ಲಿ ಎಷ್ಟು ಇವೆ? / ಎಷ್ಟು ಜನರು ಇದ್ದಾರೆ?
2. ಒಬ್ಬನು ಇಂದು ಬೆಳಗ್ಗೆ ಅಲ್ಲಿ ಇದ್ದನು.
3. ಅವನು ಅಲ್ಲಿ ಇರಲಿ.
4. ನೀನು ಇಂದು ಸಂಜೆ ಇಲ್ಲಿ ಇರು.
5. ಸಂಜೆ ಅಲ್ಲಿ ಬಹಳ ಜನರು ಇದ್ದರು.
6. ನಾನು ಅಲ್ಲಿ ಇರುವವನಾಗಲಿ
7. ಅವರೆಲ್ಲ ರಾತ್ರಿ ಅಲ್ಲಿ ಇಲ್ಲ
8. ನೀವು ಇಂದು ರಾತ್ರಿ ಇಲ್ಲಿ ಇರುವಿರಿ?
9. ನಾವೆಲ್ಲರೂ ಇಲ್ಲಿ ಇದ್ದೆವು.
10. ಎಷ್ಟು ಜನರು ಇಲ್ಲಿದ್ದರು?

**ಉತ್ತರಗಳು**

१. त्वम् अद्य नक्तं तत्र एधि।
२. अद्य प्रातः तत्र कति आसन्?
३. तत्र एकः आसीत्।
४. यूयं तत्र आस्त किं?
५. वयं अत्र नास्म।
६. अनेके तदा तत्र आसन्।
७. अहम् अत्र असानि।
८. सः इदानीं कुत्रास्ति?
९. सः अत्र नास्ति।
१०. त्वं कदा आसीः?

# ಗೀತಾಸಂಸ್ಕೃತಿಯಿಂದ ಮುನ್ನಡೆ



ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಭೂಮಿಕ

ಭಗವದ್ಗೀತೆಯ ಹೆಸರು ಕೇಳಿರದ ಭಾರತೀಯನು ಇರಲಿಕ್ಕಿಲ್ಲ.ಕೇವಲ ಭಾರತೀಯರೊಂದೇ ಅಲ್ಲ, ಎಷ್ಟೋ ಜನ ಪಾಶ್ಚಾತ್ಯ ವಾಸಿಗಳು ಸಹಾ ಅನೇಕ ಶತಮಾನಗಳಿಂದ ಗೀತೆಯನ್ನು ಕುರಿತು ಕೇಳಿದ್ದಾರೆ. ಲಾಭವನ್ನು ಪಡೆದುಕೊಂಡಿದ್ದಾರೆ. ಗೀತಾಧ್ಯಯನಕ್ಕೆ, ಗೀತಾಸಂಸ್ಕೃತಿಗೆ ಇರುವ ವ್ಯತ್ಯಾಸ ಬಹಳ ಭಗವದ್ಗೀತೆಯನ್ನು ತಿಳಿದುಕೊಳ್ಳುವುದು,ಓದುವುದು ಗೀತಾಧ್ಯಯನವಾದರೆ ಅದನ್ನು ಜೀವನದಲ್ಲಿ ಆಚರಣೆ ತರುವುದು ಗೀತಾಸಂಸ್ಕೃತಿ ಎನಿಸಿಕೊಳ್ಳುತ್ತದೆ. ಶ್ರೀ ಕೃಷ್ಣನು ಗೀತೆಯನ್ನು ಉಪದೇಶಿಸಿದ ಸಮಯದಲ್ಲಿ ಅರ್ಜುನನು ಶಿಷ್ಯನಾಗಿ ಗೀತಾ ಸಂದೇಶವನ್ನು ತುಂಬಾ ಆಳವಾಗಿ ಅರಿತು ಕೊಂಡಿದ್ದಾನೆ. ಅದು ಅಧ್ಯಯನದಡಿಯೇ ಬರುತ್ತದೆ.ಅದನ್ನು ಜ್ಞಾನವೆನ್ನುತ್ತಾರೆ. ಗೀತಾಜ್ಞಾನವೆಂದರೆ ಅದೇ ಆದರೆ ಯಾವಾಗ ಗೀತಾಜ್ಞಾನ ಆಚರಣೆಗೆ ಬರುತ್ತದೋ ಅದು ವಿಜ್ಞಾನ ಅಥವಾ ಆಚರಣಾತ್ಮಕ ವಿಧಾನ ಅಥವಾ ಗೀತಾಸಂಸ್ಕೃತಿಯಾಗುತ್ತದೆ. ಗೀತಾ ಜ್ಞಾನವನ್ನು ಕೇಳಿದ ಬಳಿಕ ಕಡೆಗೆ ಅರ್ಜುನನು ತನ್ನ ಅಭಿಪ್ರಾಯವನ್ನು ತಿಳಿಯ ಪಡಿಸುತ್ತಾ, “ಕೃಷ್ಣಾ” ನನ್ನ ಮೋಹವೆಲ್ಲಾ ಇಳಿದು ಹೋಗಿದೆ. ನನ್ನ ಸ್ಮರಣೆ ಮರಳಿ ಬಂದಿದೆ. ನಾನೀಗ ಸೀಮಿತದಲ್ಲಿದ್ದೇನೆ.ನನ್ನ ಸಂದೇಹಗಳೆಲ್ಲಾ ಪರಿಹಾರಗೊಂಡಿದೆ. ಇನ್ನು ನೀ ಹೇಳಿದಂತೆಯೇ ಮಾಡುತ್ತೇನೆ ಎಂದು ಹೇಳಿದ್ದಾನೆ. ಅಂದರೆ ಆತನು ಗೀತಾಧ್ಯಯನವನ್ನು ಆಚರಣೆಯಲ್ಲಿ ತರಲು ಮುಂದಾಗಿದ್ದೇನೆ.ಕೇವಲ ಆಚರಣೆಯಲ್ಲಿ ತಂದಾಗ ಮಾತ್ರವೇ ಗೀತೆಯು ಅದ್ಭುತವಾದ ಫಲಿತವನ್ನು ಕೊಡುತ್ತದೆ. ಆದರೆ ಅಂತಹ ಆಚರಣೆಯನ್ನು ನಾವು ನಮ್ಮ ನರನಾಡಿಗಳಲ್ಲಿ ಜೀರ್ಣಿಸಿ ಕೊಳ್ಳುತ್ತಾ ಹೋದರೆ ಅದೇ ಸಂಸ್ಕೃತಿಯಾಗಿ ಮಾರ್ಪಡುತ್ತದೆ.

ಅಷ್ಟಕ್ಕೂ ಈ ಸಂಸ್ಕೃತಿಯೆಂದರೆ ಏನು? ದಾರಿಯಲ್ಲಿ ನಡೆದು ಕೊಂಡು ಹೋಗುತ್ತಿರುವ ವ್ಯಕ್ತಿ ಗುಡಿಯು ಬರುತ್ತಲೇ ಒಂದು ಕ್ಷಣ ತಡೆದು ನಿಂತು ನಮಸ್ಕರಿಸಿ ಹೋಗುವುದು ಆತನ ಸಂಸ್ಕೃತ. ಹುಟ್ಟು ಹಬ್ಬದಂದು ಹೊಸ ಬಟ್ಟೆಯನ್ನುಟ್ಟು ಬಾಲಕ ತನ್ನ ತಾಯ್ತಂದೆಯರಿಗೆ ನಮಸ್ಕರಿಸುವುದು ಆತನ ಸಂಸ್ಕೃತಿ ದೊಡ್ಡವರ ಕುರಿತು ಗೌರವವನ್ನು ತೋರಿಸುವುದು ಕೂಡ ಸಂಸ್ಕೃತಿಯೇ ಹೀಗೆ ಆಯಾ ಪರಿಸ್ಥಿತಿಯಲ್ಲಿ ನಮ್ಮನ್ನು ಯಾರೂ ಪ್ರೋತ್ಸಾಹಿಸದಿದ್ದರೂ ಹಲವು ಬಳ್ಳಿ ಕಾರ್ಯಗಳನ್ನು ಮಾಡುತ್ತಿರುತ್ತೇವೆ ಅದೇ ನಮ್ಮ ಸಂಸ್ಕೃತಿ. ಇನ್ನು ಭಗವದ್ಗೀತೆಯ ವಿಚಾರಗಳನ್ನು ನಾವು ನಮ್ಮ ದೈನಂದಿನ ಜೀವನದಲ್ಲಿ ಸಹಜವಾಗಿ ಅಳವಡಿಸಿಕೊಂಡೆವಾದರೆ ಅದು ಗೀತಾಸಂಸ್ಕೃತಿ ಎನಿಸಿಕೊಳ್ಳುತ್ತದೆ. ಭಗವದ್ಗೀತೆಯಲ್ಲಿ ಹೇಳಲ್ಪಟ್ಟ ಹಲವು ವಿಷಯಗಳನ್ನು ಭಕ್ತರು ನೋಡುತ್ತಲೆ ಇರುತ್ತಾರೆ.ಉದಾಹರಣೆಗೆ “ನನ್ನನ್ನು ಸ್ಮರಿಸುವುದು ನನ್ನ ಭಕ್ತನ ಗುರುತು ನನ್ನನ್ನು ಪೂಜಿಸುವುದೆಂದು ನನ್ನನ್ನು ನಮಸ್ಕರಿಸುವುದು”ಎಂದು ಶ್ರೀಕೃಷ್ಣ ಭಗವಾನನು ಭಗವದ್ಗೀತೆಯಲ್ಲಿ ಹೇಳಿದ್ದಾನೆ. ಭಕ್ತರನ್ನು ಉತ್ತಮವಾಗಿ ಆಚರಿಸುತ್ತಾರೆ. ಅದೇ ಗೀತಾ ಸಂಸ್ಕೃತಿ. ಆದರೆ ಶ್ರೀ ಕೃಷ್ಣ ಭಗವಂತನು ಗೀತೆಯಲ್ಲಿ ಅನೇಕ ವಿಷಯಗಳನ್ನು ಹೇಳಿದ್ದಾನೆ.ಅವುಗಳೆಲ್ಲವನ್ನು ಪಾಲಿಸಿದಾಗಲೇ ಪೂರ್ಣ ಜಯ ಲಭಿಸುತ್ತದೆ.

ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು ಮೊದಲಲ್ಲಿ “ಅರ್ಜುನಾ” ಈ ಹೃದಯ ದೌರ್ಬಲ್ಯವನ್ನೊಮ್ಮೆ ಮೆಚ್ಚಿ ಕೂಡಲೇ ಸಾಗಿ ಬಾ”ಎಂದು ಅದೆಷ್ಟೋ ಗಾಂಭೀರ್ಯದಿಂದ ನುಡಿ

ದಿದ್ದಾನೆ. ಗೀತಾಸಂಸ್ಕೃತಿಯನ್ನು ಮೈಗೂಡಿಸಿ ಕೊಳ್ಳ ಬೇಕೆಂದರೆ ಮೊಟ್ಟಮೊದಲು ಈ ವಿಷಯವನ್ನು ಎಲ್ಲರೂ ವಿಶೇಷವಾಗಿ ಯುವಕರು ಸಾಧಿಸಿಕೊಳ್ಳ ಬೇಕು. ಇದು ಸುಲಭದಲ್ಲಿ ಹತ್ತುವ ಕೈ ಗುಣದಲ್ಲಿ ಯಾದರೂ ಪೆಟ್ಟು ಬಿಡದೇ ಛಲದಿಂದ ಯತ್ನಿಸಿದರೆ ನಿಶ್ಚಯವಾಗಿ ಅಭ್ಯಾಸವಾಗಿ ಬಿಡುತ್ತದೆ.ಆಗ ನೀವು ಗೀತಾ ಸಂಸ್ಕೃತಿಯಲ್ಲಿ ಪ್ರವೇಶಿಸುವಂಥವರಾಗುತ್ತೀರಿ. ಈ ಮೊದಲ ಸಂದೇಶದಲ್ಲಿ ಶ್ರೀಕೃಷ್ಣನು ಎರಡು ವಿಚಾರಗಳನ್ನು ತಿಳಿಸಿದ್ದಾನೆ.ಮೊದಲು ಹೃದಯ ದೌರ್ಬಲ್ಯವನ್ನು ಬಿಟ್ಟುಬಿಡುವುದು.ಎರಡನೇಯದು ಕಾರ್ಯೋನ್ಮುಖರಾಗಲು ಸಿದ್ಧರಾಗುವುದು. ಯುದ್ಧ ಮಾಡಲು ಬಂದ ಅರ್ಜುನನು ಬಂಧು ಮಿತ್ರರಿಂದಲೇ ತುಂಬಿದ ಶತ್ರು ಸೈನ್ಯವನ್ನು ನೋಡುತ್ತಲೇ ಸ್ಥಿಮಿತವನ್ನು ಕಳೆದುಕೊಂಡು ಶಕ್ತಿ ಹೀನನಾಗಿದ್ದಾನೆ,ಕುಸಿದು ಬಿದ್ದಿದ್ದಾನೆ. ಆಗ ಭಗವಂತನು ತನ್ನ ಶ್ರೇಷ್ಠವಾದ ಉಪ ದೇಶವನ್ನು ನೀಡುತ್ತಾ "ಹೃದಯ ಬಲಹೀನತೆಯನ್ನು ತೊರೆದು ಬಾ" ಎಂದಿದ್ದಾನೆ. ಅಂದರೆ ಈ ಗೀತಾ ಸಂದೇಶದಲ್ಲಿ ನಾವು ಕಲಿತುಕೊಳ್ಳಬೇಕಾದುದೇ ನೆಂದರೆ "ಪ್ರತಿಯೊಬ್ಬ ವ್ಯಕ್ತಿಯೂ ಧೈರ್ಯದಿಂದ ನಿಲ್ಲ ಬೇಕು ಮತ್ತು ಕಾರ್ಯೋನ್ಮುಖನಾಗಬೇಕು."

ಮನುಷ್ಯ ಸಹಜವಾಗಿ ಭಯಭೀತನಾಗಿರುತ್ತಾನೆ. ಭಯವನ್ನು ಪ್ರಯತ್ನ ಪೂರ್ವಕವಾಗಿ ತೊಲಗಿಸ ಬೇಕು.ಮುಖ್ಯವಾಗಿ ಯುವಜನರಿಗೆ ಎಂಟ್ರನ್ಸ್ ಪರೀಕ್ಷೆ ಗಳು, ಇಂಟರ್‌ವ್ಯೂಗಳು, ಎಲ್ಲರ ಮುಂದೆ ಮಾತಾಡುವ ಎಷ್ಟೋ ಕೆಲಸಗಳು ಭಯವನ್ನು ತರಿಸುತ್ತವೆ. ಎದೆಯ ಬಲವಿಲ್ಲವಿರುವುದೇ ಅದಕ್ಕೆ ಕಾರಣ."ಹೃದಯ ದೌರ್ಬಲ್ಯವನ್ನು ಬಿಟ್ಟು ಬಿಡಬೇಕು."ಎಂದು ಭಗ ವಂತನು ಹೇಳಿದ ಮಾತನ್ನು ಪದೇ ಪದೇ ಬಾಯಿಂದ ಹೇಳಿಕೊಳ್ಳುವುದು, ನೆನೆಪಿಸಿಕೊಳ್ಳುವುದು ಒಂದು ಕಾಗದದಲ್ಲಿ ಬರೆದಿಡುವುದು ಮತ್ತು ಎದುರಿನ ಗೋಡೆಯ ಮೇಲೆ ಅಂಟಿಸಿಕೊಳ್ಳುವುದು. ಕಂಪ್ಯೂ ಟರ್‌ನಲ್ಲಿ ಟೈಪು ಮಾಡಿಕೊಂಡು ಆಗಾಗ ಅದನ್ನು ನೋಡುತ್ತಿರುವುದು ಇಂತಹ ಕೆಲಸಗಳು ಆ ದುರ್ಗುಣ ವನ್ನು ತೊಲಗಿಸುವಂತೆ ಮಾಡುತ್ತಿವೆ. ಇದರಿಂದಾಗಿ ಹೊಸಬರಲ್ಲಿ ಮಾತನಾಡುವ ಧೈರ್ಯವಿರುವುದು, ಯಾವುದೇ ಕೆಲಸಕ್ಕಾದರೂ ಮುಂದೆ ಬರುವುದು, ನಡಿಗೆಯಲ್ಲಿನ ವೇಗವನ್ನು ಹೆಚ್ಚಿಸಿಕೊಳ್ಳುವುದು. ಸಂದೇಹಗಳಿದ್ದರೆ ಹಿಂದೆ ಮುಂದೆ ನೋಡದೇ ಕೇಳುವುದು, ಇವೇ ಮೊದಲಾದುವು ಮನೋಬಲವನ್ನು ಹೆಚ್ಚಿಸುತ್ತವೆ. ಈ ರೀತಿಯಲ್ಲಿ ಗೀತಾಸಂದೇಶದಲ್ಲಿ ಹೇಳಿದ ಮಾತನ್ನು ಪಾಲಿಸುವ ಯತ್ನ ಮಾಡುವುದೇ ಗೀತಾಸಂಸ್ಕೃತಿ ಇದರ ಮೂಲಕ ಹಾಕುವ ಮುಂದಿನ ಹೆಜ್ಜೆ ಜೀವನ ದಲ್ಲಿ ಎಷ್ಟೋ ಕಲ್ಲು ಮುಳ್ಳುಗಳನ್ನು ದಾಟಿಸಿ ವಾಂಛಿತ ಗುರಿಯನ್ನು ಸೇರಿಸುತ್ತದೆ. ವರ್ಷಕ್ಕೆ ಕನಿಷ್ಠ ಐದು ಗೀತಾ ಸಂದೇಶಗಳನ್ನು ಅಳ ವಡಿಸಿ ಕೊಂಡರೆ ಅಂತಹ ಗೀತಾಸಂಸ್ಕೃತಿಯಿಂದ ಜೀವನದಲ್ಲಿ ಬೆಳಕು ಹರಿಯುವುದು ತಥ್ಯ.ಯುವಜನರು ಇದನ್ನು ಅನುಭವಕ್ಕೆ ಕೂಡಲೇ ಹೆಜ್ಜೆ ಮುಂದಿಡಬೇಕು.

ಶುಭಮಸ್ತು ! ವಿಜಯೇಸ್ತು!!


## STATEMENT ABOUT OWNERSHIP AND OTHER PARTICULARS ABOUT SAPTHAGIRI

**(MONTHLY)**
**FORM IV**
*See Rule 8*

| | | |
|---|---|---|
| 1. Place of Publication | : | TIRUPATI |
| 2. Periodicity of its Publication | : | Monthly |
| 3. Honorary Editor | : | **Dr. K.S. Jawahar Reddy,** I.A.S., Executive Officer, TTD |
| 4. Printer's Name | : | **Sri P. Ramaraju,** M.A., |
| Whether citizen of India | : | Yes |
| Address | : | Dy. E.O., (Publication & Press), T.T.D., Tirupati. |
| 5. Editor & Publisher's Name | : | **Prof. K.Rajagopalan,** Phd., |
| Whether citizen of India | : | Yes |
| Address | : | Chief Editor (FAC), Sapthagiri T.T.D. Journal, Tirupati. |
| 6. Name and address of individuals who own the News paper and partners or share holders holding more than one percent of the Total Capital | } | Board of Trustees represented by the Executive Officer on behalf of T.T.D., Tirupati |

*I,* **K.Rajagopalan,** *hereby declare that the particulars given above are true to the best of my knowledge and belief.*

TIRUPATI
Date : 28-2-2021

(Sd.) Prof. K. Rajagopalan
*Signature of the Publisher*




# ಕೊಡ್ಯಡ್ಕ (ಹೊಸನಾಡು ) ಅನ್ನಪೂರ್ಣೇಶ್ವರೀ

- ಬಿ.ಆರ್. ಶ್ರೀಕಂಠಯ್ಯ
9449457684

ಯಾವುದು ಇದು “ಹೊಸನಾಡು ಅನ್ನಪೂರ್ಣೇಶ್ವರಿ” !!, ಎಂಬ ಕುತೂಹಲ ಸಾಮಾನ್ಯವಾಗಿ ಎಲ್ಲರಲ್ಲೂ ಮೂಡುತ್ತದೆ. ನಾವೆಲ್ಲರೂ “ಹೊರನಾಡು ಅನ್ನಪೂರ್ಣೇಶ್ವರಿ” ನೋಡಿದ್ದೇವೆ ಮತ್ತು ಅದರ ಇತಿಹಾಸ ಕೇಳಿದ್ದೇವೆ. ಇದರ ಇತಿಹಾಸದ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ.

### ಶ್ರೀ ಕ್ಷೇತ್ರ ನಿರ್ಮಾಣದ ಹಿನ್ನೆಲೆ

ಈ ಕ್ಷೇತ್ರದ ಸಂಸ್ಥಾಪಕರು “ಹೆಗ್ಗಡೆ” ಮನೆತನಕ್ಕೆ ಸೇರಿದ ಶ್ರೀಜಯರಾಮ ಹೆಗ್ಗಡೆಯವರು. ಇವರು ೧೯೯೨ ರಲ್ಲಿ ಸಂಸಾರ ಸಮೇತ ಹೊರನಾಡು ಶ್ರೀಆದಿಶಕ್ತ್ಯಾತ್ಮಕ ಅನ್ನಪೂರ್ಣೇಶ್ವರಿ ದರ್ಶನಕ್ಕೆ ಬಂದಿದ್ದರು. ಆ ದೇವಿಯ ದರ್ಶನ ಮಾತ್ರದಿಂದಲೇ ಒಂದು ಹೇಳಲಾರದಂತಹ ಆನಂದವನ್ನು ಅನುಭವಿಸಿದರು. ತಮ್ಮ ಕುಟುಂಬದ ಆರಾಧ್ಯ ದೇವತೆ ಶ್ರೀದೇವಿ ಅನ್ನಪೂರ್ಣೇಶ್ವರಿಗೆ ಕೊಡ್ಯಡ್ಕದಲ್ಲಿ ಕ್ಷೇತ್ರವೊಂದನ್ನು ಕಟ್ಟಿಕೊಡಬೇಕೆನ್ನುವ “ಪ್ರೇರಣೆ”ಗೆ ಒಳಗಾದರು. ಈ ಸಂದರ್ಭದಲ್ಲಿ ಕಟೀಲು ಅರ್ಚಕರು, ಹದಿನೆಂಟು ವರ್ಷದ ಶ್ರೀ ಜಯರಾಮ ಹೆಗ್ಗಡೆಯವರಿಗೆ,ನಿನಗೆ ದೇವಸ್ಥಾನ ಕಟ್ಟಿಸುವ ಯೋಗವಿದೆ ಎಂದು ಹೇಳಿದ್ದನ್ನು ಮೆಲಕು ಹಾಕುತ್ತಾ ಮುಂದಿನ ಪ್ರಯತ್ನ ಮಾಡಬೇಕೆಂದು ತೀರ್ಮಾನಿಸಿದರು. ಈ ಪ್ರೇರಣೆಗೆ ತಕ್ಕಂತೆ, ಹೆಗ್ಗಡೆಯವರ ಚಿಕ್ಕತಾಯಿಯ ಸ್ವಪ್ನದಲ್ಲಿ ನಾನು ನಿಮ್ಮ ಕೊಡ್ಯಡ್ಕ ಭೂಮಿಯಲ್ಲಿ ನೆಲೆ ನಿಂತಿದ್ದೇನೆ ಎಂದು ದೇವಿಯ ಆದೇಶವಾಯಿತು. ಇದಕ್ಕೆ ಪೂರಕವಾಗಿ ಕಟೀಲಿನ ಜ್ಯೋತಿಷಿ, ತಮ್ಮ ಸ್ವಂತ ನಿವೇಶನದಲ್ಲಿಯೇ ದೇವಾಲಯ ನಿರ್ಮಾಣವಾಗಬೇಕೆನ್ನುವುದು ದೇವಿಯ ಸಂಕಲ್ಪ ಎಂದು ಹೇಳಿದರು. ಶ್ರೀದೇವಿಯ ಸನ್ನಿಧಿಯಲ್ಲಿ ಪರಿವಾರ ದೇವರುಗಳ ಯುಕ್ತವಾಗಿ ನೆಲೆಗೊಳ್ಳುವ ವಿಧಿ ವಿಧಾನಗಳ ಕುರಿತೂ ಅಧಿಸೂಚನೆಗಳನಿತ್ತರು. ಎಲ್ಲಾ ನ್ಯೂನತೆಗಳನ್ನು ಪರಿಹರಿಸಿಕೊಂಡು, ಸುಮಾರು ಏಳು ಎಕರೆ ವಿಸ್ತಾರ ಜಾಗದಲ್ಲಿ ಕ್ಷೇತ್ರದ ಶಂಕುಸ್ಥಾಪನೆಗೆ ಶುಭದಿನ ನಿಶ್ಚಯವಾಯಿತು. ಭೂಮಿ ಪೂಜೆ ಮಾಡುವ ಹಿಂದಿನದಿನ ಅನೇಕ ಶುಭ ಸೂಚನೆಗಳಾಯಿತು. ಆಗಲೇಬೇಕು,ಇದು ಆ ತಾಯಿಯ ನಿರ್ಣಯ ವಲ್ಲವೆ!

ಶ್ರೀ ಅನ್ನಪೂರ್ಣೇಶ್ವರಿ - ಒಳಾಂಗಳಕ್ಕೆ ಬಂದಾಗ, ಸುಂದರವಾದ ಶಿಲಾ ಮಂದಿರ, ಇಕ್ಕೆಲಗಳಲ್ಲಿರುವ ಸಿಂಹಗಳು, ಮಧ್ಯೆ ನಂದಿವಾಹನ ಎರಡು ಸಿಂಹ ದ್ವಾರಗಳಿರುವ ಈ ಕ್ಷೇತ್ರದಲ್ಲಿರುವ ಶ್ರೀ ಅನ್ನಪೂರ್ಣೇಶ್ವರಿಯು ದರ್ಶನ ವೀಯುತ್ತಾರೆ ಈ ಪಂಚಲೋಹದ ವಿಗ್ರಹವು, ಐದು ಅಡಿ ಎತ್ತರ ಮತ್ತು ೫೫೦ ಕಿಲೋ.ಗ್ರಾಂ ಭಾರವಿದೆ ಎಂದು ತಿಳಿದುಬರುತ್ತದೆ.

ವಿಗ್ರಹವನ್ನು ಕೆಲವೇ ಮಂದಿ ಋತ್ವಿಕರು ಮಾತ್ರ ಪವಾಡ ಸದೃಶವಾಗಿ ಸಾಗಿಸಿ ಎತ್ತಿ ನಿಲ್ಲಿಸಿದರು ಎಂದು ಹೇಳುತ್ತಾರೆ. ಇದು ಆಶ್ಚರ್ಯವಾದ ಸಂಗತಿ ಎಂದು ಹೇಳುತ್ತಾರೆ. ಈ ದೇವಿಯು ಚತುರ್ಭುಜಗಳಿಂದ ಕೂಡಿ, ಹಿಂದಿನ ಎರಡು ಹಸ್ತಗಳು ಮೇಲ್ಮುಖವಾಗಿದ್ದು, ಎಡ ಹಸ್ತದಲ್ಲಿ ಶಂಖ, ಬಲಹಸ್ತದಲ್ಲಿ ಚಕ್ರವನ್ನು ಧರಿಸಿದ್ದಾಳೆ ಹಾಗೂ, ಇನ್ನೆರಡು ಕೈಗಳಲ್ಪೈಕಿ ಎಡಹಸ್ತ ಅಭಯಹಸ್ತ ಮತ್ತು ಬಲಹಸ್ತದಲ್ಲಿ ಅನ್ನ ಸೌಟಿನೊಂದಿಗೆ ಭಕ್ತರನ್ನು ಕರುಣಿಸುತ್ತಿರುತ್ತಾಳೆ. ಶಿಲಾ ಮಂದಿರದಲ್ಲಿ ಸುಮಾರು ೪೦೦ ಭಕ್ತರು ನೆಲದ ಮೇಲೆ ಸುಖವಾಗಿ ದೇವಿಯ ಪೂಜಾ ಕೈಂಕರ್ಯಗಳನ್ನು ನೋಡಬಹುದು. ಇಲ್ಲಿಗೆ ಬರುವ ಭಕ್ತರು ಸಂಪ್ರದಾಯದಂತೆ ತಮ್ಮ ಅಂಗಿ ಮತ್ತು ಒಳ ಬನೀನು ತೆಗೆದು ಒಳಗೆ ಪ್ರವೇಶಿಸಬೇಕು.

### ಇತರ ದೇವಾಲಯಗಳು -

ಶ್ರೀ ಪ್ರಸನ್ನ ಗಣಪತಿ -ಗರ್ಭಗುಡಿಯ ಹಿಂಭಾಗದಲ್ಲಿ ಸುಂದರವಾದ ಶ್ರೀ ಪ್ರಸನ್ನ ಗಣಪತಿಯನ್ನು ದರ್ಶನ



ಮಾಡಬಹುದು. ಬೆಳ್ಳಿಯ ಕವಚ ಧರಿಸಿರುವ ಶಿಲಾ ಮೂರ್ತಿ ಬಹಳ ಸುಂದರವಾಗಿದೆ. ಈತ ಕ್ಷಿಪ್ರ ಫಲದಾಯಕ, ಇಲ್ಲಿ ಕಲ್ಲಿನಲ್ಲಿ ಕೆತ್ತಿರುವ ಗಣಪತಿ ಸ್ತೋತ್ರವನ್ನು ಹೇಳಿಕೊಂಡು ಭಕ್ತಿ ಭಾವದಿಂದ ನಮಸ್ಕರಿಸುವಾಗ ನಮ್ಮ ಮುಂದೆ ಪ್ರತ್ಯಕ್ಷವಾಗಿ ಬಂದಿರುವನೋ ಎಂಬ ಭಾವನೆ ಬರುತ್ತದೆ. ಶ್ರೀನಾಗ ಸನ್ನಿಧಿ-ಮೂರು ಹೆಡೆಗಳನ್ನು ಬಿಚ್ಚಿದ ನಾಗಲಿಂಗೇಶ್ವರ ಮೂರ್ತಿಯು ಬಹಳ ಸಂದರವಾಗಿದೆ. ಇಲ್ಲಿ ಆಶ್ಲೇಷ ಬಲಿ ವಿಶೇಷವಾಗಿ ನೆರವೇರಿಸಲಾಗುತ್ತದೆ. ಶ್ರೀ ಆಂಜನೇಯ ಸ್ವಾಮಿ ರಜತಕವಚ ಧರಿಸಿರುವ ಶಿಲಾ ಆಂಜನೇಯ ಮೂರ್ತಿ ಬಹಳ ಚೆನ್ನಾಗಿದೆ. ಇಲ್ಲಿ ಪವಮಾನ ಕಲಶಾಭಿಷೇಕ,ವಡಮಾಲ ಹಾರದ ಸೇವೆ, ಇತ್ಯಾದಿಗಳು ನಡೆಯುತ್ತದೆ. ಇಲ್ಲಿಯೂ ಕೂಡ, ಆಂಜನೇಯನ ಸ್ತೋತ್ರವನ್ನು ಕಲ್ಲಿನ ಮೇಲೆ ಕೆತ್ತಲಾಗಿದೆ. ನವಗ್ರಹ ಮಂದಿರ ಒಂಬತ್ತು ಗ್ರಹಗಳ ಮೂರ್ತಿಗಳು ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಗಿದೆ.

ಎಲ್ಲರಿಗೂ ತಿಳಿದ ಹಾಗೆ, ನಮ್ಮ ಜೀವನದ ಆಗು ಹೋಗುಗಳು ನವಗ್ರಹಗಳ ಸಂಚಾರದಿಂದಲೇ ಆಗುತ್ತದೆ. ಇಲ್ಲಿನ ವಿಶೇಷತೆ ಶನೈಶ್ಚರ ಪೂಜೆ, ನವಗ್ರಹ ಶಾಂತಿ ಇತ್ಯಾದಿ ಕಾರ್ಯಕ್ರಮಗಳು ನಡೆಯುತ್ತದೆ. ಗ್ರಹಚಾರ ಪರಿಹಾರಕ್ಕಾಗಿ, ದೀಪಗಳಿಗೆ ಎಣ್ಣೆ ಹಾಕುವ ಸಂಪ್ರದಾಯವಿದೆ. ಎಳ್ಳಿನ ಎಣ್ಣೆಯು ಬಹಳ ಶ್ರೇಷ್ಠವಾದುದು.

ನವದುರ್ಗೆಯರು - ಶಿಲಾ ತೀರ್ಥ ಮಂಟಪದ ಸುತ್ತಾ ಸುಮಾರು ನಾಲ್ಕು ಅಡಿ ಎತ್ತರವಿರುವ ಶಿಲಾಮೂರ್ತಿಗಳ, ಈ ನವದುರ್ಗೆಯರು ವಿರಾಜಮಾನರಾಗಿದ್ದಾರೆ. ಈ ಒಂಬತ್ತು ದುರ್ಗೆಯರ ಹೆಸರುಗಳು ಮತ್ತು ಸ್ತೋತ್ರ ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿರುತ್ತದೆ. ಈ ದುರ್ಗೆಯರ ಹೆಸರು ಮತ್ತು ರೂಪಗಳ ಹಿಂದೆ ವಿಶೇಷತೆ ಇದೆ.ನವರಾತ್ರಿಯ ಕಾಲದಲ್ಲಿ ಈ ನವದುರ್ಗೆಯರಿಗೆ ವಿಶೇಷ ಪೂಜೆಗಳು ನಡೆಯುತ್ತದೆ.

೧) ಶೈಲಪುತ್ರೀ ೨) ಬ್ರಹ್ಮಚಾರಿಣೀ ೩) ಚಂದ್ರ ಘಂಟಾ ೪) ಕೂಷ್ಮಾಂಡ ೫) ಸ್ಕಂದಮಾತಾ ೬) ಕಾತ್ಯಾಯನೀ ೭)ಕಾಳರಾತ್ರೀ ೮) ಮಹಾಗೌರೀ ೯) ಸಿದ್ಧಿದಾತ್ರೀ

ಪ್ರಥಮಂ ಶೈಲ ಪುತ್ರೀತಿ ದ್ವಿತೀಯಂ ಬ್ರಹ್ಮಚಾರಿಣೀ।
ತೃತೀಯಂ ಚಂದ್ರಘಂಟೇತಿ ಕೂಷ್ಮಾಂಡೇತಿ ಚತುರ್ಥಕಮ್।
ಪಂಚಮಂ ಸ್ಕಂದ ಮಾತೇತಿ ಷಷ್ಠಂ ಕಾತ್ಯಾಯನೀತಿ ಚ ।
ಸಪ್ತಮಂ ಕಾಳರಾತ್ರಿಶ್ಚ ಮಹಾಗೌರೀತಿ ಚಾಷ್ಟಮಮ್ ।
ನವಮಂ ಸಿದ್ಧಿದಾತ್ರೀ ಚ ನವದುರ್ಗಾಃ ಪ್ರಕೀರ್ತಿತಾಃ॥

ಶ್ರೀಶಂಕರಾಚಾರ್ಯ ಮತ್ತು ಶ್ರೀಮಧ್ವಾಚಾರ್ಯರ ವಿಗ್ರಹಗಳು-ಯಾವ ಬೇಧವಿಲ್ಲದೆ, ಅದ್ವೈತ ಮತ್ತು ದ್ವೈತ ತತ್ವಗಳನ್ನು ಪ್ರಚುರಪಡಿಸಿದ, ಶ್ರೀಶಂಕರಾಚಾರ್ಯರು ಮತ್ತು ಶ್ರೀಮಧ್ವಾಚಾರ್ಯರ ಶಿಲಾ ಮೂರ್ತಿಗಳನ್ನು ಕಾಣಬಹುದು. ಶ್ರೀಶಂಕರಾಚಾರ್ಯರ ಮೂರ್ತಿಯ ಪ್ರತಿಷ್ಠಾಪನೆ ಮತ್ತು ಸುಂದರವಾದ ಶ್ರೀಶಾರದ ಸಾಂಸ್ಕೃತಿಕ ಕಲಾ ಮಂದಿರವನ್ನು, ಶೃಂಗೇರಿ ಶಾರದಾ ಪೀಠದ ಮಹಾಸನ್ನಿಧಾನ ಶ್ರೀಶ್ರೀಭಾರತೀ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಮೇ ೧೯೯೯ರಲ್ಲಿ ನೆರವೇರಿತು ಹಾಗೂ, ಮಧ್ವಾಚಾರ್ಯರ ಮೂರ್ತಿಯನ್ನು ಪೇಜಾವರ ಮಠಾಧೀಶರಾಗಿದ್ದ ಶ್ರೀ ಶ್ರೀವಿಶ್ವೇಶತೀರ್ಥ ಶ್ರೀಪಾದಂಗಳು ಮೇ ೨೦೦೨ ರಲ್ಲಿ ಪ್ರತಿಷ್ಠಾಪಿಸಿದ್ದಾರೆ. ತುಳಸಿ ಬೃಂದಾವನ - ಬಹಳ ಸುಂದರವಾದ ಶಿಲೆಯ ತುಳಸೀ ಪೀಠ ಎಲ್ಲರನ್ನು ಆಕರ್ಷಿಸುತ್ತದೆ. ಇದರ ವಿಶೇಷತೆ,ಈ ತುಳಸೀ ಪೀಠವನ್ನು ಕೂರ್ಮವು ( ಅವತಾರ) ಹೊತ್ತಿರುವಂತಿದೆ.

ದೇವಿಯ ಸನ್ನಿಧಿಯಲ್ಲಿ ಮಹಾಪ್ರಸಾದಕ್ಕೆ ಕೊರತೆಯಿಲ್ಲ.ಈ ಕ್ಷೇತ್ರದಲ್ಲಿ ಎರಡು ಅನ್ನಛತ್ರಗಳಿವೆ. "ಅನ್ನಪೂರ್ಣ" ಮತ್ತು "ವೈಷ್ಣವಿ". ಶ್ರೀಅನ್ನಪೂರ್ಣಾ ಛತ್ರದಲ್ಲಿ, ಏಕಕಾಲದಲ್ಲಿ ಸುಮಾರು ೯೦೦ ಭಕ್ತರು ಅನ್ನ ಪ್ರಸಾದವನ್ನು ಸ್ವೀಕರಿಸಬಹುದು ಈ ಛತ್ರದ ಉದ್ಘಾಟನೆಯು, ಹೊರನಾಡು ಶ್ರೀಆದಿಶಕ್ತ್ಯಾತ್ಮಕ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮಾಧಿಕಾರಿಗಳಾದ, ಶ್ರೀ ಭೀಮೇಶ್ವರ ಜೋಶಿಯವರಿಂದ

೧೯೯೭ ರಲ್ಲಿ ನೆರವೇರಿತು. ಈ ಪ್ರಸಾದ ಭವನದಲ್ಲಿ, ನಮಗೆ ಶುಚಿಯಾದ ವಾತಾವರಣದಲ್ಲಿ ರುಚಿಯಾಗಿ ತಯಾರಿಸಿದ ಪ್ರಸಾದವನ್ನು ಶಿಸ್ತಿನಿಂದ ಎಲ್ಲರಿಗೂ ಬಡಿಸುತ್ತಾರೆ. ಎಲ್ಲರೂ, ಇಲ್ಲಿನ ನಿಯಮಗಳನ್ನು ಪಾಲಿಸಿ ಪ್ರಸಾದವನ್ನು ಸ್ವೀಕರಿಸ ಬೇಕು. ನಮಗೆ ಇಲ್ಲಿ ತಂಗಲು "ಶ್ರೀಕೃಷ್ಣ" ಅತಿಥಿ ಗೃಹವಿದೆ. ಇಲ್ಲಿದ್ದು, ನಾವು ದೇವಿಯ ಸೇವೆಗಳನ್ನು ಮಾಡ ಬಹುದು. ಪ್ರಾಂಗಣದ ಸುತ್ತಲೂ ಪ್ರದಕ್ಷಿಣೆ ಹಾಕುವಾಗ ನೂರೊಂದು ನುಡಿ ಮುತ್ತುಗಳನ್ನು ಓದಿಕೊಂಡು ನಿಧಾನವಾಗಿ ಹೋಗ ಬಹುದು. ಒಂದೊಂದು ಅಮೂಲ್ಯವಾದ ನುಡಿಗಳು.

ಶ್ರೀ ಕ್ಷೇತ್ರದಲ್ಲಿ, ಗಣ ಹೋಮ, ಹನುಮ ಜಯಂತಿ, ನಾಗರ ಪಂಚಮಿ, ಶ್ರೀಚಂಡಿಕಾ ಹೋಮ, ಇತ್ಯಾದಿ ಅನೇಕ ಉತ್ಸವಗಳು ನಡೆಯುತ್ತಿರುತ್ತವೆ. ನಾವು ಅಮ್ಮನಿಗೆ ಭಕ್ತಿಯಿಂದ ನೀಡಿದರೆ,ನಮಗೆ ಅಮ್ಮ ನೀಡುತ್ತಾಳೆ ಎಂಬ ನಿಸ್ವಾರ್ಥ ಭಾವ ದಿಂದ, ಕಾಲಕ್ಕೆ ಅನುಗುಣವಾಗಿ, ಹೊರೆಕಾಣಿಕೆ, ಅಕ್ಕಿ, ಮತ್ತ ಇತರೇ ಅನ್ನಪ್ರಸಾದಕ್ಕೆ ಉಪಯೋಗಿಸುವ ಪದಾರ್ಥಗಳನ್ನು ತಂದು ಕೊಡುತ್ತಾರೆ. ತಮ್ಮ ಕೋರಿಕೆಗಳನ್ನು ಪೂರ್ಣ ಗೊಳಿ ಸಿದ ತಾಯಿ ಅನ್ನಪೂರ್ಣೇಗೆ ಸೀರೆಯನ್ನುಡಿಸಿ,ತಮ್ಮ ಭಕ್ತಿ ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತಾರೆ.

ಸುಮಾರು ಎರಡೂವರೆ ದಶಕಗಳ ಹಿಂದೆ ಶ್ರೀ ಕ್ಷೇತ್ರದಲ್ಲಿ ಸ್ಥಾಪಿತವಾದ ಶ್ರೀಅನ್ನಪೂರ್ಣೇಶ್ವರಿಯು ತನ್ನ ಭಕ್ತರನ್ನು ಅನುಗ್ರಹಿಸಿ ಎಲ್ಲರನ್ನೂ ಕರುಣಿಸುತ್ತಿದ್ದಾಳೆ.

ದೇವಿಯ ಬ್ರಹ್ಮ ರಥೋತ್ಸವವು ಪ್ರತಿವರ್ಷ"ಜನವರಿ ೨೭ ರಂದು" ನೆರವೇರುತ್ತದೆ ಎಂದು ತಿಳಿದುಬರುತ್ತದೆ. ಈ ಕಾಲದಲ್ಲಿ ಭಕ್ತರ ಸಂದಣಿ ಇರುತ್ತದೆ.

ತಿರುಗುವ ಶಿಲಾಗೋಲ - ಇಲ್ಲಿ ಒಂದು ವಿಶೇಷತೆಯನ್ನು ಕಾಣಬಹುದು. ಗ್ರಾನೈಟಿನಿಂದ ಮಾಡಲ್ಪಟ್ಟ ಈ ಶಿಲಾಗೋಲವು ಸುಮಾರು ೧೫೦೦ ಕೆ.ಜಿ ತೂಕವಿದೆ. ವೈಜ್ಞಾನಿಕ ತಳಹದಿಯ ಮೇಲೆ, ಈ ಗೋಲವು ಸರಾಗವಾಗಿ ತಿರುಗಬಲ್ಲದು, ಗೋಲದ ಕೆಳಗೆ ೮/೧೦೦೦" ಮಾತ್ರ ಸ್ಥಳಾವಕಾಶವಿದೆ. ಇದು ಕೇವಲ ನೀರಿನ ಮೇಲ್ಮುಖ ಒತ್ತಡದ ಪ್ರಭಾವ ದಿಂದ ನೆರವೇರುತ್ತದೆ ಎಂದು ತಿಳಿದುಬರುತ್ತದೆ. ಈ ಗೋಲದ ತಿರುಗಣೆಯನ್ನು ಮಕ್ಕಳು ಕೂಡ ನಿಲ್ಲಿಸಬಹುದು. ಇಲ್ಲಿ ಇದರ ವಿವರಣೆಯ ಫಲಕವಿದೆ.

ಇದನ್ನು ನೋಡಿಯೇ ಆನಂದಿಸ ಬೇಕು. ಇಲ್ಲಿನ ಮೃಗಾಲಯವು ಬಹಳ ಸುಂದರವಾಗಿದೆ. ಇಲ್ಲಿ, ನವಿಲು, ಪಾರಿವಾಳ, ಜಿಂಕೆ, ಕಾಡುಬೆಕ್ಕು, ವಾನರಗಳು, ಕುದುರೆ ಮತ್ತು ಆನೆ ಇತ್ಯಾದಿ ಪ್ರಾಣಿಗಳನ್ನು ನೋಡಿ ಮಕ್ಕಳೂ ಮತ್ತು ಹಿರಿಯರು ಆನಂದಿಸಬಹುದು.

ಈ ಕ್ಷೇತ್ರಕ್ಕೆ ನಾವು ಮಂಗಳೂರಿನಿಂದ (೩೫ ಕಿ.ಮೀ.) ಬರಬಹುದು ಮತ್ತು ಬೇರೆ ಕ್ಷೇತ್ರಗಳನ್ನು ದರ್ಶಿಸಿ "ಕಟೀಲು ದುರ್ಗಾ ಪರಮೇಶ್ವರಿ' (೨೫ ಕಿ.ಮೀ.) ಸನ್ನಿಧಿಯಿಂದಲೂ ಬರಬಹುದು. ತಮ್ಮ ಸ್ವಂತ ವಾಹನದಲ್ಲಿ ಬರುವವರಿಗೆ ವಾಹನ ನಿಲುಗಡೆಗೆ ವಿಶಾಲವಾದ ಜಾಗವಿದೆ. ಈ ಕ್ಷೇತ್ರಕ್ಕೆ, ಅದು "ಹೊರ ನಾಡು" ಇದು "ಹೊಸನಾಡು" ಎಂಬುದಾಗಿ ಪೇಜಾವರ ಶ್ರೀಗಳು ಹೆಸರಿಸಿದರು ಎಂಬುದಾಗಿ ತಿಳಿದು ಬರುತ್ತದೆ. ನಾವು ರಸ್ತೆಯಿಂದ ಒಳಗೆ ಬರುವಾಗಲೇ ಎತ್ತರವಾದ ದ್ವಾರ ನಮ್ಮನ್ನು ಸ್ವಾಗತಿಸುತ್ತದೆ. ಒಳಾಂಗಣಕ್ಕೆ ಬಂದರೆ ಬೃಹದಾಕಾರವಾದ ಸಂಜೀವಿನಿ ಪರ್ವತ ಹೊತ್ತು ಆಂಜನೇಯನನ್ನು ದರ್ಶಿಸಬಹುದು. ತಂಪಾದ ವಾತಾವರಣದಲ್ಲಿ ಅನೇಕ ಮರ ಗಿಡಗಳ ಮಧ್ಯೆ ಮುಂದೆ ಸಾಗಿದರೆ, ನಮಗೆ ತಾಯಿಯ ದರ್ಶನ ದೊರೆಯುತ್ತದೆ.

ಅನ್ನಪೂರ್ಣೇ ಸದಾ ಪೂರ್ಣೇ ಶಂಕರ ಪ್ರಾಣವಲ್ಲಭೇ
ಜ್ಞಾನ ವೈರಾಗ್ಯ ಸಿದ್ಧ್ಯರ್ಥಂ ಭಿಕ್ಷಾಂ ದೇಹಿ ಚ ಪಾರ್ವತಿ

ಎಂದು ಆ ಮಹಾತಾಯಿಯನ್ನು ಪ್ರಾರ್ಥಿಸೋಣ.

ಜಲಬಿಂದು ನಿಪಾತೇನ ಕ್ರಮಶಃ ಪೂರ್ಯತೇ ಘಟಃ ।
ಸಹೇತುಃ ಸರ್ವ ವಿದ್ಯಾನಾಂ ಧರ್ಮಸ್ಯ ಚ ಧನಸ್ಯ ಚ ॥

**ನೀರಿನ ಒಂದೊಂದೇ ಹನಿ ಬೀಳುತ್ತಾ ಕ್ರಮೇಣ ಬಿಂದಿಗೆಯು ತುಂಬುತ್ತದೆ. ಹಾಗೆಯೇ ವಿದ್ಯೆ, ಧರ್ಮ, ಮತ್ತು ಸಂಪತ್ತಿನ ವಿಷಯದಲ್ಲಿಯೂ ಸಹಾ, ಕ್ರಮೇಣವಾಗಿ ನಮ್ಮ ನಿರಂತರ ಪ್ರಯತ್ನದಿಂದ ಅವು ನಮಗೆ ಒಲಿಯುತ್ತವೆ.**



# ಪವಿತ್ರ ನದಿ

ಶ್ರೀಮತಿ. ಸುಮನ ಬದ್ರಿನಾಥ್

94820 94855

ನತೋಸ್ಮಿ ತುಂಗಾಂ ವಿಲಸತ್ತರಂಗಾಂ
ಅಘೌಘ ಭಂಗಾಂ ಹರಿಪಾದ ಸಂಗಾಂ
ಶ್ರೀತೋಸ್ಮಿ ಭದ್ರಾಂ ಹೃತ ಪಾಪ ನಿದ್ರಾಂ
ವಿಮುಕ್ತಿ ಪದ್ಯಾಂ ವಿಮಲೈಕ ಸಾಧ್ಯಾಂ ॥

ಶ್ರೀವಾದಿರಾಜ ಗುರು ಸಾರ್ವಭೌಮರು ತಮ್ಮ ತೀರ್ಥ ಪ್ರಬಂಧ ಗ್ರಂಥದಲ್ಲಿ ತುಂಗಭದ್ರಾ ನದಿಯನ್ನು ಹೀಗೆ ಸ್ತುತಿಸಿರುತ್ತಾರೆ.ತುಂಗಭದ್ರೆ ಭಾರತದ ಪುಣ್ಯನದಿಗಳಲ್ಲೊಂದು ಕರ್ನಾಟಕ,ಆಂಧ್ರಪ್ರದೇಶ,ತೆಲಂಗಾಣಗಳ ಪ್ರಮುಖ ನದಿಗಳಲ್ಲೊಂದು,ಆದಿ ಕಾವ್ಯವಾದ ರಾಮಾಯಣದ ಪಂಪಾನದಿ ಇದೇ. ಮಹಾಭಾರತದಲ್ಲಿ ಮತ್ಸ್ಯಪುರಾಣ, ಮಾರ್ಕಾಂಡೇಯ ಪುರಾಣ, ಭಾಗವತ ಪುರಾಣಗಳಲ್ಲಿ ತುಂಗಭದ್ರೆಯ ಉಲ್ಲೇಖವಿದೆ. ಬ್ರಹ್ಮಾಂಡಪುರಾಣದಲ್ಲಿ "ತುಂಗ ಭದ್ರಾ ಮಹಾತ್ಮೆ" ಎಂಬ ಅಧ್ಯಾಯವೇ ಇದೆ. ಕಾವ್ಯಗಳಲ್ಲಿ, ಗ್ರಂಥಗಳಲ್ಲಿ, ಹರಿದಾಸರ ಕೃತಿಗಳಲ್ಲಿ ಜಾನಪದ ಗೀತೆಗಳಲ್ಲಿ, ತುಂಗಭದ್ರೆಯ ಮಹಿಮೆ ಅನೇಕ ವಿಧಗಳಲ್ಲಿ ವರ್ಣಿತಗೊಂಡಿದೆ. ಇಂತು ಪ್ರಸಿದ್ಧಳಾದ ತುಂಗಭದ್ರೆಯ ಸ್ನಾನ, ಪೂಜೆಗಳು ಸದಾ ಪುಣ್ಯಪ್ರದವೇ ಆದರೂ ಈ ವರ್ಷ ಇದಕ್ಕೆ ಅತಿ ಹೆಚ್ಚಿನ ಮಹತ್ವ ಬಂದಿದೆ. 12 ವರ್ಷಗಳಿಗೊಮ್ಮೆ ಬರುವ 'ತುಂಗಭದ್ರಾ ಪುಷ್ಕರ ಪರ್ವ ಕಾಲ' ಇದಾಗಿದೆ.

ಈ ಪುಷ್ಕರ ಪರ್ವಕಾಲ ಅತ್ಯಂತ ವೈಶಿಷ್ಟ್ಯ ಪೂರ್ಣವಾದುದು. ಅದರ ಹಿಂದಿನ ಐತಿಹ್ಯ ಹೀಗಿದೆ. ಬ್ರಹ್ಮನು ಸೃಷ್ಟಿಕಾರ್ಯದಲ್ಲಿ ತೊಡಗಿದ್ದಾಗ ಜಲದೇವತೆ ಎನಿಸಿದ ಪುಷ್ಕರ ಹಾಗೂ ದೇವತೆಗಳ ಆಚಾರ್ಯ ಬೃಹಸ್ಪತಿ (ಗುರು) ಇಬ್ಬರೂ ಅವನಿಗೆ ತುಂಬ ನೆರವನ್ನಿತ್ತರು. ಇದರಿಂದ ಸುಪ್ರೀತನಾದ ಬ್ರಹ್ಮ ಅವರಿಬ್ಬರಿಗೂ ಪುಷ್ಕರ ಮತ್ತು ಬೃಹಸ್ಪತಿ (ಗುರು) - ಇಬ್ಬರೂ ರಾಶಿಚಕ್ರದ ಒಂದೊಂದು ರಾಶಿಯನ್ನು ಪ್ರವೇಶಿಸಿದಾಗಲೂ (ಇಬ್ಬರೂ ಒಟ್ಟಿಗೆ ಪ್ರವೇಶಿಸುತ್ತಾರೆ) ಭಾರತದ 12 ಸುಪ್ರಸಿದ್ಧ ಪುಣ್ಯ ನದಿಗಳಲ್ಲಿ ಒಂದೊಂದಕ್ಕೂ ಆ ವರುಷ ಪುಷ್ಕರ ಪರ್ವಕಾಲ ಉಂಟಾಗುವುದೆಂದು ವರವನ್ನಿತ್ತ, ಆ ಕಾಲದಲ್ಲಿ ಬ್ರಹ್ಮನೂ ಒಡಗೂಡಿ 33 ಕೋಟಿ ದೇವತೆಗಳೂ ಗಂಗಾದಿ ಸಕಲ ಪುಣ್ಯ ತೀರ್ಥಗಳೂ ಆ ನದಿಯಲ್ಲಿ ನೆಲಸಿರುವುದೆಂದು ವರ ಕೊಟ್ಟ. ಈ ಪುಷ್ಕರ ಕಾಲದ ಮೊದಲು 12 ದಿನಗಳು ಮತ್ತು ಕಡೆಯ 12 ದಿನಗಳು ಸ್ನಾನ, ದಾನ, ಪಿತೃಕಾರ್ಯಗಳಿಗೆ ಬಹು ಶ್ರೇಷ್ಠ ಇದಕ್ಕೆ ಆದಿ ಪುಷ್ಕರ ಮತ್ತು ಅಂತ್ಯ ಪುಷ್ಕರ ಎನ್ನುವರು. ಮಿಕ್ಕ ದಿನಗಳಲ್ಲಿ ಮಧ್ಯಾಹ್ನ ಸ್ವಲ್ಪ ಹೊತ್ತು ಈ ಪುಣ್ಯ ಕಾಲ ವಿರುತ್ತದೆ. ಪುಷ್ಕರ ಪರ್ವಕಾಲವು ಗುರು ಪುಷ್ಕರರು ಮೇಷರಾಶಿಯಲ್ಲಿದ್ದಾಗ ಗಂಗೆಗೆ, ಕರ್ಕಾಟಕದಲ್ಲಿದ್ದಾಗ ಯಮುನೆಗೆ ಸಿಂಹದಲ್ಲಿದ್ದಾಗ ಗೋದಾವರಿಗೆ, ಕನ್ಯಾದಲ್ಲಿದ್ದಾಗ, ಕೃಷ್ಣೆಗೆ, ತುಲಾದಲ್ಲಿದ್ದಾಗ ಕಾವೇರಿಗೆ ಮತ್ತು ಮಕರದಲ್ಲಿದ್ದಾಗ ತುಂಗಭದ್ರೆಗೆ ಉಂಟಾಗುತ್ತವೆ. ಈ ವರ್ಷ ತುಂಗಭದ್ರಾ ಪುಷ್ಕರ ಪರ್ವಕಾಲ.

ತುಂಗಭದ್ರಾ ಪುಷ್ಕರ ಪರ್ವಕಾಲವು 20 ನೇ ತಾರೀಖು ನವೆಂಬರ್ 2020 ನೇ ಇಸವಿ ಕಾರ್ತೀಕ ಮಾಸದ ಶುಕ್ಲ ಪಕ್ಷದ ಷಷ್ಠಿ ಶುಕ್ರವಾರದಂದು ಪ್ರಾರಂಭಗೊಂಡಿತು. ಅಂದು ಗುರು ಮತ್ತು ಪುಷ್ಕರರು ಮಕರ ರಾಶಿಯನ್ನು ಪ್ರವೇಶಿಸಲಿದ್ದಾರೆ. ಮೊದಲ 12 ದಿನಗಳು ಪವಿತ್ರ ಪುಣ್ಯ ಕಾಲವಾಗಿದ್ದು. ಈ ಪರ್ವಕಾಲ ಡಿಸೆಂಬರ್ 1 ನೇ ತಾರೀಖು ಕಾರ್ತೀಕ ಬಹುಳ ಪಾಡ್ಯ ಮಂಗಳವಾರದಂದು ಕೊನೆಗೊಳ್ಳಲಿದೆ. ತುಂಗಭದ್ರೆ ಹರಿಯುವ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣಗಳ ಪವಿತ್ರ ಯಾತ್ರಾ ಸ್ಥಳಗಳಲ್ಲಿ ಈ ಪುಷ್ಕರ ಪರ್ವಕಾಲ ಅತ್ಯಂತ ವಿಜೃಂಭಣೆಯಿಂದ ನಡೆಯಲಿದ್ದು, ಸಾವಿರಾರು ಭಕ್ತರು ನೆರೆದು ಪವಿತ್ರಸ್ನಾನ ಮಾಡಲಿದ್ದಾರೆ. ಅದಕ್ಕಾಗಿ ಮೂರು ರಾಜ್ಯಗಳು ತಮ್ಮ ತಮ್ಮ ರಾಜ್ಯದ ಸ್ನಾನಘಟ್ಟಗಳಲ್ಲಿ ಯಾತ್ರಿಕರಿಗಾಗಿ ವಿಶೇಷ ಸೌಲಭ್ಯಗಳನ್ನು ಜಾಗ್ರತಾ ಕ್ರಮಗಳನ್ನು ಕೈಗೊಂಡರು.

ತುಂಗಭದ್ರೆ ಕರ್ನಾಟಕದ ಶಿವಮೊಗ್ಗ ಜಿಲ್ಲೆಯಲ್ಲಿರುವ ಸಹ್ಯಾದ್ರಿ ಪರ್ವತ ಶ್ರೇಣಿಯ ವರಾಹ ಪರ್ವತದಲ್ಲಿ, ಶೃಂಗೇರಿಯಿಂದ 10 ಮೈಲಿ ದೂರದಲ್ಲಿ ಗಂಗಾಮೂಲ ಎಂಬಲ್ಲಿ

ಹುಟ್ಟುತ್ತವೆ. ಅವಳ ಹುಟ್ಟುವಿಕೆಯ ಹಿನ್ನೆಲೆಯ ಕತೆ ಹೀಗಿದೆ.ಶ್ರೀಮನ್ನಾರಾಯಣನು ವರಾಹಾವತಾರವನ್ನು ಮಾಡಿದಾಗ ಹಿರಣ್ಯಕ್ಷನ ವಧೆಯ ನಂತರ ಇಲ್ಲಿ ವಿಶ್ರಮಿಸಿ ದನು.ಆಯಾಸಗೊಂಡ ಅವನ ದೇಹ ದಿಂದ ಬೆವರು ಹರಿದು ನದೀರೂಪತಾಳಿತು. ವರಾಹ ದೇವರ ಬಲಗಡೆ ಉನ್ನತ ವಾಗಿದ್ದು "ತುಂಗ" ಆಗಿದ್ದುದರಿಂದ ಅದರಿಂದ ಹುಟ್ಟಿದ ನದಿ ತುಂಗಾ ಎಂದು ಪ್ರಸಿದ್ಧವಾಯಿತು.ದೇವರ ಎಡಗಡೆ ಭದ್ರ ವಾಗಿದ್ದುದರಿಂದ ಅದರಿಂದ ಹುಟ್ಟಿದ ನದಿ ಭದ್ರಾ ಎಂದು ಹೆಸರಾಯಿತು. ನೇತ್ರಾವತಿ ಕಣ್ಣಿನಿಂದಲೂ, ವಾರಾಹಿ ಪುಚ್ಛದಿಂದಲೂ ಹುಟ್ಟಿ ಪಶ್ಚಿಮದಿಕ್ಕಿಗೆ ಹರಿದವು. ತುಂಗೆ ಮತ್ತು ಭದ್ರೆ ಪೂರ್ವ ಮುಖಿಯಾಗಿ ಪ್ರವಹಿಸಿದವು. ತುಂಗಾನದಿ ಶೃಂಗೇರಿ ತೀರ್ಥಹಳ್ಳಿ, ಮಹಿಷಿ ಮಂಡ ಗದ್ದೆ, ಶಿವಮೊಗ್ಗಗಳ ಮೂಲಕ ಹರಿದು ಕೂಡಲಿಗೆ ಬರುತ್ತದೆ. ಭದ್ರಾನದಿ ಬಾಬಾ ಬುಡನ್ ಗಿರಿತಪ್ಪಲು ಹೊರನಾಡು, ಭದ್ರಾವತಿ ಹೊಳೆ ಹೊನ್ನೂರುಗಳ ಮೂಲಕ ಹರಿದು ಕೂಡಲಿಗೆ ಬರುತ್ತದೆ. ಅಲ್ಲಿ ಇವೆರಡರ ಸಂಗಮ. ತುಂಗ ಭದ್ರೆಯಾಗಿ ಹೊನ್ನಾಳಿ, ಹರಿ ಹರ, ಹಂಪೆ, ಮಂತ್ರಾಲಯ, ಅಲಂಪುರಗಳ ಮೂಲಕ ಒಟ್ಟು ಸುಮಾರು 600 ಕಿ.ಮೀ.ಹರಿದು ಕರ್ನೂಲಿನ ಬಳಿ ಕೃಷ್ಣಾ ನದಿಯನ್ನು ಸಂಗಮಿಸುತ್ತದೆ.

ತುಂಗಭದ್ರಾನದಿಯಲ್ಲಿ ಸ್ನಾನದ ಮೊದಲ ಪುಣ್ಯಕ್ಷೇತ್ರ ಕೂಡಲಿ.ಹಿಮಾಲಯದಲ್ಲಿ ಪರಸ್ಪರ ಸನಿಹದಲ್ಲೇ ಹುಟ್ಟಿ ಪ್ರಯಾಗದಲ್ಲಿ ಒಂದಾಗುವ ಗಂಗೆ, ಯಮುನೆಯರ ಸಂಗಮ ದಂತೆಯೆ ಪವಿತ್ರವಾದುದು, ತುಂಗಭದ್ರೆಯರ ಈ ಸಂಗಮ ಸ್ಥಾನ.ಇದು ನರಸಿಂಹಕ್ಷೇತ್ರವೆಂದು ಪುರಾಣ ಪ್ರಸಿದ್ಧ ವಾಗಿದ್ದು. ಶಿವಮೊಗ್ಗೆಯಿಂದ 17 ಕಿ.ಮೀ. ದೂರದಲ್ಲಿದೆ. ಸಂಗಮ ಸ್ಥಳದಲ್ಲಿ ಬ್ರಹ್ಮ ತೀರ್ಥವಿದೆ ಎನ್ನಲಾಗಿದ್ದು, ಅಲ್ಲಿಯೇ ಸಂಗಮೇಶ್ವರನೆಂದು ಹೆಸರಾದ ಶಿವಲಿಂಗ ಪ್ರತಿಷ್ಠಾಪಿತ ಗೊಂಡಿರುವ ಸಣ್ಣ ಮಂಟಪವೂ ಹಲವಾರು ನಾಗರ ಕಲ್ಲು ಗಳೂ ಇವೆ. ನದಿ ತುಂಬಿ ಹರಿಯುವಾಗ ಮುಳುಗಿ ಹೋಗುವ ಇವುಗಳನ್ನು ಬೇಸಿಗೆಯಲ್ಲಿ ನೀರು ಸ್ವಲ್ಪವಿರುವಾಗ ಕಾಣಬಹು ದಾಗಿದೆ. ಸಂಗಮ ಸ್ಥಳದಲ್ಲಿ ಕಲ್ಲು ಪಾವಟಿಗೆಗಳಿದ್ದು ಸ್ನಾನಕ್ಕೆ ಸ್ಥಳ ಪ್ರಶಸ್ತವಾಗಿದೆ. ನದಿಯಲ್ಲಿ ಮಿಂದು ಮೆಟ್ಟಿಲುಗಳನ್ನೇರಿ ಸ್ವಲ್ಪ ದೂರ ನಡೆದು ಬಂದರೆ ಚಿಂತಾಮಣಿ ನರಸಿಂಹ ಸ್ವಾಮಿಯ ದೇಗುಲವಿದೆ. ಪ್ರಹ್ಲಾದನಿಂದ ಪ್ರತಿಷ್ಠಿತ ವೆನ್ನಲಾ ಗುವ ಈ ನರಸಿಂಹಸ್ವಾಮಿ ಸಾಲಿಗ್ರಾಮ ಶಿಲಾ ನಿರ್ಮಿತ ವಾದುದು. ಶಿರಸ್ಸಿನಲ್ಲಿ ಚಕ್ರಚಿಹ್ನೆಗಳಿಂದ ಅಂಕ್ರಿತವಾಗಿರುವು ದರಿಂದ ಶಿರಶ್ಚಕ್ರಮೂರ್ತಿ ಎಂಬ ಅಭಿಧಾನ ಹೊಂದಿದೆ. ವಿಶ್ವ ರೂಪ ದರ್ಶನದಲ್ಲಿಯೂ ಅಲಂಕೃತ ಗೊಂಡಾಗಲೂ ಬಹು ಸುಂದರ ಮೂರ್ತಿ.ಪ್ರಾಕಾರದಲ್ಲಿ ಅನೇಕ ಶಿಲಾಶಾಸನಗಳೂ, ಸಂಜೀವ ಮುಖ್ಯ ಪ್ರಾಣನ ಸನ್ನಿಧಿಯೂ ಇದೆ. ಇದಲ್ಲದೆ ಬ್ರಹ್ಮ ಪ್ರತಿಷ್ಠಾಪಿತ ಬ್ರಹ್ಮೇಶ್ವರ ದೇವಸ್ಥಾನ, ಆದಿಶಂಕರಾ ಚಾರ್ಯರಿಂದ ಪ್ರತಿಷ್ಠಾಪಿತವೆನ್ನಲಾಗುವ ನಿಂತ ನಿಲುವಿನ ಶಾರದಾಂಬೆಯ ದೇವಾಲಯ, ಆರ್ಯ ಅಕ್ಷೋಭ್ಯತೀರ್ಥರ ಪರಂಪರೆಯ ಮಾಧ್ವಮಠವೂ ಇದ್ದು ಕೂಡಲಿ ತುಂಗಭದ್ರಾ ನದಿಯ ದಡದ ಮೊದಲ ಪುಣ್ಯ ಕ್ಷೇತ್ರವೆನಿಸಿದೆ.

ನಂತರದ ಕ್ಷೇತ್ರ ಹೊನ್ನಾಳಿ ಭಾಸ್ಕರ ಕ್ಷೇತ್ರವೆಂದು ಪುರಾಣಗಳಲ್ಲಿ ಪ್ರಸಿದ್ಧಿ. ಹೊನ್ನು ಎಂದರೆ ಚಿನ್ನ ಅನಲ ಎಂದರೆ ಬೆಂಕಿ.ಎರಡೂ ಸೇರಿ ಹೊನ್ನಾಳಿಯಾಗಿದೆ. ಮೊದಲಿಗೆ ಬಂಗಾರವನ್ನು ಅಗೆದು ತೆಗೆಯುವ ಉದ್ಯಮ ಇಲ್ಲಿತ್ತು, ಹೊನ್ನಾಳಿ ಈಗ ಅಲ್ಲಿರುವ ರಾಘವೇಂದ್ರ ಸ್ವಾಮಿಗಳ ಬೃಂದಾವನದಿಂದಾಗಿ ದ್ವಿತೀಯ ಮಂತ್ರಾಲಯವೆಂದು ಪ್ರಖ್ಯಾತವಾಗಿದೆ. ಪ್ರಶಾಂತ ಪರಿಸರದಲ್ಲಿ ತುಂಗಭದ್ರೆಯ ದಡದಲ್ಲಿ ರಾಯರು ನೆಲೆಸಿರುವ ಈ ಸ್ಥಳ ಅತ್ಯಂತ ಜಾಗೃತವೆಂದು ಪ್ರಖ್ಯಾತವಾಗಿದ್ದು ರಾಯರ ಭಕ್ತರಿಗೆ ಪವಿತ್ರಯಾತ್ರಾ ಸ್ಥಳವಾಗಿದೆ.

ಹೊನ್ನಾಳಿಯಿಂದ ಮುಂದೆ ತುಂಗಭದ್ರೆಯೊಡನೆ ಸಾಗಿಬಂದರೆ ಸಿಗುವ ಕ್ಷೇತ್ರ ಹರಿಹರ ಚಿತ್ರದುರ್ಗ ಜಿಲ್ಲೆಯಲ್ಲಿ ಬೆಂಗಳೂರಿನಿಂದ ಅರಸೀಕೆರೆ ದಾವಣಗೆರೆ ಮೂಲಕ ಪೂನಾಕ್ಕೆ ಹೋಗುವ ರೈಲು ದಾರಿಯಲ್ಲಿ ತುಂಗಭದ್ರೆಯ ಬಲದಂಡೆಯ ಮೇಲಿರುವ ಊರು.ಇದು ಗುಹಾರಣ್ಯ ಕ್ಷೇತ್ರ ವೆಂದು ಪುರಾಣಗಳಲ್ಲಿ ವರ್ಣಿಸಲ್ಪಟ್ಟಿದೆ. ದೇವತೆಗಳಿಂದ ಪ್ರತ್ಯೇಕವಾಗಿ ತನಗೆ ಮರಣ ಬರಬಾರದೆಂಬ ವರ ಪಡೆದಿದ್ದ ಗುಹನೆಂಬ ರಾಕ್ಷಸನನ್ನು ವಿಷ್ಣುವೂ ಶಿವನೂ ಸೇರಿ ಹರಿಹರ ರೂಪ ತಾಳಿ ಅವನನ್ನು ಕೊಂದು ಆ ರಾಕ್ಷಸನ ಕೋರಿಕೆ ಯಂತೆ ಇಲ್ಲಿ ನೆಲಸಿದರೆಂದು ಐತಿಹ್ಯ. ಈ ದೇವಾಲಯವನ್ನು ಹೊಯ್ಸಳರಾಜ ಇಮ್ಮಡಿ ನರಸಿಂಹನ ಮಂತ್ರಿ ಪೋಲಾಳ್ವನು ಕ್ರಿ.ಶ. 1223 ರಲ್ಲಿ ಕಟ್ಟಿಸಿದನು. ನಕ್ಷತ್ರಾ ಕಾರದ ಜಗಲಿಯ ಮೇಲೆ ಕಟ್ಟಲ್ಪಟ್ಟು ಉತ್ತಮ ಶಿಲ್ಪಕಲೆಯಿಂದ ಕೂಡಿರುವ ಹೊಯ್ಸಳ ವಾಸ್ತು ಶಿಲ್ಪದ ದೇವಾಲಯ. ದೇವಸ್ಥಾನದ ಸುತ್ತ ಮುತ್ತಲೂ ಹಲವಾರು ಶಿಲಾಲೇಖಗಳಿವೆ. ಗರ್ಭಗುಡಿಯಲ್ಲಿ ಕೂರ್ಮ ಪೀಠದ ಮೇಲೆ ಆರಡಿ ಎತ್ತರಕ್ಕೆ ನಿಂತಿರುವ ಈ ಭವ್ಯ ಹರಿಹರ ಮೂರ್ತಿಯ ಎಡಭಾಗವು ವಿಷ್ಣು ರೂಪ ಬಲ ಭಾಗವು ಶಿವರೂಪ. ಎಡಗಡೆಯ ಮೇಲಿನ ಕೈಯಲ್ಲಿ ಚಕ್ರ, ಕೆಳಗೆ ಅಭಯಹಸ್ತ, ಬಲದ ಕೈಗಳು ತ್ರಿಶೂಲ ಧರಿಸಿವೆ. ಕೊರಳಲ್ಲಿ ವೈಜಯಂತಿ ಮಾಲೆಯೂ ಇದೆ.ರುಂಡ ಮಾಲೆಯೂ ಇದೆ. ಎಡಗಡೆಯ ತಲೆಯ ಮೇಲ್ಭಾಗದಲ್ಲಿ ಕಿರೀಟ, ಬಲಗಡೆ ತಲೆಯ ಮೇಲೆ ಚಂದ್ರ, ಗಂಗೆ, ಜಟೆ ಇವೆ. ದೇವರ ಎಡ ಭಾಗ ದಲ್ಲಿ ಲಕ್ಷ್ಮಿ,ಋಷ್ಯ ಶೃಂಗ ಮುನಿ,ಬಲಪಕ್ಕದಲ್ಲಿ ಗೌರಿ, ಗಣೇಶ ಗರ್ಭಗುಡಿಯ ಎದುರಿಗೆ ನಂದಿ ಮತ್ತು ಗರುಡರ ವಿಗ್ರಹಗಳಿವೆ.

ಇಲ್ಲಿ ಮಾಘಮಾಸದ ಹುಣ್ಣಿಮೆಯ ದಿನ ರಥೋತ್ಸವ ನಡೆಯುತ್ತದೆ. ದೇವಸ್ಥಾನದ ಹಿಂದೆ ಹರಿಯುವ ತುಂಗಭದ್ರಾ ನದಿಯಲ್ಲಿ ಬ್ರಹ್ಮತೀರ್ಥ, ನೃಸಿಂಹತೀರ್ಥ, ರುದ್ರಪಾದ ತೀರ್ಥ ಮೊದಲಾದ ತೀರ್ಥಗಳಲ್ಲಿ ಈಕ್ಷೇತ್ರದಲ್ಲಿ ಇನ್ನೂ ಹಲವಾರು ಸ್ನಾನ ಘಟ್ಟಗಳಿವೆ.ಹಲವಾರು ಹರಿದಾಸರು ಈ ಕ್ಷೇತ್ರ ಮಹಿಮೆಯನ್ನು ವರ್ಣಿಸಿದ್ದಾರೆ.

ತುಂಗಭದ್ರೆಯ ಹರವಿನ ಉದ್ದಕ್ಕೂ ಅನೇಕ ಪುಣ್ಯ ಕ್ಷೇತ್ರಗಳಿವೆ.ಪ್ರಸಿದ್ಧವಾದ, ಪ್ರಾಚೀನವಾದ, ದೇಗುಲ ಗಳಿವೆ. ಧಾರವಾಡ ಜಿಲ್ಲೆಯ ಮುಂಡರಗಿ ತಾಲ್ಲೂಕಿನಲ್ಲಿ ಮುಂಡರಗಿಯಿಂದ 20 ಮೈಲಿ ದೂರದಲ್ಲಿ ಬಿದಿರಹಳ್ಳಿ ಎಂಬ ಪುಣ್ಯ ಕ್ಷೇತ್ರವಿದೆ. ಬಿದಿರಹಳ್ಳಿಯ ಅಶ್ವತ್ಥನಾರಾಯಣ ದೇವಸ್ಥಾನ ಬಹು ಪ್ರಸಿದ್ಧವಾದುದು.ಪ್ರಾಚೀನವಾದ ವೇಣುಗೋಪಾಲ ದೇವಸ್ಥಾನ ಸೋಮೇಶ್ವರ ದೇವಾಲಯ. ಯಾದವಾರ್ಯರ ಕಟ್ಟೆ, ಪ್ರಸಿದ್ಧ ಟಿಪ್ಪಣಿಕಾರರಾದ ಶ್ರೀನಿವಾಸ ತೀರ್ಥರ ಬೃಂದಾವನಗಳಿವೆ. ಇದೊಂದು ದರ್ಶನೀಯ ಯಾತ್ರಾಸ್ಥಳ.

ಮುಂದೆ ಹರಿಯುತ್ತಾ ತುಂಗಭದ್ರೆ ಪಂಪಾಕ್ಷೇತ್ರ ಎಂದು ಪ್ರಸಿದ್ಧವಾದ ಹಂಪೆಗೆ ಬರುತ್ತಾಳೆ. ಪುರಾಣ ಪ್ರಸಿದ್ಧವೂ ಇತಿಹಾಸ ಪ್ರಸಿದ್ಧವೂ ಆದ ಹಂಪೆ ಕರ್ಣಾಟಕದ ಭವ್ಯ ಸಂಸ್ಕೃತಿಯ ವಿಜಯ ವೈಜಯಂತಿ. ನಿಸರ್ಗ ಸಹಜ ಸೌಂದರ್ಯವೂ ಮೇಳವಿಸಿ ಸೃಷ್ಟಿಗೊಂಡಿರುವ ದೈವಿಕ ತಾಣ. ಬಳ್ಳಾರಿ ಜಿಲ್ಲೆಯಲ್ಲಿ ಹೊಸ ಪೇಟೆಯಿಂದ 13 ಕಿ.ಮೀ. ದೂರದಲ್ಲಿದೆ.ವಾಲ್ಮೀಕಿ ರಾಮಾಯಣದ ಅರಣ್ಯಕಾಂಡ ಮತ್ತು ಕಿಷ್ಕಿಂಧಾ ಕಾಂಡಗಳಲ್ಲಿ ತುಂಗಭದ್ರೆಯ ಪುಣ್ಯ ಜಲ ಇಂತು ವರ್ಣಿತಗೊಂಡಿದೆ.

ಪದ್ಮಗಂಧಿ ಶಿವಂ ವಾರಿಸ್ವಾದು ಶೀತಮನಾಮಯಂ
ಉದ್ಧೃತ್ಯ ಸಂತತಾಕ್ಲಿಷ್ಟಂ ಕೌಪ್ಯಸ್ಫಾಟಿಕ ಸನ್ನಿಭಂ॥

ಪದ್ಮಪುರಾಣದಲ್ಲಿಯೂ, ಮಹಾಭಾರತದಲ್ಲಿಯೂ ಕಾಶಿ, ಬದರಿ, ಪ್ರಯಾಗ, ಹರಿದ್ವಾರಗಳ ಸಾಲಿನಲ್ಲಿ ಪಂಪಾ ಕ್ಷೇತ್ರದ ಮಹಿಮೆಯನ್ನು ಸ್ತುತಿಸಲಾಗಿದೆ. ಶಿವ ಇಲ್ಲಿ ಪಂಪಾವತಿ ಪಂಪಾ ವಿರೂಪಾಕ್ಷನೆನಿಸಿದ್ದಾನೆ.ಇಲ್ಲಿಯ ವಿರೂಪಾಕ್ಷ ದೇವಾಲಯ 7 ನೇ ಶತಮಾನಕ್ಕೆ ಸೇರಿದ್ದು ಪ್ರಾಚೀನವೂ ಭವ್ಯವೂ ಆಗಿದೆ. ರಾಮಾಯಣದಲ್ಲಿ ಕಿಷ್ಕಿಂಧೆ, ಪಂಪಾ ಕ್ಷೇತ್ರ ಎಂದು ಖ್ಯಾತವಾದ ಈ ಸ್ಥಳ ಭಕ್ತಾಗ್ರಣಿ ಹನುಮಂತನ ಜನ್ಮ ಭೂಮಿ. ರಾಮಾಂಜನೇಯರ, ಮೊದಲು ಭೇಟಿಯಾದುದು ಇಲ್ಲೇ ಋಷ್ಯಮೂಕ ಪರ್ವತ, ಪಂಪಾಸರೋವರ, ಸೀತಾ ಕುಂಡ, ಮಾಲ್ಯವಂತ, ಪ್ರಸ್ರವಣಗಿರಿ ಎಲ್ಲಾ ಇಲ್ಲಿವೆ. ಇಲ್ಲಿ ಚೆಲ್ಲಾಡಿರುವ ದೊಡ್ಡ ಬಂಡೆಗಳು ಹನುಮಂತನು ಸೇತು ಬಂಧಕ್ಕಾಗಿ ಒಗ್ಗೂಡಿಸಿದ ಕಲ್ಲುಗಳಲ್ಲಿ ಉಳಿದು ಹೋದವುಗಳೆಂದೂ ಹೇಳುತ್ತಾರೆ.ರಾಮಾಯಣದ ಕಿಷ್ಕಿಂಧೆಯೇ ಇಂದಿನ ಆನೆಗೊಂದಿ ಪವಿತ್ರ ಯಾತ್ರಾಸ್ಥಳವಾದ ನವಬೃಂದಾ ವನವೆಂಬ ತುಂಗಭದ್ರೆಯ ನಡುಗಡ್ಡೆಯ ಪ್ರದೇಶವಿರುವುದು ಇಲ್ಲೇ. ಹಂಪೆಯಲ್ಲಿ ಸಂದರ್ಶಿಸಲೇ ಬೇಕಾದ ಮತ್ತೊಂದು ಸ್ಥಳವೆಂದರೆ ಯಂತ್ರೋದ್ಧಾರಕ ಪ್ರಾಣದೇವರು. ಹರಿವ ತುಂಗ ಭದ್ರೆ ಚಕ್ರಾಕಾರವಾಗಿ ತಿರುಗುತ್ತಾ ನಿರ್ಮಿಸಿರುವ ಚಕ್ರತೀರ್ಥದ ದಡದ ದಕ್ಷಿಣ ದಿಕ್ಕಿನಲ್ಲಿರುವ ಬೆಟ್ಟದ ಮೇಲೆ ಯಂತ್ರೋದ್ಧಾರಕ ಪ್ರಾಣ ದೇವರು ನೆಲಸಿದ್ದಾರೆ. ಮಂತ್ರಸಿದ್ಧಿಯ ಕ್ಷೇತ್ರವೆಂದೂ ಬಹು ಜಾಗೃತ ಸ್ಥಳವೆಂದೂ ಪ್ರಸಿದ್ಧಿ. ವ್ಯಾಸರಾಯರು ಪ್ರತಿಷ್ಠಾಪಿಸಿದ 732 ಹನುಮನ ವಿಗ್ರಹಗಳಲ್ಲಿ ಮೊದಲನೆಯದೇ ಇದು. ತಿರುಪತಿ, ಉಡುಪಿ ಮಂತ್ರಾಲಯಗಳಂತೆ ಹಂಪೆಯೂ, ಶ್ರದ್ಧೆ ಭಕ್ತಿಗಾಸರೆಯಾದ ಯಾತ್ರಾಸ್ಥಳವಾಗಿದೆ.

ನಂತರ ತುಂಗಭದ್ರೆ ಮುಂದೆ ಹರಿಯುತ್ತಾ ಆಂಧ್ರ ಪ್ರದೇಶವನ್ನು ಪ್ರವೇಶಿಸುತ್ತಾಳೆ. ಮೊದಲ ಪ್ರಮುಖ ಯಾತ್ರಾ ಸ್ಥಳ ಕಲಿಯುಗದ ಕಾಮಧೇನು ಕಲ್ಪವೃಕ್ಷ ಎಂದು ಪ್ರಖ್ಯಾತರಾಗಿರುವ ಶ್ರೀ ರಾಘವೇಂದ್ರಗುರು ಸಾರ್ವಭೌಮರ ದಿವ್ಯ ಬೃಂದಾವನ ಸನ್ನಿಧಾನವಿರುವ ಮಂತ್ರಾಲಯ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಆದೋನಿ ತಾಲ್ಲೂಕಿನಲ್ಲಿ ಆದೋನಿಯಿಂದ 30 ಕಿ.ಮೀ. ದೂರದಲ್ಲಿ ಕರ್ಣಾಟಕ ಮತ್ತು ಆಂಧ್ರ ಪ್ರದೇಶಗಳ ಗಡಿಭಾಗದಲ್ಲಿದೆ. ಮುಂಬೈ, ಬೆಂಗಳೂರು ರೈಲು ಮಾರ್ಗದ ಮಂತ್ರಾಲಯಂ ರೋಡ್ ರೈಲ್ವೆ ನಿಲ್ದಾಣದಿಂದ 14 ಕಿ.ಮೀ. ದೂರದಲ್ಲಿದೆ.ಇಲ್ಲಿ ತುಂಗಭದ್ರೆ ವಿಶಾಲವಾಗಿ ಹರಿಯುತ್ತಾಳೆ. ಮಂತ್ರಾಲಯ 4 ಯುಗಗಳಲ್ಲಿಯೂ ಪ್ರಖ್ಯಾತವಾದ ಪಾವನಕ್ಷೇತ್ರ, ಉನ್ನತವಾದ ಮಹಾದ್ವಾರ,ವಿಶಾಲವಾದ ಪ್ರಾಂಗಣ ಭವ್ಯವಾದ ಕಟ್ಟಡದ ನಡುವೆ ವಿರಾಜಿಸುತ್ತಿರುವ ಗುರುರಾಜರ ಬೃಂದಾವನವು ದಿವ್ಯಭವ್ಯವಾಗಿದೆ. ಮಾರುತಿಯ ಮೂರುತಿ ಎದುರಿಗೆ ಕಂಗೊಳಿಸುತ್ತದೆ. ಮಂತ್ರಾಲಯ ಊರಿನಲ್ಲಿ ಗುರುರಾಜರೇ ಸ್ಥಾಪಿಸಿದ ಅವರ ಕುಲದೈವ ವೆಂಕಟೇಶನ ಮಂದಿರವಿದೆ. ಮಂಚಾಲಮ್ಮ ಮಂತ್ರಾಲಯದ ಅಧಿದೇವತೆಯಾಗಿ ಬೃಂದಾವನ ಮಂದಿರದ ಪಕ್ಕದಲ್ಲೇ ನೆಲಸಿ ಮಂತ್ರಾಲಯವನ್ನು ರಕ್ಷಿಸುತ್ತಿದ್ದಾಳೆ. ಮಂತ್ರಾಲಯಕ್ಕೆ ಬಂದವರು ಮೊದಲು ಮಂಚಾಲಮ್ಮನ ದರ್ಶನ ಮಾಡುವ ಪದ್ಧತಿಯಿದೆ. ತುಂಗಭದ್ರೆಯಲ್ಲಿ ಮಿಂದು ಗುರುಗಳ ದರ್ಶನ ಮಾಡಿ ಸೇವೆಗೈದು ಜನ ಪುನೀತರಾಗುತ್ತಾರೆ. ಪುಷ್ಕರ ಪರ್ವ ಕಾಲದಲ್ಲಿ ಇಲ್ಲಿ ಸಾವಿರಾರು ಜನ ಸೇರಲಿದ್ದಾರೆ.

ಮುಂದೆ ಹರಿದ ತುಂಗಭದ್ರಾ ತೀರದಲ್ಲಿರುವ ಮತ್ತೊಂದು ಪವಿತ್ರ ಯಾತ್ರಾಸ್ಥಳ ಅಲಂಪುರ. ಈ ಊರು ಮೆಹಬೂಬ್‌ನಗರದಿಂದ 90 ಕಿ.ಮೀ. ಮತ್ತು ಕರ್ನೂಲ್‌ನಿಂದ 27 ಕಿ.ಮೀ. ದೂರದಲ್ಲಿದೆ.ಬಹು ಪ್ರಾಚೀನ ಕಾಲದಿಂದಲೂ ಅಲಂಪುರ ಪ್ರಖ್ಯಾತವಾದುದು.ಸ್ಕಂಧಪುರಾಣದಲ್ಲಿ ಈ ಊರಿನ ಸ್ಥಳ ಪುರಾಣ ವಿಶಾದ

ವಾಗಿ ನೀಡಲ್ಪಟ್ಟಿದೆ. ಈ ಕ್ಷೇತ್ರದ ಮಹಿಮೆ ಪ್ರಸಿದ್ಧ ತೆಲುಗು ಕವಿ ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯ ಚರಿತ್ರೆಯಲ್ಲಿ ವರ್ಣಿತವಾಗಿದೆ. ತುಂಗಭದ್ರೆ ಇಲ್ಲಿ ವಿಶಾಲವಾಗಿ ಹರಿಯುತ್ತಿದ್ದ, ಅವಳ ದಡದಲ್ಲಿ ಅನೇಕ ಪವಿತ್ರ ತೀರ್ಥಗಳಿದ್ದು ಅವುಗಳಲ್ಲಿ ಸ್ನಾನ,ಪೂಜೆಗಳು ಬಹು ಪುಣ್ಯಕರವೆಂದು ಹೇಳಲಾಗಿದೆ. ಅದರಿಂದಾಗಿ ಈ ಕ್ಷೇತ್ರವನ್ನು ದಕ್ಷಿಣಕಾಶಿ ಎಂದೂ, ನವ ಬ್ರಹ್ಮೇಶ್ವರ ತೀರ್ಥವೆಂದೂ ಕರೆಯುತ್ತಾರೆ. ಅಲಂಪುರದಲ್ಲಿ ಅನೇಕ ಪ್ರಸಿದ್ಧ ದೇಗುಲಗಳಿವೆ. ತುಂಗ ಭದ್ರೆಯ ಎಡ ದಂಡೆ ಯಲ್ಲಿ ನವಬ್ರಹ್ಮರ ದೇಗುಲಗಳು ಎಂದು ಹೆಸರಾದ ದೇವಾಲ ಯದ ಸಮುಚ್ಛಯವಿದ್ದು ಇಲ್ಲಿ 9 ದೇಗುಲಗಳಿವೆ.ಈ 9 ದೇಗುಲಗಳಿಗೆ ಬಾಲಬ್ರಹ್ಮ, ಕುಮಾರ ಬ್ರಹ್ಮ, ಅರ್ಕಬ್ರಹ್ಮ, ವೀರಬ್ರಹ್ಮ, ವಿಶ್ವಬ್ರಹ್ಮ, ತಾರಕಬ್ರಹ್ಮ, ಗರುಡ ಬ್ರಹ್ಮ, ಸ್ವರ್ಗಬ್ರಹ್ಮ ಮತ್ತು ಪದ್ಮ ಬ್ರಹ್ಮ ಎಂಬ ಹೆಸರುಗಳಿವೆ. ಇಂತಹ ದೇಗುಲ ಸಮುಚ್ಛಯ ಇಡೀ ಭಾರತ ದೇಶದಲ್ಲೇ ಮತ್ತೆಲ್ಲೂ ಇಲ್ಲ. ಅಲಂಪುರ ಕ್ಷೇತ್ರದ ಪ್ರಮುಖ ದೇವತೆ ಬಾಲ ಬ್ರಹ್ಮೇಶ್ವರ.ಈ ಸ್ಥಳದಲ್ಲಿ ಬ್ರಹ್ಮ ಸಹಸ್ರಾರು ವರ್ಷಗಳು ತಪಸ್ಸು ಮಾಡಿದನೆಂದು ಶಿವನು ಪ್ರಸನ್ನನಾಗಿ ಅವನಿಗೆ ಸೃಷ್ಟಿ ಮಾಡುವ ಶಕ್ತಿಯನ್ನು ಕರುಣಿಸಿ ನೆಂದೂ ಪುರಾಣಕತೆಯಿದೆ. ಬ್ರಹ್ಮ ಈ ದೇವರನ್ನು ಪ್ರತಿಷ್ಠಾಪಿಸಿ ಪೂಜಿಸಿದನಂತೆ. ಅದಕ್ಕೆಂದೇ ದೇವರಿಗೆ ಬಾಲ ಬ್ರಹ್ಮೇಶ್ವರನೆಂಬ ಹಸರು ಬಂದಿದೆ. ದೇವಿಗೆ ಯೋಗಿನಿ ಅಥವಾ ಜೋಗುಲಾಂಬಾ ಎಂಬ ಹೆಸರಿದ್ದು ಅವಳೂ ಬಹು ಶಕ್ತಿಶಾಲಿ ದೇವತೆಯೆಂದೂ ವರ ಪ್ರಸಾದಿಯೆಂದೂ ಪ್ರಖ್ಯಾತಳಾಗಿದ್ದಾಳೆ.ಭಾರತ ದೇಶದ ಅಷ್ಟಾದಶ ಶಕ್ತಿ ಪೀಠಗಳಲ್ಲಿ ಜೋಗುಲಾಂಬಾ ದೇಗುಲವೂ ಒಂದಾಗಿದೆ. ಅಲಂಪುರದಲ್ಲಿ ಅನೇಕ ಸ್ನಾನ ಘಟ್ಟಗಳಿದ್ದು, ಸ್ನಾನ ಪೂಜಾಕಾರ್ಯಗಳಿಗೆ ಪ್ರಶಸ್ತವಾಗಿದೆ.ಪವಿತ್ರವಾದ ತುಂಗ ಭದ್ರಾ ಪುಷ್ಕರ ಪರ್ವ ಕಾಲದಲ್ಲಿ ಅಲಂಪುರ ಸಂದರ್ಶಿಸಲೇಬೇಕಾದ ಪವಿತ್ರ ಯಾತ್ರಸ್ಥಳವಾಗಿದೆ.

ತುಂಗಭದ್ರೆ ಕೃಷ್ಣಯೊಡನೆ ಸಂಗಮಿಸುವ ಪವಿತ್ರ ಸ್ಥಳವೇ ಸಂಗಮೇಶ್ವರ ಕ್ಷೇತ್ರ ಇದು ತುಂಗ, ಭದ್ರೆ, ಕೃಷ್ಣವೇಣಿ, ಮಲಾಪಹಾರಿ, ಭೀಮ , ಭವನಾಶಿನಿಗಳೆಂಬ ಏಳು ನದಿಗಳು ಸಂಗಮಿಸುವ ಪೂರ್ವಸ್ಥಳವಾಗಿದ್ದು ಸಪ್ತ ಸಂಗಮ ಕ್ಷೇತ್ರ ವೆಂದೇ ಪ್ರಸಿದ್ಧವಾಗಿದೆ. ಕರ್ನೂಲ್‌ನಿಂದ 45 ಕಿ.ಮೀ. ದೂರದಲ್ಲಿರುವ ಈ ಊರಿಗೆ ಸ್ವಲ್ಪದೂರ ಬಸ್‌ನಲ್ಲಿ ಪ್ರಯಾಣಿಸಿ ನಂತರ ದೋಣಿಯಲ್ಲಿ ಹೋಗಬೇಕು. ಸ್ಕಂಧ ಪುರಾಣ ದಲ್ಲಿ ಈ ಸ್ಥಳದ ಮಹಾತ್ಮೆ ವರ್ಣಿತಗೊಂಡಿದೆ. ತುಂಗಭದ್ರೆ ಕೃಷ್ಣೆಯರ ಸಂಗಮ ಸ್ಥಳ ಶ್ರೀಶೈಲ ನಿರ್ಮಾಣ ಕಾಲದಲ್ಲಿ ಮುಳುಗಡೆಯಾಗಿದ್ದು. ಇದು ಪ್ರತ್ಯೇಕವಾಗಿ ಕಂಡು ಬರುವು ದಿಲ್ಲ.ಈ ಸ್ಥಳದಲ್ಲಿ ನೂರಾರು ವರ್ಷಗಳ ಪ್ರಾಚೀನ ಇತಿಹಾಸವಿರುವ ಸಂಗಮೇಶ್ವರ ದೇವಾಲಯವಿದೆ. ಅದು ಸಹ ಅಣೆಕಟ್ಟಿನ ನೀರಿನಲ್ಲಿ ಹೆಚ್ಚುಕಾಲ ಮುಳುಗಿರುತ್ತದೆ. ವರ್ಷದಲ್ಲಿ ನಾಲ್ಕು ತಿಂಗಳಕಾಲ - ಮಾರ್ಚ್, ಏಪ್ರಿಲ್, ಮೇ, ಜೂನ್, ತಿಂಗಳುಗಳಲ್ಲಿ ಈ ದೇವಾಲಯವನ್ನು ಸಂದರ್ಶಿ ಸಬಹುದಾಗಿದೆ. ಈ ದೇವಾಲಯಗಳು ಪುರಾತನ ಆಲಯ ಗಳಿಂದ ಕೂಡಿದೆ. ಇಲ್ಲಿರುವ ಶಿವಲಿಂಗ ಸಂಗಮೇಶ್ವರ-ಬಹು ವಿಶೇಷವಾದುದು ಮತ್ತು ಸುಂದರವಾದುದು. ಪಾಂಡವರು ವನವಾಸ ಮಾಡುತ್ತಿದ್ದಾಗ ಶ್ರೀ ಕೃಷ್ಣನ ಸೂಚನೆಯ ಮೇರೆಗೆ ಧರ್ಮರಾಯ ಈ ಲಿಂಗವನ್ನು ಪ್ರತಿಷ್ಠಾಪಿಸಿದನಂತೆ. ವಿಶ್ವಾ ಮಿತ್ರ, ಅಗಸ್ತ್ಯರ ಋಷಿಗಳು ಇಲ್ಲಿ ತಪಗೈದಿದ್ದಾರೆ. ಇಲ್ಲಿ ವಿಶ್ವಾಮಿತ್ರ ತಪಸ್ಸು ಮಾಡಿದ ಗುಹೆಯೂ ಇದೆ. ಪುಷ್ಕರ ಪ್ರಾರಂಭವಾದ ಕಾಲದಲ್ಲಿ ಇಲ್ಲಿಗೆ ಹೋಗಲಾಗದಿದ್ದರೂ ನಂತರದ ದಿನಗಳಲ್ಲಿ ಸಂದರ್ಶಿಸಿ, ಶಿವದರ್ಶನ ಮಾಡಿ ಪವಿತ್ರ ಸ್ನಾನ ಮಾಡ ಬಹು ದಾಗಿದೆ.

ಆಂಧ್ರಪ್ರದೇಶ ಮತು ತೆಲಂಗಾಣಗಳಲ್ಲಿ,ತುಂಗಭದ್ರೆಯ ದಡಗಳಲ್ಲಿ ಕೌತಾಳ, ನಾಗಲ ದಿನ್ನಿ, ಯಾಗಂಟಿ ಆತ್ಮಕೂರು, ವೇಣೀ ಸೋಮಪುರ ಬೀಚಪಲ್ಲಿ, ರಜೋಲಿ, ಮುಂತಾದ ಇನ್ನೂ ಅನೇಕ ಪವಿತ್ರ ಕ್ಷೇತ್ರಗಳಿದ್ದು, ಅಲ್ಲಿಯೂ ಅನೇಕ ಪ್ರಾಚೀನ ದೇವಾಲಯಗಳಿದ್ದು, ಭಕ್ತರು ಅವರ ಅನುಕೂಲಕ್ಕೆ ತಕ್ಕಂತೆ ಸಂದರ್ಶಿಸಬಹುದಾಗಿದೆ ಪವಿತ್ರಸ್ನಾನ ಪೂಜಾದಿಗಳು ಮಾಡ ಬಹುದಾಗಿದೆ.

ತುಂಗಭದ್ರೆಯಲ್ಲಿ ಸ್ನಾನಮಾಡುವಾಗ ವರಾಹ ದೇವರನ್ನು ಸ್ಮರಿಸಬೇಕು ಎಂದು ಪುರಾಣಗಳಲ್ಲಿ ಹೇಳಿದ್ದಾರೆ. ಸ್ನಾನಾ ನಂತರ

ಬೃಹಸ್ಪತಿ ಸುರಾಧ್ಯಕ್ಷ ಸರ್ವದೇವ ನಮಸ್ಕೃತ
ಗೃಹಾಣರ್ಘ್ಯಂ ಮಾಯಾದತ್ತಂ ಮಕರಸ್ವೋಭಾರ್ಯಾಯಾ ಸಹ ॥

ಎಂದು ಅರ್ಘ್ಯ ಪ್ರದಾನ ಮಾಡಬೇಕು ಎಂದು ಹೇಳ ಲಾಗಿದೆ. ಸಂಕಲ್ಪ ಪೂರ್ವಕಾಗಿ ನದೀಸ್ನಾನ ಮಾಡಿದ ನಂತರ, ಅರಶಿನ, ಕುಂಕುಮ, ಹೂ ಅಕ್ಷತೆ, ಗೆಜ್ಜೆವಸ್ತ್ರ ಮುಂತಾದ ಮಂಗಳ ದ್ರವ್ಯಗಳಿಂದ ನದಿಯನ್ನು ಪೂಜಿಸುವ ಸಂಪ್ರದಾಯ ವಿದೆ. ಕೆಲವರು ದೀಪಗಳನ್ನು ಹಚ್ಚಿ ನದಿಯಲ್ಲಿ ತೇಲಿ ಬಿಡುತ್ತಾರೆ. ಮೊರದ ಬಾಗಿನಗಳನ್ನು ಅರ್ಪಿಸುವುದೂ ಉಂಟು. ಅನೇಕ ವಿಧವಾದ ಇತರ ದಾನಗಳನ್ನೂ ಮಾಡುತ್ತಾರೆ. ಈ ಸಮಯ ದಲ್ಲಿ ತುಂಗಭದ್ರಾ ತೀರದಲ್ಲಿ ನಡೆಸುವ ಪಿತೃಕಾರ್ಯಗಳಿಂದ ಏಳು ತಲೆಮಾರುಗಳ ಪಿತೃಪಂಕ್ತಿ ಸದ್ಗತಿ ಪಡೆಯುವರೆಂದು ಹೇಳಲಾಗಿದೆ. ಹೀಗೆ ಜನರು ಶ್ರದ್ಧಾ ಭಕ್ತಿಗಳಿಂದ ನಾನಾ ವಿಧವಾಗಿ ಪೂಜಿಸುತ್ತಾರೆ.ಈ ತುಂಗಭದ್ರಾ ಪುಷ್ಕರ ಪರ್ವ ಕಾಲದಲ್ಲಿ ತುಂಗಭದ್ರೆಯ ದಡದಲ್ಲಿರುವ ಪವಿತ್ರಯಾತ್ರಾ ಸ್ಥಳ ಗಳು ಭಾವುಕ ಭಕ್ತರನ್ನು ತಮ್ಮೆಡೆಗೆ ಕೈಬೀಸಿ ಕರೆಯುತ್ತಿವೆ.

# ಭಕ್ತ ಶಿರೋಮಣಿ ಶ್ರೀ ಕನಕದಾಸರ ವೆಂಕಟರಮಣ ಕುರಿತ ಕೀರ್ತನೆಗಳು

– ಡಾ।। ವಿಠಲರಾವ್ ಟಿ. ಗಾಯಕ್ವಾಡ್

ಭಕ್ತ ಶ್ರೇಷ್ಠರಾದ ಕನಕದಾಸರು ಬೀರೇಗೌಡ - ಬಚ್ಚಮ್ಮ (ಭಕ್ಯಮ್ಮ) ದಂಪತಿಗಳ ವರಪುತ್ರರು. ಈ ದಂಪತಿಗಳಿಗೆ ಇಳಿವಯಸ್ಸಿನಲ್ಲಿ ತಿರುಪತಿಯ ಶ್ರೀವೆಂಕಟೇಶ್ವರ ಸ್ವಾಮಿಯ ವರಪ್ರಸಾದದಿಂದ ಕ್ರಿ.ಶ. ಸುಮಾರು ೧೪೮೮ರಲ್ಲಿ ಜನಿಸಿದ ಮಗುವೇ ತಿಮ್ಮಪ್ಪನಾಯಕ ಅರ್ಥಾತ್ ಶ್ರೀಕನಕದಾಸರು. ಇವರ ಹುಟ್ಟೂರು ಇಂದಿನ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ ಬಂಕಾಪುರದ ಸಮೀಪದಲ್ಲಿರುವ ಬಾಡಾ ಎಂಬ ಗ್ರಾಮ, ಜಾತಿಯಲ್ಲಿ ಅಂಡೆ ಕುರುಬ ಅಥವಾ ಅಂಡೆವಜೀರ. ವೆಂಕಟರಮಣನ ಕರುಣೆಯ ಕೂಸಾದ ಕಾರಣ ಇವರಿಗೆ ತಂದೆ ತಾಯಿಗಳು ಮೂಲದಲ್ಲಿ ಇಟ್ಟಂತಹ ಹೆಸರು ತಿಮ್ಮಪ್ಪ ಎಂಬುದಾಗಿ ತಿರುಪತಿಯ ಶ್ರೀ ವೆಂಕಟೇಶ ದೇವರನ್ನು ಕರ್ನಾಟಕದ ಹಲವು ಸ್ಥಳಗಳಲ್ಲಿ ತಿರುಪತಿ ತಿಮ್ಮಪ್ಪ ಎಂಬುದಾಗಿ ಪ್ರಾಚೀನ ಕಾಲದಿಂದಲೂ ಭಕ್ತಿಭಾವದಿಂದ ಉದ್ಗರಿಸುತ್ತಲೇ ಬಂದಿದ್ದಾರೆ. ತಿಮ್ಮಪ್ಪನವರ ತಂದೆಯಾದ ಬೀರಪ್ಪನವರು ವಿಜಯನಗರ ಸಾಮ್ರಾಜ್ಯದಲ್ಲಿ ಒಂದು ಮುಖ್ಯ ಪಟ್ಟಣವಾಗಿದ್ದ ಬಾಡ ಗ್ರಾಮ ಹಾಗೂ ಇತರೆ ಕೆಲವು ಸ್ಥಳಗಳ ಆಡಳಿತವನ್ನು ನೋಡಿಕೊಳ್ಳುವ ಮಾಂಡಲಿಕರಾಗಿದ್ದರು. ಸರ್ವಧರ್ಮ ಸಹಿಷ್ಣುವೂ ಪ್ರೀತ್ಯಾದರ ಮೂರ್ತಿಯೂ ಆಗಿದ್ದಂತಹ ಬೀರಪ್ಪನವರು ಆಡಳಿತದಲ್ಲಿ ಮುತ್ಸದ್ದಿಯಾಗಿದ್ದರು. ಎಲ್ಲರ ಪ್ರೀತಿ ಮನ್ನಣೆಗಳಿಗೆ ಪಾತ್ರರಾಗಿದ್ದರು ಎಂಬುದು ಮುಖ್ಯ ಸಂಗತಿ. ಇಂತಹ ತಂದೆ ತಾಯಿಯರ ಪ್ರೀತಿಯ ಮಗುವಾಗಿದ್ದರು. ತಿಮ್ಮಪ್ಪ ನಾಯಕರು. ಚಿಕ್ಕಂದಿನಿಂದಲೇ ಬಹಳ ಚುರುಕು. ಹಾಗಾಗಿ ಬಂಕಾಪುರದ ಶ್ರೀನಿವಾಸಾಚಾರ್ಯ ಎಂಬುವವರ ಶಿಷ್ಯನಾಗಿ ತರ್ಕ, ವ್ಯಾಕರಣ, ಮೀಮಾಂಸೆ, ಸಾಹಿತ್ಯಗಳಂತಹ ಗ್ರಂಥಸ್ಥ ವಿದ್ಯೆಗಳಲ್ಲಿ ಬಹಳ ಬೇಗನೇ ಪಾರಂಗತನಾದ. ಇನ್ನು ತಂದೆಯು ಮಗನಿಗೆ ಸ್ವತಃ ತಾವೇ ಎಲ್ಲಾ ಕ್ಷತ್ರಿಯೋಚಿತವಾದ ವಿದ್ಯೆಗಳನ್ನು ಕಲಿಸಿ ಕೊಡುತ್ತಿದ್ದರು.

ಇನ್ನು ತಿಮ್ಮಪ್ಪನವರೋ ಅಷ್ಟೇ ಚುರುಕು ಮತ್ತು ಕುಶಾಗ್ರಮತಿಯವರಾಗಿದ್ದರು. ಬಹಳ ಬೇಗನೆ ಕತ್ತಿವರಸೆ ಬಿಲ್ಲುವಿದ್ಯೆ ಮುಂತಾದ ಕ್ಷಾತ್ರ ವಿದ್ಯೆಗಳನ್ನು ಕಲಿತು ತಂದೆಯನ್ನು ಮೀರಿಸುವ ಮಹಾನ್ ರಾಜಕೀಯ ವ್ಯಕ್ತಿತ್ವವನ್ನು ಬೆಳಸಿಕೊಂಡಿದ್ದರು. ಊರಿನ ತನ್ನೋರಗೆಯ ಹುಡುಗರನ್ನು ಸೇರಿಸಿಕೊಂಡು ಶೌರ್ಯ ಸಾಹಸಗಳನ್ನು ಪ್ರದರ್ಶಿಸುತ್ತಿದ್ದು ಒಂದೆಡೆ, ಮತ್ತೊಂದೆಡೆ ತಾನು ಕಲಿತ ವಿದ್ಯೆಯಿಂದ ಹಾಡು, ಬಯಲಾಟಗಳನ್ನು ರಚಿಸಿ, ಎಲ್ಲರೂ ಪಾಲ್ಗೊಳ್ಳುವಂತೆ ಮಾಡಿ ತನ್ನ ಮತ್ತು ತನ್ನ ತಾಯಿಯ ತವರೂರುಗಳನ್ನು ಸಾಂಸ್ಕೃತಿಕ ಕ್ಷೇತ್ರಗಳನ್ನಾಗಿ ಮಾಡುತ್ತಿದ್ದನು. ಅಲ್ಲದೆ, ತಮ್ಮ ತಾಯಿ ಬಚ್ಚಮ್ಮ ಅವರಿಂದ ಆಧ್ಯಾತ್ಮಿಕ ವಿದ್ಯೆಯನ್ನು ಅತ್ಯಂತ ಆಳವಾದ ದಾರ್ಶನಿಕ ಸ್ವರೂಪದಲ್ಲಿ ಬೆಳಸಿಕೊಂಡರು. ಇಂತಹ ತಂದೆ ತಾಯಿಗಳ ಪ್ರೀತಿ, ಆರೈಕೆಯಲ್ಲಿ ಬೆಳೆಯುತ್ತಿದ್ದಂತಹ ತಿಮ್ಮಪ್ಪನಾಯಕರು ಯೌವನಕ್ಕೆ ಕಾಲಿರಿಸುವ ಹೊತ್ತಿಗೆ ಸಕಲ ಶಾಸ್ತ್ರ ಮತ್ತು ಶಸ್ತ್ರವಿದ್ಯಾ ಪಾರಂಗತವಾಗಿ ತಂದೆಯವರ ಎಲ್ಲಾ ಕಾರ್ಯಗಳಲ್ಲಿಯೂ ನೆರವಾಗುತ್ತಿದ್ದರು. ಹೀಗಿರುವಾಗ ತಂದೆಯವರು ತಮ್ಮ ಆರೋಗ್ಯ ಕ್ಷೀಣಿಸುತ್ತಿರುವಾಗ ಪತ್ನಿ ಮತ್ತು ಮಗನನ್ನು ಕರೆದು ಜೀವನದ ಎಲ್ಲಾ ವಿಚಾರಗಳನ್ನು ತಿಳಿಸಿ, ಮಗನ ಹೆಗಲಿಗೆ ತನ್ನೆಲ್ಲ ಕಾರ್ಯಜವಾಬ್ದಾರಿಗಳನ್ನು ವಹಿಸಿಕೊಟ್ಟು ಕಾಲವಶರಾದರು. ಚಾಣಾಕ್ಷ ಮತ್ತು ಸ್ಫುರದ್ರೂಪಿ ತಿಮ್ಮಪ್ಪನಾಯಕರಿಗೆ ವಿಜಯನಗರದ ಅರಸರು ತಂದೆಯವರ ಎಲ್ಲಾ ಜವಾಬ್ದಾರಿಯನ್ನು ವಹಿಸಿದರು. ಶಿಷ್ಯಗುರುವನ್ನು ಮೀರಿಸಬೇಕು. ಮಗ ತಂದೆಯನ್ನು ಮೀರಿಸಬೇಕು ಆಗಲೇ ಇಬ್ಬರಿಗೂ ತೃಪ್ತಿ ಎಂಬುದು ನಾಣ್ಣುಡಿ. ಅದರಂತೆ ತಂದೆ ಗುರುವೂ ಆಗಿದ್ದ ಬೀರಪ್ಪನವರ ಎಲ್ಲಾ ಕೈಂಕರ್ಯಗಳನ್ನು ಅವರಿಗಿಂತಲೂ ಮಿಗಿಲಾಗಿ ಮುನ್ನಡೆಸಿ ಜನಪ್ರಿಯನಾಯಕ ಎನಿಸಿದರು.

ಭಕ್ತಿಯಲ್ಲಿ ಅಚಲ ನಿಷ್ಠ. ರಣರಂಗದಲ್ಲಿ ಶತ್ರು ಸಂಹಾರಕ, ಬೇಟೆ ಆಡುವುದರಲ್ಲಿ ಅಗ್ರಗಣ್ಯ ಹೀಗೆ ಎಲ್ಲದರಲ್ಲಿಯೂ

ತಿಮ್ಮಪ್ಪ ನಾಯಕರದು ಪ್ರಥಮಸ್ಥಾನ. ಹೀಗಾಗಿ ಅವರಿಗೆ ಅನೇಕ ಬಾರಿ ರಾಜರಿಂದ ಮಾನ - ಸನ್ಮಾನಗಳು ನಡೆಯುತ್ತಲೇ ಇದ್ದವು ಎನ್ನಲಾಗಿದೆ. ತನ್ನ ಬಾಹುಬಲ ಮತ್ತು ದೈವೀ ಬಲಗಳಿಂದ ತನ್ನ ಆಳ್ವಿಕೆಯ ಪ್ರದೇಶಗಳನ್ನು ಹೆಚ್ಚು ಸುಭಿಕ್ಷಗೊಳಿಸುವುದಕ್ಕೆ ಸದಾ ಕಾರ್ಯನಿರತರಾಗಿರುತ್ತಿದ್ದರು. ತನ್ನ ಪ್ರಜೆಗಳು,ರೈತರ ಅನುಕೂಲಕ್ಕಾಗಿ ಅತ್ಯಗತ್ಯವಾದ ನೀರಾವರಿ, ರಸ್ತೆ,ದೇವಾಲಯ ಜೀರ್ಣೋದ್ಧಾರವೇ ಮೊದಲಾದ ಕಾರ್ಯಗಳನ್ನು ಮುತುವರ್ಜಿಯಿಂದ ಮಾಡಿಸುತ್ತಿದ್ದನು. ಹಾಗಾಗಿ ಇವರ ಪಾಲಿಗೆ ದೇವರು ಸದಾ ಬೆಂಗಾವಲಾಗಿ ನಿಂತಿದ್ದ ಎಂಬುದು ಮರೆಯಲಾಗದಂತಹ ಅಂಶ. ದೇವರ ಅನುಗ್ರಹದ ಈ ಮಹಾನ್ ವರಪುತ್ರನಿಗೆ ದೈವಭಕ್ತಿಯೂ ಅಪಾರವಾಗಿತ್ತು.

ಹೀಗಿರಲು ತಿಮ್ಮಪ್ಪರಿಗೆ ದಿವ್ಯದೃಷ್ಟಿಯಿಂದ ನಿಧಿ ತುಂಬಿದ ಕೊಪ್ಪರಿಗೆಗಳು ಗೋಚರವಾದವು. ಅವುಗಳನ್ನು ಮುಟ್ಟಿ ತೆಗೆದ ಅವರು ಮುಕ್ತ ಹಸ್ತದಿಂದ ಗ್ರಾಮದ ಬಡವರು, ದೀನರಿಗೆ ನೀಡಲು ಆರಂಭಿಸಿದರು. ಹೀಗೆ ಕನಕ ವೃಷ್ಟಿಯನ್ನು ತರಿಸಿದ ಈ ಅಸಾಮಾನ್ಯ ದೈವೀಪುತ್ರನನ್ನು ಜನರು ಮುಂದೆ ಪ್ರೀತಿ ಮತ್ತು ಭಕ್ತಿಯಿಂದ "ಕನಕ" ಎಂದು ಕರೆಯಲಾರಂಭಿಸಿದರು. ತಿರುಪತಿಯ ವೆಂಕಟೇಶನ ವರಪ್ರಸಾದದಿಂದ ಜನಿಸಿದ ಈ ಮಹಾನ್ ಭಕ್ತಶ್ರೇಷ್ಠರು ಮುಂದೆ ಕನಕ, ಕನಕದಾಸರೆಂದೇ ಕನ್ನಡ ಸಾಂಸ್ಕೃತಿಕ ಲೋಕದೊಳಗೆ ಅಜರಾಮರರಾಗಿ ಉಳಿದಿರುವರು. ಅನಂತರ ಆದಿಕೇಶವ ಸ್ವಾಮಿಯು ಕನಸಿನಲ್ಲಿ ಬಂದು ಹಾಳು ಬಿದ್ದಿರುವ ಆದಿ ಕೇಶವನ ವಿಗ್ರಹವನ್ನು ಕಾಗಿನೆಲೆ ಗ್ರಾಮದಲ್ಲಿ ಪ್ರತಿಷ್ಠಾಪಿಸುವಂತೆ ಆಜ್ಞಾಪಿಸಲು, ಅದರಂತೆ ಮಾಡಿ ಬಾಡಾ ಮತ್ತು ಕಾಗಿನೆಲೆ ಮುಂತಾದ ಕ್ಷೇತ್ರಗಳನ್ನು ಧರ್ಮಸ್ಥಾನಗಳನ್ನಾಗಿಸಿ ಕೀರ್ತಿವಂತರಾದರು. ಅವರ ಈ ಕೀರ್ತಿ ಪ್ರತಿಷ್ಠೆಗಳನ್ನು ಕೇಳಿದಂತಹ ವಿಜಯನಗರದ ಮಹಾನ್ ಸಾಮ್ರಾಟ ಶ್ರೀಕೃಷ್ಣದೇವರಾಯನೇ ಸ್ವತಃ ಬಂಕಾಪುರ ಪ್ರಾಂತ್ಯವನ್ನು ಅವರ ಸ್ವಾಧೀನಕ್ಕೆ ಕೊಟ್ಟು ಆಡಳಿತ ನಡೆಸಿಕೊಂಡು ಹೋಗುವಂತೆ ಸೂಚಿಸಿದರು.

ಹೀಗೆ ಅಧಿಕಾರವು ತನ್ನ ಧಾರ್ಮಿಕ ಕೈಂಕರ್ಯದ ಫಲವಾಗಿ ಪ್ರಾಪ್ತವಾಗಲು ತಿಮ್ಮಪ್ಪನಾಯಕರು ರಾಜ್ಯಾಡಳಿತದೊಂದಿಗೆ ಧಾರ್ಮಿಕ ಸೇವೆಯನ್ನು ಇನ್ನೂ ಹೆಚ್ಚು ತೀವ್ರಗೊಳಿಸಿದರು. ಮೊದಲಿಗೆ ಆದಿಕೇಶವ ಸ್ವಾಮಿಯ ದೇವಾಲಯವನ್ನು ಸುಸ್ಥಿತಗೊಳಿಸಿದವರಲ್ಲದೆ ಅದರಲ್ಲಿ ಪೂಜೆ ಉತ್ಸವಗಳು ನಿತ್ಯ ನಿರಂತರವಾಗಿ ನಡೆಯುವಂತೆ ವ್ಯವಸ್ಥೆ ಮಾಡಿದರು. ಅವರ ಈ ನಿಸ್ಪೃಹ ಧಾರ್ಮಿಕ ಕಾರ್ಯಕ್ಕೆ ಒಲಿದ ವೆಂಕಟರಮಣ ಸ್ವಾಮಿಯು ಇನ್ನು ಮುಂದೆ ತನ್ನಲ್ಲಿ ಬಂದು ತನಗೆ ಒಪ್ಪಿಸಲು ಹರಕೆ ಹೊತ್ತಿರುವ ಮುಡಿಪು, ಕಾಣಿಕೆಗಳನ್ನೆಲ್ಲ ತಮ್ಮ ನಾಯಕರಾದ ತಿಮ್ಮಪ್ಪ (ಕನಕ) ನವರಲ್ಲಿ ಒಪ್ಪಿಸುವಂತೆ ಊರಿನ ಕೆಲವು ಜನರ ಕನಸಿನಲ್ಲಿ ಬಂದು ಆಜ್ಞಾಪಿಸಿದರು. ಊರಿನ ಭಕ್ತ ವೃಂದವು ಶ್ರೀಸ್ವಾಮಿಯ ಅಭೀಷ್ಟೆಯಂತೆ ಕನಕ ನಾಯಕರಿಗೆ ತಮ್ಮ ಭಕ್ತಿಯ ಹರಕೆ ಮುಡುಪುಗಳನ್ನು ಒಪ್ಪಿಸುತ್ತಿದ್ದರು. ಇತ್ತ ಕನಕನಾಯಕರೂ ಆ ಸಂಪತ್ತನ್ನೆಲ್ಲ ಶ್ರೀ ಆದಿಕೇಶವ ಸ್ವಾಮಿಯ ಪಾದಾರವಿಂದಗಳಿಗೆ ನಿರ್ಮಮತೆಯಿಂದ ಸಮರ್ಪಿಸಿ ಅದನ್ನೆಲ್ಲ ಸ್ವಾಮಿಯ ಪಾದಾರವಿಂದಗಳಿಗೆ, ಧರ್ಮಸೇವೆಗಾಗಿಯೇ ವ್ಯಯಿಸಲಾರಂಭಿಸಿದರು.ಅವರ ಈ ಭಕ್ತಿ ಮತ್ತು ತೇಜಸ್ಸಿನ ಏಳ್ಗೆಯನ್ನು ಕೆಲವರು ಸಹಿಸಲಿಲ್ಲ. ಹಾಗಾಗಿ ಕನಕನಾಯಕರು ಸಂಸ್ಥಾನದ ಆದಾಯವನ್ನೆಲ್ಲ ದೇವರ, ದೇವಾಲಯದ ಕಾರ್ಯಕ್ಕೆ ದುರ್ವಿನಿಯೋಗ ಮಾಡುತ್ತಿದ್ದಾರೆಂಬ ದೂರನ್ನು ರಾಜನಲ್ಲಿ ಸಲ್ಲಿಸಲಾಯಿತು.

ತಿಮ್ಮಪ್ಪನಾಯಕರು ವಿಜಯನಗರ ಸಾಮ್ರಾಟದಿಂದ ಮಹಾದಂಡನಾಯಕ ಪದವಿಯನ್ನು ಪಡೆದುದು ಅವರ ತಂದೆಯವರಿಗೂ ಆಜನ್ಮ ವೈರಿಯೆನಿಸಿದ್ದ ಮಲ್ಲಪ್ಪನಾಯಕರಿಗೆ ಹಿಡಿಸಿರಲಿಲ್ಲ. ಹಾಗಾಗಿ ಆತ ಎಲ್ಲದರಲ್ಲಿಯೂ ವಿರೋಧವನ್ನು ಮಾಡುತ್ತಲೇ ಇದ್ದನು. ಇದನ್ನು ತಿಳಿದ ವಿಜಯನಗರ ಸಾಮ್ರಾಟರೇ ಸ್ವತಃ ಆಸಕ್ತಿ ವಹಿಸಿ ತಿಮ್ಮಪ್ಪನಾಯಕ ಮತ್ತು ಮಲ್ಲನಾಯಕರ ನಡುವೆ ಮೈತ್ರಿ ಮಾಡಿಸಿದರು.ಆದರೆ ತಿಮ್ಮಪ್ಪನಾಯಕರ ಬಗೆಗಿನ ವೈಮನಸ್ಸೇನು ಮಲ್ಲನಾಯಕರಲ್ಲಿ ಇಲ್ಲವಾಗಿರಲಿಲ್ಲ. ಇದು ಮುಂದೆ ಅವನ ಮಗಳು ಲಚುಮಿಯನ್ನು ತಿಮ್ಮಪ್ಪನಾಯಕರು ಮದುವೆಯಾಗಲು ಬಯಸಿದಾಗ ಮಲ್ಲನಾಯಕರಿಂದ ಸುಲಭವಾಗಿ ಸಮ್ಮತಿ ದೊರೆಯಲಿಲ್ಲ. ಹಾಗಾಗಿ ತನ್ನ ಮಗಳಿಗೆ ಬೇರೊಬ್ಬ ವರನಿಗೆ ಕೊಡುವುದಕ್ಕೆ ಸಿದ್ಧ ಮಾಡಿಕೊಳ್ಳುತ್ತಿದ್ದನು.ಇತ್ತ ಲಚುಮಿಯು ತಾಯಿ ಇಲ್ಲದ ತಬ್ಬಲಿಯಾಗಿದ್ದಳು. ಅವಳಿಗೆ ಸ್ಫುರದ್ರೂಪಿ, ಶೌರ್ಯ, ಪರಾಕ್ರಮ ಮತ್ತು ದೈವಭಕ್ತನಾದ ತಿಮ್ಮಪ್ಪನಾಯಕರನ್ನು ಮದುವೆಯಾಗಬೇಕೆಂದು ಆಸೆ. ತಂದೆಯ ಈ ಉಪದ್ವ್ಯಾಪದಿಂದ ನೊಂದ ಆಕೆ ರಾತ್ರೋರಾತ್ರಿಯಲ್ಲಿಯೇ ತನ್ನೊಬ್ಬ ದಾಸಿಯೊಂದಿಗೆ ಮನೆಯಿಂದ ಹೊರಹೊರಟು ತಿಮ್ಮಪ್ಪನಾಯಕನ ಮನೆಯ ಬಾಗಿಲಿಗೆ ಬಂದಳು. ಅಲ್ಲಿ ತಿಮ್ಮಪ್ಪನಾಯಕರ ತಾಯಿಯವರನ್ನು ನೋಡಿ ದುಃಖ

ದಿಂದ 'ತಾಯಿ ನಿನಗೆ ಶರಣು ಬಂದಿದ್ದೇನೆ ನನ್ನ ತಂದೆಯು ಬಂದು ನನ್ನನ್ನು ಎಳೆದುಕೊಂಡು ಹೋಗುವುದರ ಒಳಗೆ ನನ್ನ ತಮ್ಮ ಸೊಸೆಯಾಗಿ ಮಾಡಿಕೊಳ್ಳಿ' ಎಂದು ದೈನ್ಯತೆಯಿಂದ ಸೆರಗೊಡ್ಡಿ ಬೇಡಿಕೊಂಡು ಕಾಲಿಗೆ ಎರಗಿದಳು. ಅತ್ತಮಲ್ಲ ನಾಯಕನಂತೆ ತಿಮ್ಮಪ್ಪನಾಯಕರ ತಾಯಿಯವರಿಗೂ ತಮಗೆ ಅಜನ್ಮ ವೈರಿಯಾದ ಮಲ್ಲನಾಯಕನ ಮಗಳನ್ನು ತಂದು ಕೊಳ್ಳುವುದಕ್ಕೆ ಇಷ್ಟವಿರಲಿಲ್ಲ. ಆದರೆ ಈಗ ತಾಯಿ ಯಿಲ್ಲದ ತಬ್ಬಲಿ ಹೆಣ್ಣು ಮಗುವು ತನ್ನೆದುರು ನಿಂತು ತಾಯಿಯೇ ನಿನಗೆ ಶರಣು ಬಂದಿರುವೆ ಎಂದು ಅಂಗಲಾಚಿ ಬೇಡಿ ಕೊಂಡಾಗ ಮಲ್ಲನಾಯಕನ ಕ್ರೂರತನವನ್ನು ಮರೆತು ಮಗನ ಮದುವೆಯ ಸಿದ್ಧತೆ ಮಾಡಿ ಸಂಭ್ರಮದಿಂದ ಮದುವೆ ಯನ್ನು ಮಾಡಿದಳು. ಮದುವೆಯಲ್ಲಿ ಬಂದವರಿಗೆ ಊಟಕ್ಕೆ ಕೊಯ್ಯುವುದಕ್ಕೆಂದು ತಂದಿದ್ದ ಕುರಿ,ಕೋಳಿಗಳನ್ನು ನೋಡಿದ ತಿಮ್ಮಪ್ಪನಾಯಕರು ಎಲ್ಲಾ ಜೀವಿಗಳ ಬಗೆಗೆ ಅನುಕಂಪವನ್ನು ಹೊಂದಿದ್ದ ಅವರು ನನ್ನ ಮದುವೆಯ ಕಾರಣ ಈ ಮೂಕ ಜೀವಿಗಳ ವಧೆಯಾಗುವುದು ಬೇಡವೆಂದು ತಾಯಿಯಲ್ಲಿ ಬೇಡಿಕೊಂಡು ಅವುಗಳನ್ನು ಬಿಡಿಸಿದರು. ಮದುವೆಯ ಸಂದರ್ಭದಲ್ಲಿ ಮಾವ ಮಲ್ಲನಾಯಕನು ಕೆಲವರೊಂದಿಗೆ ಮದುವೆ ಮಂಟಪಕ್ಕೆ ನುಗ್ಗಿ ದಾಂಧಲೆ ಮಾಡಿದನಲ್ಲದೆ, ತಿಮ್ಮಪ್ಪನಾಯಕರನ್ನು ಥಳಿಸಿ ತನ್ನ ಮಗಳನ್ನು ಅಲ್ಲಿಂದ ಎತ್ತಿಕೊಂಡು ಹೋಗಿ ಗೃಹಬಂಧನದಲ್ಲಿ ಇಟ್ಟನು. ಮಾತ್ರ ವಲ್ಲ. ತಿಮ್ಮಪ್ಪನಾಯಕನು ತನ್ನ ಮಗಳನ್ನು ಅಪಹರಿಸಿದ ನೆಂತಲೂ, ಅಲ್ಲದೆ, ದೈವಕಾರ್ಯದ ಹೆಸರಿನಲ್ಲಿರುವ ಬೊಕ್ಕಸದ ಹಣವನ್ನೆಲ್ಲ ಯದ್ವಾತದ್ವ ದುಂದುವ್ಯಯ ಮಾಡು ತ್ತಿರುವುದಾಗಿಯೂ ದೂರಿದನು. ಈ ಹೊತ್ತಿಗಾಗಲೇ ಇನ್ನು ಕೆಲವರು ತಿಮ್ಮಪ್ಪನಾಯಕರ ಬಗೆಗೆ ಇಂತಹ ಸುಳ್ಳು ದೂರುಗಳನ್ನು ನೀಡಿದ್ದರು 'ಒಂದು ಸುಳ್ಳನ್ನೇ ಮತ್ತೇ ಮತ್ತೆ ಹೇಳುತ್ತಿದ್ದರೆ ಸತ್ಯವೆಂಬ ಭ್ರಮೆಯು ಉಂಟಾಗುವುದಂತೆ ಅಲ್ಲವೆ, ಹಾಗಾಯಿತು ವಿಜಯನಗರದ ಅರಸರ ಮಾನಸಿಕ ಸ್ಥಿತಿ.ಈ ದೂರುಗಳ ಸತ್ಯಾಸತ್ಯತೆಯನ್ನು ತಿಳಿಯದ ಭಂಡಾ ರದ ಲೆಕ್ಕ ಪತ್ರವನ್ನು ತುರ್ತಾಗಿ ತಂದೊಪ್ಪಿಸಿ,ಅಧಿಕಾರದಿಂದ ಇಳಿಯುವಂತೆ ಆಜ್ಞೆ ಹೊರಡಿಸಿ ಬಿಟ್ಟರು. ಒಂದು ಮುಖ್ಯ ಗಮನಾರ್ಹ ಸಂಗತಿಯೆಂದರೆ, ಆ ಹೊತ್ತಿಗೆ ಶ್ರೀಕೃಷ್ಣ ದೇವ ರಾಯನು ಕಾಲವಾಗಿದ್ದನು. ಅವನ ಎರಡನೆಯ ಮಗನು ಅಚ್ಯುತರಾಯನ ಆಳ್ವಿಕೆಯಲ್ಲಿ ಸಿಂಹಾಸನಾಧೀಶನಾಗಿ ದ್ದನು. 'ಅರಿಗಾಲಿಲ್ಲ ಅಪತ್ಕಾಲದೊಳಗೆ, ಚಾಡಿ ಮಾತಿಗೆ ಭೂಪ ಘುಳುಘುಳಿಸುತ ಕೋಪವನು ತೋರಿದ ಎಂಬ ಉದ್ಗಾರಗಳಲ್ಲಿ ಶ್ರೀ ಕನಕದಾಸರು ತಮಗಾದ ಅನ್ಯಾಯವನ್ನು ಧ್ವನಿಸಿರು ವುದನ್ನು ಕಾಣಬಹುದಾಗಿದೆ.

ಇದೇ ಸಮಯದಲ್ಲಿ ಕಾಗಿನೆಲೆಯ ಗಡಿಭಾಗದಲ್ಲಿ ಸಂಘರ್ಷವು ಗಂಭೀರವಾಯಿತು. ಮಹಾದಂಡ ನಾಯಕರಾದ ತಿಮ್ಮಪ್ಪನವರಿಗೆ ಇದರಲ್ಲಿ ಗಂಭೀರ ಪೆಟ್ಟು ಬಿದ್ದು ಪ್ರಜ್ಞಾ ಶೂನ್ಯತೆಯು ಉಂಟಾಯಿತು. ಕಾರಣ ಆತನನ್ನು ಬಾಡ ಗ್ರಾಮಕ್ಕೆ ತರಲಾಯಿತು ತಾಯಿಯ ಆರೈಕೆಯಿಂದ ಬಹಳ ಬೇಗ ಆರೋಗ್ಯ ದಲ್ಲಿ ಚೇತರಿಸಿಕೊಂಡು ತಿಮ್ಮಪ್ಪನಾಯಕರು ತನ್ನ ಹೆಂಡತಿಯು ತನ್ನಿಂದ ದೂರವಾಗಿರುವ ಬಗೆಗೂ, ತನಗೆ ಇಂತಹ ದುರ್ಗತಿ ಹೇಗೆ ಉಂಟಾಯಿತು ಎಂಬುದರ ಬಗೆಗೂ ಆಲೋಚಿಸು ತ್ತಿದ್ದರು. ಅಂದು ರಾತ್ರಿ ಕನಸಿನಲ್ಲಿ ಸ್ವತಃ ತಿಮ್ಮಪ್ಪನೇ ಬಂದು ತಿಮ್ಮ ಈ ಲೌಕಿಕ ಕಾರ್ಯಕ್ಕಿಂತಲೂ ಅಜರಾಮರವಾದ ಆಧ್ಯಾ ತ್ಮಿಕ ಕಾರ್ಯವು ನಿನ್ನಿಂದ ಲೋಕಕ್ಕೆ ಆಗಬೇಕಿದೆ. ಹಾಗಾ ಗಿಯೇ ನಿನಗೆ ಇಂತಹ ಪೆಟ್ಟನ್ನು ನಾನು ಕೊಟ್ಟಿರುವುದು. ಇನ್ನಾ ದರೂ ನನಗೆ ದಾಸನಾಗಿ ನನ್ನ ನಾಮಸ್ಮರಣೆ ಮಾಡುತ್ತಾ ನನ್ನಲ್ಲಿಗೆ ಬಾ. ಜೀವನದ ಮಹಾಮುಕ್ತಿಯ ದಾರಿಯನ್ನು ನಿನಗೆ ತಿಳಿಸುತ್ತೇನೆ. ನೀನು ಮಹಾಜನತೆಗೆ ನಿನ್ನ ಭಕ್ತಿ ಮತ್ತು ಸಂಚಾ ರದ ಮೂಲಕ ಇದನ್ನು ದರ್ಶನ ಮಾಡಿಸು ಎಂದು ಹೇಳಿ ತನ್ನ ಗಾಯಗಳ ಮೇಲೆ ಕೈಯಾಡಿಸಿದಂತೆ ಆಯಿತು. ಮಾರನೆಯ ದಿನ ಬೆಳಗ್ಗೆ ಎದ್ದು ನೋಡಿದಾಗ ಅವರ ಗಾಯಗಳೆಲ್ಲ ಮಾಯ ವಾಗಿದ್ದವು. ತತುಕ್ಷಣವೇ ಈ ವಿಷಯವನ್ನು ತನ್ನ ತಾಯಿಯಲ್ಲಿ ನಿವೇದಿಸಿಕೊಂಡನು.

ಆಗ ತಾಯಿಯೂ ತನ್ನ ಒಂದು ರಹಸ್ಯವನ್ನು ಮಗನಿಗೆ ಹೇಳಿದಳು. ತಮಗೆ ವಯಸ್ಸಾದರೂ ಮಕ್ಕಳಾಗಿರಲಿಲ್ಲ. ಹಾಗಾಗಿ ನಮಗೆ ಅತೀವ ಚಿಂತೆಯಾಗಿತ್ತು. ಆಮೇಲೆ ನಾವು ಕಾಲ್ನಡಿಗೆ ಯಲ್ಲಿಯೇ ಶ್ರೀವೆಂಕಟೇಶನ ಮಹಾಸನ್ನಿಧಿಗೆ ಹೋಗಿ ಭಕ್ತಿ ಯಿಂದ ವಿನಂತಿಸಿಕೊಂಡೆವು. ಅವನ ವರಪ್ರಸಾದದಿಂದ ನೀನು ಜನಿಸಿದೆ. ಆಗ ನಾವು ನಮಗೆ ಗಂಡು ಮಗುವಾದರೆ ನಾವು ಅವನನ್ನು ನಿನ್ನ ದಾಸನನ್ನಾಗಿ ಮಾಡುತ್ತೇವೆ ಎಂಬು ದಾಗಿ ಹರಕೆ ಹೊತ್ತುಕೊಂಡಿದ್ದೆವು. ಆದರೆ ಆ ಮಾತಿನಂತೆ ನಡೆದುಕೊಂಡಿರಲ್ಲಿ. ಈಗ ಶ್ರೀವೆಂಕಟೇಶ್ವರನೇ ಇಂತಹ ವಿಪರೀತ ಘಟನೆ, ವಿಪತ್ತುಗಳ ಮೂಲಕ ನೀನು ಅಲ್ಲಿಗೆ

ಹೋಗುವಂತಹ ಸಂದರ್ಭವನ್ನು ಸೃಷ್ಟಿಸಿದ್ದಾನೆ. ಇನ್ನು ನೀನು ಹೋಗಲೇಬೇಕು. ನನ್ನ ಬಗೆಗೆ ಯೋಚಿಸಬೇಡ ಇನ್ನು ನೀನು ಹೊರಡು ಎಂಬುದಾಗಿ ಆಶೀರ್ವದಿಸಿದಳು.

ಹೀಗೆ ಕೆಲವಾರು ದಿನಗಳು ಕಳೆದವು ಕ್ರಮೇಣ ಲೌಕಿಕ ಭಾವವು ಹಿಂಗಲಾರಂಭಿಸಿತು. ಒಂದು ದಿನ ಕನಸಿನಲ್ಲಿ ಆದ ಘಟನೆಯೊಂದರ ಫಲವಾಗಿ ಜೀವನದಲ್ಲಿ ವೈರಾಗ್ಯ ಭಾವವು ಬಂದು ತನ್ನ ಕರುಣಾಪ್ರಸಾದಿ ಮಹಾಸ್ವಾಮಿ ಶ್ರೀ ವೆಂಕಟೇಶ್ವರನ ಸನ್ನಿಧಿಗೆ ಬಂದು ಕೆಲವಾರು ದಿನಗಳ ಕಾಲ ಇದ್ದರು. ಆಗ ಈ ನಿಸ್ಪೃಹ ಶ್ರೇಷ್ಠ ಭಕ್ತನ ಸಾಂಸ್ಕೃತಿಕ ಸೇವೆ ಭೂಮಂಡಲದಲ್ಲಿ ಸ್ಥಿರವಾಗಿ ಆಗುವುದರ ಮೂಲಕ ಕಾಲಾತೀತ ಚೇತನದ ಮೂರ್ತಿಯಾಗಬೇಕು ಎಂಬ ಕಾರಣ ಶ್ರೀ ಸ್ವಾಮಿಯು ಕನಸಿನಲ್ಲಿ ಬಂದು ಕನಕಾ ನೀನು ಈಗ ಇಲ್ಲಿ ಇರುವುದು ಸಾಕು. ತುಂಗಭದ್ರಾ ತೀರದಲ್ಲಿ ನೆಲಸಿರುವ ಶ್ರೀ ವ್ಯಾಸರಾಯ ಸ್ವಾಮಿಯಲ್ಲಿ ಹೋಗಿ ಭಕ್ತ ಶ್ರೇಷವಿನೆಂದು ಅಮರನಾಗು ಎಂದು ಆಜ್ಞಾಪಿಸಿದಂತಾಯಿತು. ಈ ವ್ಯಾಸರಾಯರು ಚತುರ್ಮುಖ ಬ್ರಹ್ಮನಲ್ಲಿ ಧರ್ಮಾಕಾರ್ಯ ಮಾಡಿಕೊಂಡಿದ್ದಂತಹ ಶಂಕುವರ್ಣ ಎಂಬ ಸದ್ಭಕ್ತರು, ಒಮ್ಮೆ ಉಂಟಾದ ಒಂದು ತಪ್ಪಿನಿಂದ ಸನಕಾದಿ ಮುನಿಗಳ ಶಾಪಕ್ಕೆ ತುತ್ತಾಗಿ ಮೂರು ಜನುಮಗಳನ್ನು ಎತ್ತಬೇಕಾಗಿ ಬಂದಿತು. ಮೊದಲನೆಯ ಜನುಮದಲ್ಲಿ ಪ್ರಹ್ಲಾದನಾಗಿ ಶ್ರೀವಿಷ್ಣುವಿನ ಅನುಗ್ರಹಕ್ಕೆ ಪಾತ್ರರಾಗಿದ್ದರು. ಈಗ 'ವ್ಯಾಸತೀರ್ಥ'ರಾಗಿ ಜನಿಸಿ ಶ್ರೀರಾಮನ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಮುಂದೆ ಶ್ರೀರಾಮನ ಅನುಗ್ರಹದಿಂದಲೇ ಶ್ರೀರಾಘವೇಂದ್ರಸ್ವಾಮಿಗಳಾಗಿ ಜನಿಸಿ ಗುರುಸಾರ್ವಭೌಮರಾಗಿ ಮಂತ್ರಾಲಯದಲ್ಲಿ ಪೂಜೆಗೊಳ್ಳುವಂತಹ ಮಹಾನ್ ದೈವೀಪುರುಷರಾಗಿದ್ದಾರೆ. ಅಂಥವರಲ್ಲಿಗೆ ಹೋಗಿ ಸನ್ಮಾರ್ಗಯುಕ್ತನಾಗು ಎಂದು ಆಶೀರ್ವದಿಸಿದ ಶ್ರೀವೆಂಕಟೇಶ ಮಹಾಸ್ವಾಮಿ. ಅಂತಹ ಶ್ರೀ ಸ್ವಾಮಿಯ ಆಸೆಯಂತೆ ಪರಮಭಕ್ತ ಶ್ರೀ ಕನಕರು ಸೋಸಲೆಯ ಶ್ರೀವ್ಯಾಸರಾಯ ಸ್ವಾಮಿಗಳ ಮಹಾಸನ್ನಿಧಿಗೆ ಬಂದು ಸೇರಿದರು.

ಶ್ರೀವ್ಯಾಸರಾಯರ ಪರಿವಾರದಲ್ಲಿ ಶ್ರೀಪುರಂದರದಾಸಾದಿ ಮಹಾಭಕ್ತರಿದ್ದಂತೆಯೇ ಅಲ್ಪ ಮನಸ್ಸಿನ ಕೇವಲ ಭಕ್ತರೂ ಇದ್ದರು. ಕನಕರ ಆಗಮನವನ್ನು ನಿರೀಕ್ಷಿಸುತ್ತಲಿದ್ದ ಶ್ರೀವ್ಯಾಸರಾಯ ಮತ್ತು ಶ್ರೀಪುರಂದರದಾಸರು ಅವರ ಆಗಮನವಾದೊಡನೆ ಆದರಿಸಿ ಸನ್ನಿಧಿಯಲ್ಲಿ ನೆಲೆಸಲು ಅವಕಾಶ ಮಾಡಿಕೊಟ್ಟರು. ಅವರ ಪವಿತ್ರ ಚೇತನವನ್ನು ದಿವ್ಯಜ್ಞಾನ ದೃಷ್ಟಿಯಿಂದ ಅರಿತಿದ್ದ ಶ್ರೀವ್ಯಾಸರಾಯರು ಕನಕರನ್ನು ಬಹಳವಾಗಿ ಆದರಿಸುತ್ತಿದ್ದರು. ಇನ್ನು ಶ್ರೀ ಪುರಂದರದಾಸರೋ ಅಪಾರ ಗೌರವವನ್ನು ವ್ಯಕ್ತಪಡಿಸುತ್ತಿದ್ದರು. ಈ ವಿಚಾರವು ಇಲ್ಲಿ ನೆಲೆಸಿದ್ದ ಕೇವಲ ಭಕ್ತರಿಗೆ ಸರಿ ಬರುತ್ತಿರಲಿಲ್ಲ. ಎಲ್ಲಿ ಹೋದರೂ ಮುತ್ತುಗಕ್ಕೆ ಮೂರೇ ಎಲೆ ಎಂಬಂತೆ ಹಾಗೂ ಅವರವರೆ ಒಂದು ಅವರೆ ಕೇಳಿದ ಮೊರವೆ ಒಂದು ಎಂಬಂತೆ ಭಕ್ತಶ್ರೇಷ್ಠ ಕನಕರ ಅಸೀಮ ವ್ಯಕ್ತಿತ್ವವನ್ನು ತಿಳಿಯದೆ ಕೆಳಜಾತಿಯವನೆಂದು ಮತ್ತೆ ಮತ್ತೆ ಕೆಣಕುತ್ತಿದ್ದರು. "ಕನಕರನ್ನು ಕೆಣಕ ಬೇಡ. ಕೆಣಕಿ ತಿಣುಕ ಬೇಡ ಎಂಬಂತೆ ಪ್ರತಿ ಬಾರಿಯೂ ಅವ ರನ್ನು ಕೆಣಕಿದಾಗ ಮಹಾತ್ಮಯುತ ಅಲೌಕಿಕಪವಾಡಗಳು ಈ ಭಕ್ತಶ್ರೇಷ್ಠರಿಂದ ಜರುಗುತ್ತಿದ್ದವು. ನಾಯಿಯ ಮೂಲಕ ದೇವರ ದರ್ಶನ, ಕೋಣನ ಪವಾಡ, ಬಾಳೆಹಣ್ಣು ಭಕ್ಷ್ಯ ಪ್ರಸಂಗ, ಉಡುಪಿ ಶ್ರೀ ಕೃಷ್ಣನ ಆವರ್ತನ ದಿಶೆ ಇಂತಹ ಅನೇಕ ಪವಾಡ ದರ್ಶನಗಳ ಮೂಲಕ ಎಲ್ಲರಿಗೂ ನೇರವಾಗಿ ತಮ್ಮಲ್ಲಿನ ಆಧ್ಯಾ ತ್ಮಿಕ ಶಕ್ತಿಯನ್ನು ತೋರ್ಪಡಿಸುತ್ತಿದ್ದರು. ಎಲ್ಲೆಡೆ ಇರುವವನು ದೇವರು. ಮೋಕ್ಷಕ್ಕೆ ಹೋಗುವವರು ಯಾರು - ಈ ಮೊದಲಾದುವನ್ನು ಇಲ್ಲಿ ಸ್ಮರಿಸಬಹುದು. ಗುರುವರ್ಯರಾದ ಶ್ರೀವ್ಯಾಸರಾಯರು ತಮ್ಮ ಕರ್ಮಠ ಶಿಷ್ಯರಿಗೆ ನಾಡಾಡಿಯಂತೆಯೇ ಮಾಡಿಬಿಟ್ಟರಿ ಇವನ, ನಾಡೆಲ್ಲ ಹುಡುಕಿದರೂ ಈಡಾರ ಕಾಣೆ ಮತ್ತು 'ದೇಹಕ್ಕಿಂತ ಆತ್ಮಪಾವಿತ್ರ್ಯತೆಯೇ ಶ್ರೇಷ್ಠವಾದುದು'ಎಂಬುದಾಗಿ ಅನ್ವರ್ಥಮಯರಾದ ಶ್ರೀಕನಕದಾಸರನ್ನು ಅಭಿನಂದಿಸಿ ಕರ್ಮಠ ಶಿಷ್ಯರಿಗೆ ಬುದ್ಧಿ ಹೇಳುತ್ತಿದ್ದರು. ಇತ್ತ ಕನಕದಾಸರೋ ತಮ್ಮ ಶಿಷ್ಯ ಸಹಪಾಠಿಗಳ ಬಗೆಗೆ ಲವಲೇಶವೂ ಬೇಸರ, ಅಸೂಯೆ, ದ್ವೇಷವನ್ನು ಬೆಳೆಸಿಕೊಳ್ಳಲಿಲ್ಲ. ಮರೆತೂ ಬರದಂತೆ ಕಠಿಣ ತಪಸ್ಸಿನ ಮಹಾನ್ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದರು. ಕರ್ಮಠ ಮನಸ್ಸಿನ ಈ ಶಿಷ್ಯ ಪರಿವಾರದವರ ಈ ಕಿರುಕುಳಗಳು ಕನಕದಾಸರ ಸಾಧನೆಯ ದರ್ಶನಕ್ಕೆ ಒರೆಗಲ್ಲುಗಳಾಗಿದ್ದವು. ಶ್ರೀಕನಕದಾಸರು ಪ್ರತಿಯೊಂದು ಕಿರುಕುಳವನ್ನು ಆಧ್ಯಾತ್ಮಿಕ ಸವಾಲಾಗಿ ಸ್ವೀಕರಿಸಿ ತಮ್ಮ ಸಿದ್ಧಿ ಸಾಧನೆಯ ಸ್ವರೂಪವನ್ನು ದರ್ಶನ ಮಾಡಿಸುತ್ತಿದ್ದರು. ಶ್ರೀವ್ಯಾಸರಾಯರು ಮತ್ತು ಶ್ರೀಪುರಂದರ ದಾಸರ ಹೊರತಾಗಿ ಉಳಿದವರಿಗೆ ಎಂದಿಗೂ ತಿಳಿಯಲೇ ಇಲ್ಲ; ದರ್ಶನವಾಗಲೇ ಇಲ್ಲ.

# ಆರೋಗ್ಯ ಪ್ರದಾತ ಶ್ರೀ ಸೂರ್ಯ ಭಗವಂತ

-ಮೂಲ ಡಾ॥ ಸಿ. ಮಧುಸೂದನ ಶರ್ಮ
ಅನುವಾದ: ಶ್ರೀಮತಿ


"ಧರ್ಮಾರ್ಥ ಕಾಮ ಮೋಕ್ಷಾಣಾಂ ಆರೋಗ್ಯ ಮೂಲಮುತ್ತಮಂ"ಎನ್ನುತ್ತದೆ ನಮ್ಮ ವೈದಿಕ ವಾಙ್ಮಯ ಅಂತಹ ಉನ್ನತವಾದ ಆರೋಗ್ಯವನ್ನು ಪ್ರಸಾದಿಸುವವನು ಸೂರ್ಯ ಭಗವಂತನೇ ಎಂದರೆ ಅತಿಶಯೋಕ್ತಿಯಾಗಿರಲಾರದು ಆದ್ದರಿಂದಲೇ 'ಆರೋಗ್ಯಂ ಭಾಸ್ಕರಾ ದಿಚ್ಛೇತೆ' ಎಂಬ ಗಾದೆಮಾತು ಇಂದು ಜನಜನಿತವಾಗಿದೆ.

ಪ್ರತಿದಿನ - ಅನುದಿನ ಕೋಟ್ಯಾಂತರ ಪ್ರಾಣಿಗಳ ಆವಿರ್ಭವಕ್ಕೆ ಈ ವಿಶ್ವವು ವೇದಿಕೆಯಾಗಿ ನಿಂತಿದೆ. ಭೌತಿಕ ದೃಷ್ಟಿಗೆ ಗೋಚರಿಸದ ಮಹತ್ತರವಾದ ಶಕ್ತಿಯ ದೆಸೆಯಿಂದ ಜನನ, ಜೀವನ, ಮರಣವೆಂಬಂಥಹ ಸೃಷ್ಟಿ ಕಾರ್ಯಗಳು ಕಾಲಕಾಲಕ್ಕನುಗುಣವಾಗಿ ಗತಿತಪ್ಪದೇ ಜರಗುತ್ತಿವೆ ಈ ಶಕ್ತಿಯ ಸ್ವರೂಪವೇ ಶ್ರೀ ಸೂರ್ಯ ಭಗವಂತನು ಆದ್ದರಿಂದಲೇ ನಮ್ಮ ಭಾರತೀಯ ಸನಾತನ ಸಂಸ್ಕೃತಿಯಲ್ಲಿ, ಸಂಪ್ರದಾಯಗಳಲ್ಲಿ ಸೂರ್ಯೋಪಾಸನೆ ಒಂದು ಅವಿಭಾಜ್ಯ ಅಂಗವಾಗಿ ನೆಲೆಯೂರಿದೆ. "ಸುವತಿ ಪ್ರೇರಯತಿ ಜನಾನ್ ಕರ್ಮಣ್ಯೇತಿ ಸೂರ್ಯಃ" ಎಂಬ ವಚನಾನುಸಾರ ಸಮಸ್ತ ಪ್ರಪಂಚಲೋಕವನ್ನು ಕಾರ್ಯ ಕರ್ಮಗಳಿಗೆ ಪ್ರೇರೇಪಿಸುವನು ಸೂರ್ಯನೇ ಎಂದರ್ಥ. ಈ ಸೂರ್ಯಭಗವಂತನ ಕಿರಣಗಳ ಪ್ರಭಾವದಿಂದ ನಮ್ಮಲ್ಲಿ ಸುಪ್ತಾವಸ್ಥೆಯಲ್ಲಿರುವ ಚೈತನ್ಯ ಪ್ರಾಣಶಕ್ತಿ ಶಕ್ತಿಯುತವಾಗಿ ಶಾರೀರಿಕ, ಮಾನಸಿಕ ಶಕ್ತಿ ಸಾಮರ್ಥಗಳಿಂದ ನಮ್ಮ ದೈನಂದಿನ ಕಾರ್ಯಕ್ರಮಗಳನ್ನು ಸಕ್ರಿಯವಾಗಿ ನೆರವೇರಿಸಲು ತಯಾರಾಗುತ್ತದೆ.

ಅನಾಯಸವಾಗಿ ನಮ್ಮಾವರೆಲ್ಲರೂ ಸೂರ್ಯೋಪಾಸಕರೇ ಪ್ರಾತಃ ಕಾಲದಲ್ಲಿ ನಿದ್ರೆಯಿಂದೆದ್ದು ನಮಸ್ಕಾರ ಮಾತ್ರದಿಂದಲೇ ಅನುಗ್ರಹ, ಆಶೀರ್ವಾದ ಆರೋಗ್ಯ, ಯೋಗಕ್ಷೇಮಗಳನ್ನು ಪ್ರಸಾದಿಸುವ ಕರುಣಾಮೂರ್ತಿ ನಮಸ್ಕಾರ ಪ್ರಿಯನಾದ ಭಾನುವನ್ನು (ನಮಸ್ಕಾರ ಪ್ರಿಯಾ ಭಾನುಃ) ಸೇವಿಸುವುದು, ಸಂಧ್ಯಾವಂದನೆ ಮಾಡುವುದರ ಹಿಂದೆ ಆರೋಗ್ಯ-ವೈಜ್ಞಾನಿಕ ರಹಸ್ಯಗಳೆದೆಷ್ಟೋ.. ಎಷ್ಟೆಷ್ಟೋ... ಸಂಧ್ಯಾವಂದನೆಯನ್ನು ಮಾಡದ ಪಾಮರರು ಸಹಿತ ಪ್ರಾತಃಸ್ನಾನಾ ನಂತರ ಪ್ರತ್ಯಕ್ಷ ದೈವವಾದ ಸೂರ್ಯ ಭಗವಂತನಿಗೆ ನಮಸ್ಕರಿಸಿ ಧರ್ಮನಿರ್ವಹಣೆಗಾಗಿ ಶಕ್ತಿ ಸಾಮರ್ಥ್ಯಗಳನ್ನು ನೀಡುವುದಾಗಿ ಪ್ರಾರ್ಥಿಸಿ ತಂತಮ್ಮ ಕರ್ತವ್ಯಗಳಲ್ಲಿ ನಿರತರಾಗುವುದು ನಮ್ಮ ಹಿರಿಯರ ಸಂಪ್ರದಾಯಗಳಲ್ಲಿ ಒಂದು ಭಾಗವೇ ಆಗಿದೆ.

ಸೂರ್ಯಕಾಂತಿಯಿಂದ ಬರುವ ಸೂರ್ಯಕಿರಣಗಳ ಪ್ರಭಾವವು ಅನಂತವಾದುದು ಮತ್ತು ಅಮಾಹ್ಯವಾದುದು. ಅವುಗಳಲ್ಲಿರುವ ಅಲ್ಟ್ರಾ ವಯಲೆಟ್ ಕಿರಣಗಳಿಂದ ನಮ್ಮ ಶರೀರದಲ್ಲಿರುವ ಕೊಲೆಸ್ಟ್ರಾಲ್ ನಾಶಹೊಂದಿ ವಿಟಮಿನ್ - ಡಿ ನಮ್ಮ ಶರೀರದಲ್ಲಿರದೇ ಹೋದರೆ ನಾನಾ ಬಗೆಯ ಅನಾರೋಗ್ಯವು ನಮ್ಮನ್ನು ಬಾಧಿಸುತ್ತದೆ. ರೋಗನಿರೋಧಕ ಶಕ್ತಿ ಕುಗ್ಗಿ ಹೋಗುತ್ತದೆ. ಮಾತು-ಮಾತಿಗೆ ಶರೀರವು ವ್ಯಾಧಿಗಳಿಗೆ ಬಲಿಯಾಗುತ್ತದೆ. ಕೀಲು ನೋವು, ಮೂಳೆನೋವು ನಿಶಕ್ತಿ,ನಿತ್ರಾಣ ವಿಪರೀತ ಆಯಾಸ, ಮೈಯುರಿ, ನಿದ್ರಾಹೀನತೆ, ಸಂತಾನಹೀನತೆ ಮನೆ ಮಾಡಿಕೊಳ್ಳುತ್ತವೆ. ಮೂಳೆಗಳಿಗೆ ಸಂಬಂಧಿಸಿದ ಕಾಯಿಲೆಗಳು,ಚರ್ಮವ್ಯಾಧಿಗಳು, ರಕ್ತಹೀನತೆ, ಮಧುಮೇಹ,ಅತಿತೂಕದಂಥ ಸಮಸ್ಯೆಗಳು ಪ್ರತ್ಯಕ್ಷವಾಗಿ ಪರೋಕ್ಷವಾಗಿಯೂ ಈ ವಿಟಮಿನ್ - ಡಿ ಯ ಕಾರಣೀಭೂತವಾಗುತ್ತದೆ. ಸ್ವಾದಗ್ರಂಥಗಳು ಸರಿಯಾಗಿ ಕೆಲಸ ಮಾಡದಿರುವುದರಿಂದ ಜೀರ್ಣಶಕ್ತಿ ಸಮಸ್ಯೆಗಳುಂಟಾಗುತ್ತವೆ. ಜ್ಞಾಪಕಶಕ್ತಿ, ಏಕಾಗ್ರತೆ ನೇತ್ರದೃಷ್ಟಿಯ ಮೇಲೂ ಇದರ ಪ್ರಭಾವ ಬೀಳುತ್ತದೆ. ವೃದ್ಧಾಪ್ಯದ ಸಮಸ್ಯೆಗಳು ಶೀಘ್ರವಾಗಿ ನಮ್ಮನ್ನು ಪ್ರವೇಶಿಸುತ್ತವೆ. ತ್ವಚೆಯ ಸೌಂದರ್ಯ, ಕೇಶ ಸೌಂದರ್ಯ ಕುಂಠಿತವಾಗುತ್ತದೆ.

ಆದ್ದರಿಂದಲೇ ನಮಗೆ ಸೂರ್ಯನ ಬೆಳಕು ಅತ್ಯಾವಶ್ಯಕ ಇವುಗಳೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡೇ ನಮ್ಮ ಹಿರಿಯರು ಹಲವು ಆಚಾರ - ಸಂಪ್ರದಾಯಗಳನ್ನು ವಿನಿಯೋಗಿಸಿದ್ದಾರೆ. ಅದರ ಹಿಂದೆ ಎಷ್ಟೋ ವೈಜ್ಞಾನಿಕ ಆರೋಗ್ಯ ರಹಸ್ಯಗಳು ಅಡಗಿವೆಯೆಂದು ಹಲವು ನಿದರ್ಶನಗಳು ಉದಾಹರಣೆಗಳ ಮೂಲಕ ಸ್ಪಷ್ಟವಾಗಿ ತಿಳಿಸಲಾಗಿದೆ.



ಹಸಿಗೂಸುಗಳಿಗೆ ಎಳ್ಳೆಣ್ಣೆಯನ್ನು ಸವರಿ ಮುಂಜಾನೆಯ ವೇಳೆ ಸೂರ್ಯನ ಕಿರಣಗಳು ಬೀಳುವಂತೆ ಸ್ವಲ್ಪ ಹೊತ್ತು ಹೊರಗಡೆ ಮಲಗಿಸುತ್ತಾರೆ. ಇದರಿಂದ ಅವರಿಗೆ ಮಿಟಮಿನ್-ಡಿ ಪುಷ್ಕಳವಾಗಿ ದೊರೆತು ಲವಲವಿಕೆಯಿಂದ ಆಡುತ್ತಾರೆ.

ಭೋಗಿಯದಿನ ಸಾಯಂಕಾಲ ಸೂರ್ಯನ ಬಣ್ಣ-ರೂಪಗಳ ಪ್ರತೀಕವಾದ ಬಾರೇಹಣ್ಣುಗಳಿಂದ ಹಣ್ಣೆದೆಯುತ್ತಾರೆ. ಇದರಿಂದ ಸೂರ್ಯ ಶಕ್ತಿ ಮಕ್ಕಳಿಗೆ ದೊರೆಯುತ್ತದೆಂದು ನಂಬಿಕೆ.

ನಮಗೆ ಬೇಸಿಗೆ ಕಾಲದ ಆರಂಭದಲ್ಲಿ ಮುಂಜಾನೆಯಿಂದ ಸಂಜೆಯವರೆಗೆ  ಗಾಳಿಪಟಗಳನ್ನು ಹಾರಿಸುವ ಸಂಪ್ರದಾಯವಿದೆ. ಈ ಸಮಯದಲ್ಲಿ ಎಳ್ಳು- ಬೆಲ್ಲಗಳ ಮಿಶ್ರಿತವಾದ ಸಿಹಿ ಪದಾರ್ಥಗಳನ್ನು ಕೂಡಾ ಮಕ್ಕಳಿಗೆ ತಿನ್ನಿಸುತ್ತಾರೆ. ಇದರಿಂದ ಉಷ್ಣವಾಗದೇ ಇರುವುದರ ಜೊತೆಗೆ ಎಳ್ಳಿನ ಸಹಜ ಪೋಷಕಾಂಶಗಳಾದ ಕೊಬ್ಬು ಕ್ಯಾಲ್ಸಿಯಂ ಶರೀರಕ್ಕೆ ಹೇರಳವಾಗಿ ದೊರೆತು ಕಾಲ್ಸಿಯಂ ಕೊರತೆಯುಂಟಾಗದಂತೆ ಮಾಡುವುದಲ್ಲದೆ ವಿಟಮಿನ್ - ಡಿ ಸಹಾ ಹೇರಳವಾಗಿ ದೊರೆತು ಅದು ಬಹಳ ಕಾಲ ಶರೀರದಲ್ಲಿ ನಿಲ್ಲುತ್ತದೆ.

ಅಷ್ಟೇ ಅಲ್ಲದೇ ಭೋಗಿದಿನ ಹಾಕುವ ಅಗ್ನಿಹೋತ್ರದ ಸಂದರ್ಭದಲ್ಲಿಯೂ ಸಹಾ ನಾವು ಉಪಯೋಗಿಸುವ ಆಕಳ ಸಗಣಿ, ತುಪ್ಪ, ಮಾವು - ಅರಳಿ ಸಮಿತ್ತುಗಳು ಇತ್ಯಾದಿ ಪವಿತ್ರ ದ್ರವ್ಯಗಳು ಮತ್ತು ಅವುಗಳಿಂದ ಹೊರಹೊಮ್ಮುವ ಹೊಗೆಯಲ್ಲಿರುವ ಸಿಲ್ವರ್ ಐಯೋ ಡೈಡ್ ನೈಟ್ರೋಜನ್‌ಗಳ ಪ್ರಭಾವದಿಂದ ಮುಂಬರುವ ಬೇಸಿಗೆಯ ಉಷ್ಣ ತೀವ್ರತೆಯಲ್ಲಿ ಅಲ್ಟ್ರಾ ವಯಲೆಟ್ ಕಿರಣಗಳ ದ್ವಾರಾ ಬರುವ ಸೈಡ್ ಎಫೆಕ್ಟ್‌ಗಳನ್ನು ಶಮನಗೊಳಿಸುವುದೆಂಬ ಉದ್ದೇಶದಿಂದ ಈ ಆಚರಣೆಯನ್ನು ತಂದಿದ್ದಾರೆ. ಇದು ಒಂದು ವೈಜ್ಞಾನಿಕ ಸತ್ಯವೂ ಹೌದು.

ಹಾಗೆಯೇ ರಥಸಪ್ತಮಿ ದಿನ ಅರುಣೋದಯ ಕಾಲದಲ್ಲಿ  ಏಳು ಎಕ್ಕೆ ಎಲೆಗಳನ್ನು ತಲೆ ಮೇಲೆ,ಭುಜಗಳ ಮೇಲೆ  ಕೈಗಳ ಮೇಲಿಟ್ಟುಕೊಂಡು ಸ್ನಾನ ಮಾಡುವುದು ನಮ್ಮ ವಾಡಿಕೆ. ತಲೆಮೇಲಿಟ್ಟುಕೊಳ್ಳುವ ಈ ಎಕ್ಕೆ ಎಲೆ ಸೂರ್ಯ ಶಕ್ತಿಯನ್ನು ಗ್ರಹಿಸಿ ಶರೀರದಲ್ಲಿ ತಿಳಿಸುವುದರಿಂದ ಬೇಸಿಗೆಯ ಧಗೆಯನ್ನು ತಟ್ಟುಕೊಳ್ಳುವ ಶಕ್ತಿ ನಮಗೆ ಬರುತ್ತದೆ ಎಂಬುದು ನಂಬಿಕೆ ಹೀಗೆ ವಿವಿಧ ಸಂದರ್ಭ ಗಳಲ್ಲಿ, ವಿವಿಧ ಬಗೆಯಲ್ಲಿ, ವಿವಿಧ ಕಾರ್ಯಕ್ರಮಗಳಲ್ಲಿ ಸೌರಶಕ್ತಿ ಪ್ರಭಾವವನ್ನು ಅದನ್ನು ನಾವು ಸದ್ವಿನಿಯೋಗ ಮಾಡಿಕೊಳ್ಳಬೇಕಾದ ಅವಶ್ಯಕತೆಯನ್ನು ಅದರಿಂದ ನಮಗಾಗುವ ಪ್ರಯೋಜನವನ್ನು ನಮ್ಮ ಮಹರ್ಷಿಗಳು ನಮಗೆ ತಿಳಿಸಿಕೊಟ್ಟಿದ್ದಾರೆ.

ಪ್ರಸ್ತುತ ನಾಗರೀಕ ಸಮಾಜದಲ್ಲಿ ಅವಗಾಹನೆ ದೋಷಗಳಿಂದ ಅಸಂಖ್ಯಾತ ಉದ್ಯೋಗಸ್ಥರು, ವಿದ್ಯಾರ್ಥಿಗಳು, ವ್ಯಾಪಾರಸ್ಥರು, ಸಾಫ್ಟ್‌ವೇರ್ ಇಂಜಿನೀಯರುಗಳು. ಹೀಗೆ ಯಾರ್‍ಯಾರೋ ಸೂರ್ಯಕಾಂತಿಗೆ ಸೂರ್ಯ ರಶ್ಮಿಗೆ ದೂರವಾಗುತ್ತಾ ವಿವಿಧ ಬಗೆಯ ಅನಾರೋಗ್ಯಕ್ಕೆ ತುತ್ತಾಗಿ ಪರಿಸ್ಥಿತಿಯನ್ನು ಹದಗೆಡಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಸರಿಯಾಗಿ ಲೋಕವನ್ನು, ವಿಶ್ವವನ್ನು ತರತರ ನಡುಗಿಸಿದ ಕರೋನಾ ಹೆಮ್ಮಾರಿಯ ಪ್ರಭಾವದಿಂದಾಗಿ ಕೋಟ್ಯಾದಿ ಜನಗಳು ಈ ವಿಟಮಿನ್-ಡಿಯಿಂದ ದೂರವಾಗಿರುವುದರಲ್ಲಿ ಸಂಶಯವೇ ಇಲ್ಲ ಅತಿಶಯೋಕ್ತಿಯೂ ಇಲ್ಲ.

ಎಲ್ಲಿ ಏನಾದರೂ ಸಮಸ್ತ ಲೋಕವನ್ನೂ, ಸಕಲ ಜೀವಿಗಳನ್ನು ಚೈತನ್ಯಭರಿತರನ್ನಾಗಿ ಮಾಡುವ ಅನೂಹ್ಯವಾದ ಆನಂತ ಮಹತ್ತರ ಶಕ್ತಿವಂತರು ನಮ್ಮ ಆರೋಗ್ಯ ಆಯುರ್ವರ್ಧಕನಾದ,ಪ್ರೇರಕನೂ ಸೂರ್ಯಭಗವಂತನ ಕೃಪಾಕಟಾಕ್ಷ ಪ್ರಭಾವವು ಕೂಡಾ ಸದಾ ನಮ್ಮ ಮೇಲಿರಲಿ ಎಂದು ಪ್ರಾರ್ಥಿಸುತ್ತಾ....

ಸರ್ವದುಃಖೋಪಶಾಂತಾಯ -ಸರ್ವಪಾಪ ಹರಾಯಚ
ಸರ್ವವ್ಯಾಧಿ ವಿನಾಶಾಯ - ಭಾಸ್ಕರಾಯ ನಮೋ ನಮಃ

(ಭವಿಷ್ಯೋತ್ತರ ಪುರಾಣ)

# ನಮೋ ಶನಿದೇವಾ

- ಪ್ರಣವ
9035618076



ಹಿಂದೂ ಧರ್ಮದಲ್ಲಿ ಅತೀ ಹೆಚ್ಚು ಜನರು ಭೀತಿ ಪಡುವ ದೇವರು ಎಂದರೆ ಅದು ಶನಿ ದೇವರು. ಶನಿ ದೇವರ ಮುಂದೆ ತಲೆಬಾಗದವರೇ ಇಲ್ಲ. ಯಾಕೆಂದರೆ ಶನಿ ದೇವರು ಕಷ್ಟಗಳನ್ನು ನೀಡುತ್ತಾರೆ ಎನ್ನುವ ಭೀತಿ ಪ್ರತಿಯೊಬ್ಬರಲ್ಲೂ ಇದೆ. ಪುರಾಣಗಳಲ್ಲಿ ಕೂಡ ಹಲವಾರು ಮಂದಿ ಶನಿ ದೇವರ ಕೆಂಗಣ್ಣಿಗೆ ಗುರಿಯಾಗಿರುವ ಬಗ್ಗೆ ನಾವು ಓದಿಕೊಂಡು ತಿಳಿದಿದ್ದೇವೆ. ದೇವತೆಗಳಿಂದ ಹಿಡಿದು ರಾಜ ಮಹಾರಾಜರ ತನಕ ಪ್ರತಿಯೊಬ್ಬರು ಶನಿದೇವರ ಕೆಂಗಣ್ಣಿಗೆ ಗುರಿಯಾಗಿರುವರು. ಆದರೆ ಶನಿ ದೇವರು ಎಲ್ಲರಿಗೂ ಹೀಗೆ ಮಾಡುತ್ತಾರೆ ಎಂದಲ್ಲ. ಅವರು ತಪ್ಪುಗಳನ್ನು ಮಾಡುವವರಿಗೆ ಮತ್ತು ಅದನ್ನು ತಿದ್ದಿಕೊಂಡು ನಡೆಯದೇ ಇರುವವರಿಗೆ ಕೆಂಗಣ್ಣು ಬೀರುವರು.

ಶನಿ ದೇವರನ್ನು ಭಕ್ತಿಯಿಂದ ಪೂಜಿಸಿದರೆ ಆಗ ಅವರು ಆಶೀರ್ವಾದ ಕೂಡ ನೀಡುವರು ಎಂದು ಹೇಳಲಾಗಿದೆ. ಶನಿ ದೇವರ ಕೃಪೆ ಒಳಗಾಗಲು ಜನರು ಹಲವಾರು ರೀತಿಯಿಂದ ಅವರನ್ನು ಪೂಜಿಸುವರು ಮತ್ತು ತಮ್ಮ ತಪ್ಪುಗಳನ್ನು ಮನ್ನಿಸಿಬಿಡಿ ಎಂದು ಬೇಡಿಕೊಳ್ಳುವರು. ಭಕ್ತರಿಗೆ ಶನಿದೇವರು ಒಲಿದರೆ ಆಗ ಖಂಡಿತವಾಗಿಯೂ ಜೀವನವು ತುಂಬಾ ಬೆಳಗುವುದು ಎನ್ನುವುದರಲ್ಲಿ ಯಾವುದೇ ಸಂಶಯವಿಲ್ಲ. ಶನಿ ದೇವರನ್ನು ಒಲಿಸಿಕೊಂಡು ಅವರ ಆಶೀರ್ವಾದ ಪಡೆದುಕೊಳ್ಳುವುದು ಹೇಗೆ ಎಂದು ಈ ಲೇಖನ ಮೂಲಕ ತಿಳಿಸುತ್ತದೆ.

### ಶನಿದೇವರ ಪತ್ನಿಯರು

ಶನಿದೇವರನ್ನು ಒಲಿಸಿಕೊಳ್ಳುವ ಅತ್ಯುತ್ತಮವಾಗಿ ವಿಧಾನವೆಂದರೆ ಅದು ಅವರ ಪತ್ನಿಯರನ್ನು ಪೂಜಿಸುವುದು. ಶನಿದೇವರಿಗೆ ಎಂಟು ಮಂದಿ ಪತ್ನಿಯರು ಎಂದು ಹೇಳಲಾಗಿದೆ. ಇದರಲ್ಲಿ ಧ್ವಾಜಿನಿ, ಧಾಮಿನಿ, ಕಂಕಲಿ, ಕಲಹಪ್ರಿಯ, ಕಂಟಕಿ, ತುರಂಗಿ, ಮಹಿಶಿ ಮತ್ತು ಅಜ ಎಂದು ಹೇಳಲಾಗಿದೆ. ಶನಿ ದೇವರ ಆಶೀರ್ವಾದ ಪಡೆಯಲು ಅವರ ಪತ್ನಿಯರ ಹೆಸರನ್ನು ಜಪಿಸಬೇಕು ಎಂದು ಹೇಳಲಾಗಿದೆ. ಅದರಲ್ಲೂ ಶನಿವಾರದಂದು ಶನಿ ದೇವರ ಪತ್ನಿಯರ ಹೆಸರನ್ನು ಜಪಿಸಿದರೆ ಆಗ ಇನ್ನಷ್ಟು ಲಾಭ ಸಿಗುವುದು ಎಂದು ಹೇಳಲಾಗಿದೆ. ಶನಿ ದೇವರ ದೃಷ್ಟಿಯು ಕೆಟ್ಟದು ಎಂದು ಹೇಳುವಂತಹ ಕಥೆಯು ಅವರ ಪತ್ನಿ ಧಾಮಿನಿ ಅವರಿಂದಾಗಿ ಬಂದಿದೆ ಎಂದು ಪುರಾಣಗಳು ಹೇಳುತ್ತವೆ.

### ಶನಿ ದೇವರು ಕೃಷ್ಣದೇವರ ಪರಮ ಭಕ್ತರಾಗಿದ್ದರು..

ಶನಿದೇವರು ಸೂರ್ಯ ದೇವ ಮತ್ತು ಅವರ ಪತ್ನಿ ಛಾಯರ ಮಗನಾಗಿದ್ದರು. ಶನಿ ದೇವರು ಕಪ್ಪು ಮೈ ಬಣ್ಣ ಹೊಂದಿದ್ದರು ಮತ್ತು ಕಬ್ಬಿಣದಿಂದ ಮಾಡಿದ ರಥದಲ್ಲಿ ಸಂಚರಿಸುತ್ತಿದ್ದರು ಮತ್ತು ಕಾಗೆಯು ಇದರ ವಾಹನವಾಗಿತ್ತು. ತನ್ನ ಬಾಲ್ಯದ ದಿನಗಳಿಂದಲೂ ಶನಿ ದೇವರು ಕೃಷ್ಣ ದೇವರು ಪರಮ ಭಕ್ತರಾಗಿದ್ದರು. ಕೃಷ್ಣದೇವರ ಧ್ಯಾನದಲ್ಲಿ ಶನಿ ದೇವರು ಹಲವಾರು ಗಂಟೆಗಳನ್ನು ಕಳೆಯುತ್ತಲಿದ್ದರು. ಶನಿ ದೇವರು ಬೆಳೆದು ದೊಡ್ಡವರಾದ ಬಳಿಕ ಕೂಡ ಕೃಷ್ಣ ದೇವರ ಮೇಲಿನ ಭಕ್ತಿ ಮಾತ್ರ ಅದೇ ಮಟ್ಟದಲ್ಲಿತ್ತು. ಶನಿ ದೇವರು ದೊಡ್ಡವರಾದ ಬಳಿಕ ಅವರು ಚಿತ್ರರಥನ ಮಗಳನ್ನು ಮದುವೆಯಾದರು. ದಿವ್ಯ ಶಕ್ತಿಯನ್ನು ಹೊಂದಿದ್ದ ಶನಿದೇವರ ಪತ್ನಿ ಹೆಸರು ಧಾಮಿನಿ ಆಗಿತ್ತು. ತನ್ನ ಸೌಂದರ್ಯದಷ್ಟೇ ಆಕೆ ಬುದ್ಧಿವಂತೆ ಆಗಿದ್ದರು. ಶನಿ ದೇವರ ಪತ್ನಿ ಧಾಮಿನಿ ಗಂಡು ಮಗು ಬೇಕೆಂಬ ಇಚ್ಛೆ ವ್ಯಕ್ತಪಡಿಸಿದರು. ತನ್ನ ಇಚ್ಛೆಯನ್ನು ಮನಸ್ಸಿನಲ್ಲಿ ಇಟ್ಟು ಕೊಂಡಿದ್ದ ಧಾಮಿನಿ ಅವರು ಇದನ್ನು ಶನಿ ದೇವರ ಮುಂದೆ ಹೇಳಿಕೊಂಡರು. ಈ ವೇಳೆ ಶನಿ ದೇವರು ಮಾತ್ರ ಕೃಷ್ಣ ದೇವರ ಧ್ಯಾನದಲ್ಲಿ ಮಗ್ನರಾಗಿದ್ದರು ಮತ್ತು ಅವರಿಗೆ ಅಡ್ಡಪಡಿಸುವುದು ಬೇಕಿರಲಿಲ್ಲ. ಆಕೆ ಶನಿ ದೇವರನ್ನು ಧ್ಯಾನ್ಯದಿಂದ ಹೊರಬರುವಂತೆ ತುಂಬಾ ಪ್ರಯತ್ನ ಮಾಡುವರು. ಆದರೆ ಆಕೆಯ ಪ್ರಯತ್ನವೆಲ್ಲವೂ ನೀರಿನಲ್ಲಿಟ್ಟ ಹೋಮದಂತೆ ಆಗುವುದು. ಧಾಮಿನಿ ದೇವಿಯು ಶನಿ ದೇವರಿಗೆ ಶಾಪ ನೀಡುವರು. ತನ್ನತ್ತ ನೋಡದೆ, ತನ್ನ ಮಾತನ್ನು ಕೇಳದೆ ಸಂಪೂರ್ಣವಾಗಿ ತನ್ನನ್ನು ಕಡೆಗಣಿಸಿರುವ ಶನಿ ದೇವರ ವರ್ತನೆಯಿಂದ ಕೋಪಗೊಂಡ ಧಾಮಿನಿ ದೇವಿಯು ಶನಿ ದೇವರಿಗೆ ಶಾಪ ನೀಡುವರು. ನೀವು ಇನ್ನು ಮುಂದೆ ಯಾರನ್ನು ನೋಡಿದರೂ ಅವರು ಧ್ವಂಸ ವಾಗಲಿ ಎಂದು ಶಾಪ ನೀಡುವರು. ಧಾಮಿನಿ ದೇವಿಯ ಮಾತನ್ನು ಕೇಳದೆ ಪದೇ ಪದೇ ಆಕೆ ಯನ್ನು ಕಡೆಗಣಿಸಿರುವ ಶನಿ ದೇವರು ದೃಷ್ಟಿ ಬೀರಿದರೆ ಆಗ ಜನರ ಮೇಲೆ ನಕಾರಾತ್ಮಕ ಪರಿಣಾಮ ಆಗುವುದು ಎಂದು ಹೇಳಲಾಗುತ್ತದೆ. ಶನಿ ದೇವರ ದೃಷ್ಟಿಯು ಜನರ ಮೇಲೆ ಬಿದ್ದರೆ ಆಗ ಅವರು ಸಮಸ್ಯೆಗಳನ್ನು ಎದುರಿಸುವರು ಎಂದು ಹೇಳ ಲಾಗುತ್ತದೆ. ಇದರಿಂದಾಗಿಯೇ ಶನಿ ದೇವರು ಕೆಟ್ಟವರಲ್ಲ, ಅವರು ಬೀರುವ ದೃಷ್ಟಿ ಮಾತ್ರ ಕೆಟ್ಟದಾಗಿರುತ್ತದೆ ಎಂದು ಈ ಕಾರಣದಿಂದಲೇ ಹೇಳ ಲಾಗುತ್ತದೆ.

ಶನಿ ದೇವರ ಪತ್ನಿಯು ಪಶ್ಚಾತ್ತಾಪ ಪಟ್ಟರು ಶನಿದೇವರು ಧ್ಯಾನದಿಂದ ಎದ್ದು ಕಣ್ಣು ತೆರೆದಾಗ ತನ್ನ ಪತ್ನಿಯು ಕ್ರೋಧ ಗೊಂಡಿರುವುದನ್ನು ನೋಡಿದರು ಮತ್ತು ಆಕೆಯ ಕ್ಷಮೆ ಕೇಳಲು ಬಯಸಿದರು. ಧಾಮಿನಿ

ದೇವಿಯು ಇದನ್ನು ಅರ್ಥ ಮಾಡಿ ಕೊಂಡರು ಮತ್ತು ತಾನು ನೀಡಿರುವ ಶಾಪದ ಬಗ್ಗೆ ಪಶ್ಚಾತ್ತಾಪ ಪಟ್ಟು ಕೊಂಡರು. ತನ್ನ ಶಾಪವನ್ನು ಹಿಂದಕ್ಕೆ ಪಡೆಯುವಂತಹ ಯಾವುದೇ ಶಕ್ತಿಯು ಆಕೆಯಲ್ಲಿ ಇರಲಿಲ್ಲ. ಆಕೆ ತನ್ನ ಶಾಪದ ಬಗ್ಗೆ ಏನೂ ಮಾಡು ವಂತಿರಲಿಲ್ಲ. ಆದರೆ ಶನಿ ದೇವರನ್ನು ಮನವೊಲಿಸಲು ಪ್ರಯತ್ನಿಸಿದರು. ಅದಾಗ್ಯೂ,ತನ್ನ ಭಕ್ತರ ಮೇಲೆ ಈ ಶಾಪದ ಪರಿಣಾಮ ಬೀರದಂತೆ ತಡೆಯಲು ಅವರು ಯಾವಾಗಲೂ ಅವರನ್ನು ನೋಡುವುದಿಲ್ಲ ಮತ್ತು ಕೆಳಗೆ ನೋಡುತ್ತಲಿರುತ್ತಾರೆ.

### ಶನಿ ಕೆಟ್ಟವನೇ?


ಶನಿ ಬರೀ ಕಷ್ಟಗಳನ್ನೇ ಕೊಡುತ್ತಾನೆಯೇ? ಅವನಲ್ಲಿ ಕರುಣೆಯೇ ಇಲ್ಲವೆ?

ಅವನು ಕ್ರೂರಿಯೇ ಎಂಬೆಲ್ಲ ಸಂಶಯಗಳು ಎಲ್ಲರ ಮನದಲ್ಲೂ ಇರುತ್ತಾನೆ. ಶನೈಶ್ವರ ಬಂದನೆಂದರೆ ಯಾರಿಗೂ ತಿಳಿಯದೆ ಮಾಡಿರುವ ಪಾಪಕರ್ಮಗಳು ರಹಸ್ಯವನ್ನೆಲ್ಲಾ ಹೊರಗೆ ತರುವನೆ ಶನೈಶ್ವರ ಸ್ವಾಮಿ. ಯಾರಿಗಾದರೂ ಕೋಪ ಬಂದಾಗ ''ಶನಿ'' ಎಂದು ಬೈಯುವುದನ್ನು ಕೇಳಿದ್ದೇವೆ. ಅಯ್ಯೋ ಅವನೊಬ್ಬ ಶನಿಯಂಥವನು, ಇವನದೊಂದು ಶನಿಕಾಟದ ಥರಾ ಎನ್ನುವುದನ್ನೂ ಕೇಳುತ್ತಿರುತ್ತೇವೆ.

ನೀಲಾಂಜನ ಸಮಾಭಾಸಂ।ರವಿಪುತ್ರಂ ಯಮಾಗ್ರ ಜಂಭಾಯಾ ಮಾರ್ತಾಂಡ ಸಂಭೂತಂ। ತಂ ನಮಾಮಿ ಶನೈಶ್ವರಂ ಎಂದು ಶನಿಯನ್ನು ಸ್ತುತಿಸುತ್ತಾರೆ. ಶನಿ ನೀಲವರ್ಣದವನು, ಸೂರ್ಯಪುತ್ರ.ಯಮನಿಗೆ ಅಣ್ಣ. ಸೂರ್ಯನಿಗೆ ಇಬ್ಬರು ಹೆಂಡತಿಯರು. ಒಬ್ಬಳು ಸಂಜ್ಞಾದೇವಿ ಮತ್ತೊಬ್ಬಳು ಛಾಯಾದೇವಿ ಈ ಸಂಜ್ಞಾದೇವಿಯ ನೆರಳೆ ಛಾಯಾದೇವಿ. ಈ ಛಾಯಾದೇವಿಯ ಮಗನೇ ಶನಿ. ಸೂರ್ಯನು ತಂದೆಯೇ ಆದರೂ ಶನಿಗೂ ಸೂರ್ಯನಿಗೂ ಬದ್ಧವೈರತ್ವ. ಜಾತಕದಲ್ಲಿ ಶನಿಯೊಂದಿಗೆ ಸೂರ್ಯ ಯತಿ ಯೋಗದಲ್ಲಿದ್ದರೆ ಅಥವಾ ಸೂರ್ಯನು ಶನಿಯ ದೃಷ್ಟಿಗೆ ಪಾತ್ರನಾಗಿದ್ದರೆ ಅಂಥಹವರಿಗೆ ತಂದೆಯ ಭಾಗ್ಯ ಕಡಿಮೆ. ತಂದೆಯಿಂದ ದೂರ ಇರುವ ಯೋಗ ಅಥವಾ ತಂದೆಯನ್ನೇ ಕಳೆದು ಕೊಳ್ಳುವ, ಯೋಗ ಅಥವಾ ತಂದೆಯೊಡನಿದ್ದರೂ ಪರಸ್ಪರ ಸಂಬಂಧ ಸೌಹಾರ್ದತೆಯಿಂದ ಕೂಡಿರುವುದಿಲ್ಲ. ಏತಿ ಎಂದರೆ ಪ್ರೀತಿ ಎನ್ನುವಂಥ ಒಡಕು ಮನಸ್ಸು, ಯಾವಾಗಲೂ ಹಣಾಹಣಿ ಜಗಳ, ತಂದೆ ಹೇಳಿದ್ದು ಮಗನಿಗೆ ರುಚಿ ಸುವುದಿಲ್ಲ. ಮಗ ಹೆಳಿದ್ದು ತಂದೆಗೆ ಪಥ್ಯವಾಗುವುದಿಲ್ಲ. ಶನಿಯ ದೃಷ್ಟಿ ಬಿದ್ದರೆ ಚಂದ್ರ ಮಂಕಾಗುತ್ತಾನೆ. ಶನಿ,ಸೂರ್ಯನ ರಾಶಿಯಾದ ಸಿಂಹದಲ್ಲಿ ಕುಜನ ರಾಶಿಯಾದ ಮೇಷ ಮತ್ತು ವೃಶ್ಚಿಕದಲ್ಲಿ ಇದ್ದರೆ ಬಲು ಕ್ರೂರಿಯಾಗಿರುತ್ತಾನೆ. ಶತ್ರುವಿನ ಮನೆಯಲ್ಲಿ ನಾವು ಅನಿವಾರ್ಯವಾಗಿ ಉಳಿಯಬೇಕಾಗಿ ಬಂದಾಗ ಹೇಗೆ ಚಡಪಡಿಸು ತ್ತೇವೋ ಹಾಗೆಯೇ, ಶನಿಯೂ ಚಡಪಡಿಸುತ್ತಾನೆ. ಶನಿಗೆ ಯೋಗಕಾರಕ ಶುಕ್ರ, ಅಪ್ತಮಿತ್ರ ಬುಧ, ಹೀಗಾಗಿ ಶನಿಯು ವೃಷಭ, ತುಲಾ ಹಾಗೂ ಮಿಥುನ ಕನ್ಯಾದಲ್ಲಿ ನೆಮ್ಮದಿಯಾಗಿ ನಿರಾತಂಕವಾಗಿ ಇರುತ್ತಾನೆ. ಧನಸ್ಸು, ಮೀನ ಹಾಗೂ ಕಟಕದಲ್ಲಿ ಮುಗುಮ್ಮಾಗಿ ಇರುತ್ತಾನೆ. ಶನಿಯ ಸಂಚಾರ ಒಂದು ರಾಶಿ ಯಿಂದ ಮತ್ತೊಂದು ರಾಶಿಗೆ ತೆಗೆದುಕೊಳ್ಳುವ ಸಮಯ ಎರಡೂವರೆ ವರ್ಷಗಳು ಹೀಗಾಗಿ ಗೋಚಾರದಲ್ಲಿ ಗುರುಬಲವನ್ನು ಹೇಗೆ ನೋಡುತ್ತಾರೋ ಹಾಗೆಯೇ ಶನಿಯ ಸಂಚಾರಕ್ಕೂ ಅಷ್ಟೇ ಮಹತ್ವವಿದೆ. ಶನಿ ಏನನ್ನು ಕೊಟ್ಟರೂ ಸುಮ್ಮನೆ ಕೊಡುವುದಿಲ್ಲ. ಕಷ್ಟದ ಪರಂಪರೆಯನ್ನೇ ಮೊದಲು ಕೊಟ್ಟು ಅದರಲ್ಲಿ ನಮ್ಮನ್ನು ಬೇಯಿಸಿ ಬಸವಳಿಸಿ ನಂತರ ಸಿರಿಸಂಪತ್ತನ್ನು ಕೊಡುತ್ತಾನೆ. ಜೀವನದ ಕಠೋರತೆಯನ್ನು ಅರ್ಥಮಾಡಿಸಿ, ಆಮೇಲೆ ಅನುಕೂಲಗಳನ್ನು ಕೊಡುತ್ತಾನೆ. ಆಗ ನಾವು ಹಣವನ್ನು ವಿತರಣೆಯಾಗಿ ಖರ್ಚುಮಾಡುತ್ತೇವೆ ಪೋಲು ಮಾಡುವುದಿಲ್ಲ. ಶನಿ ಎಷ್ಟು ಕ್ರೂರಿಯೋ ಕೊಡುವಾಗ ಅಷ್ಟೇ ಕೊಡುಗೈ ದಾನಿ. ಶನಿ ಸಿರಿಯನ್ನು ಕೊಟ್ಟರೂ, ಅಧಿಕಾರವನ್ನು ಕೊಟ್ಟರೂ ನಮಗೆ 30 ವರ್ಷ ಆದ ನಂತರವೇ ಕೊಡುತ್ತಾನೆ. ಶನಿ, ಯಾವಾಗಲೂ ನಿಧಾನ. ನವಗ್ರಹಗಳಲ್ಲಿ ಸೂರ್ಯ ರಾಜನಾದರೆ ಶನಿ ಪೋಲಿಸಿನಂಥವನು. ಬೇರೆ ಯಾವ ಗ್ರಹಗಳಿಗೂ ಶಿಕ್ಷಿಸುವ ಅಧಿಕಾರ ಇಲ್ಲ. ಶನಿಗೆ ಮಾತ್ರವೇ ಶಿಕ್ಷಿಸುವ ಅಧಿಕಾರವಿರುವುದು. ಹೀಗಾಗಿ ಶನಿಯ ಸರದಿ ಬಂದಾಗ ಹಿಂದೆ ಮಾಡಿದ್ದ ತಪ್ಪುಗಳು ಕರ್ಮಗಳೆಲ್ಲ ಎದ್ದು ನಿಲ್ಲುತ್ತವೆ.ನಾವು ಮಾಡಿದ್ದ ತಪ್ಪುಗಳಿಗೆಲ್ಲ ಯೋಗ್ಯತಾನುಸಾರ ಶಿಕ್ಷೆ ವಿಧಿಸುತ್ತಾನೆ. ನಮ್ಮನ್ನು ಹಣುಗಾಯಿ ನೀರುಗಾಯಿ ಮಾಡುತ್ತಾನೆ. ಆದರೆ ನಮ್ಮನ್ನು ಬಿಟ್ಟು ಹೋಗುವಾಗ ಬದುಕಿಗೆ ಏನಾದರೂ ಒಳ್ಳೆಯದು ಮಾಡಿಯೇ ಹೋಗುತ್ತಾನೆ. ಶನಿ ಎಂದೂ ನಮ್ಮನ್ನು ಬರಿದು ಮಾಡಿ ಹೋಗು ವುದಿಲ್ಲ.

### ಶನಿದೇವರು ಕ್ರೂರನಲ್ಲ..!

''ಸಾಡೇಸಾತ್'' ಶನಿದೋಷ ಎಂದರೇನು? ಶನೇಶ್ವರ ಕೊಡೋ 7 ½ ವರ್ಷ ದೋಷಕ್ಕೆ ಸಾಡೇಸಾತ್ ಶನಿ ಎಂದು ಕರೆಯುತ್ತಾರೆ. ಅಂದರೆ ಶನಿ ಒಂದು ಮನೆಯಲ್ಲಿ 2 ½ ವರ್ಷ ಇರ್ತಾನೆ, ಅವನಿರುವ ಮನೆ, ಅವನಿರುವ ಮನೆಯ ಎರಡನೇ ಮನೆ, ಅವನಿರುವ ಮನೆಯಿಂದ 12 ನೇ ಮನೆಗೆ ಅದು ದೋಷ ಮಾಡ್ತಾನೆ. ಈ ಮೂರು ಮನೆಯಲ್ಲಿ ತಲಾ 2 ½ ವರ್ಷದ ಹಾಗೆ, ಮೂರು ಸೇರಿ 7 ½ ವರ್ಷ ಇರ್ತಾನೆ, ಅದಕ್ಕೆ ಸಾಡೇಸಾತ್ ಶನಿ ದೋಷ ಅನ್ನೋದು..! ಉದಾಹರಣೆಗೆ : ಈಗ ಮಕರ ರಾಶಿಯಲ್ಲಿ ಶನಿದೇವರು ಇದ್ದಾರೆ. ಮಕರ ರಾಶಿಯ ಶನಿ ಮಕರರಾಶಿಗೆ, ಮಕರ ರಾಶಿಯಿಂದ ಎರಡನೇ ಮನೆ ಮತ್ತು 12 ನೇ ಮನೆಗೆ ಮಕರ ರಾಶಿಯಿಂದ ಎರಡನೆ ಮನೆ ಕುಂಭ ರಾಶಿ ಹನ್ನೆರಡನೇ ಮನೆ ಧನಸ್ಸು ರಾಶಿ ಶನಿಗ್ರಹವು ತಾನಿರುವ ಮನೆ ತಾನಿರುವ ಮನೆಯಿಂದ ಎರಡನೇ ಮನೆ ಮತ್ತು ಹನೇರಡನೇ ಮನೆಗೆ ಶನಿದೋಷ ಸಾಡೇಸತ್ ಶನಿದೋಷ ಉಂಟು ಮಾಡುತ್ತಾನೆ... ಹೀಗೆ ಸಾಡೇಸಾತ್ ಶನಿ ಇರುತ್ತದೆ. ಶನಿದೇವರು ಸಾಡೇಸಾತ್ ಬಂದರೆ ಕೆಟ್ಟದು ಅಂದುಕೊಳ್ಳೋದು ತಪ್ಪು. ಸಾಡೇಸಾತ್ ಶನಿಯು ತನ್ನವರು ಯಾರು..? ಕಷ್ಟ ಬಂದಾಗ ಯಾರು ಜೊತೆಯಲ್ಲಿದ್ದಾರೆ, ಯಾರು ಇರೋಲ್ಲ? ಸುಖ ಬಂದಾಗ ಯಾರು ಬರ್ತಾರೆ? ಯಾರನ್ನು ನಂಬಬಹುದು. ಯಾರನ್ನು ನಂಬಬಾರದು? ಇವೆಲ್ಲಾ ತುಂಬಾ ಚೆನ್ನಾಗಿ ತೋರಿಸಿ ಹೋಗ್ತಾರೆ... ಸಾಡೇಸಾತ್ ಶನಿಯಿಂದ ಎಷ್ಟೇ ಕಷ್ಟ ಬಂದ್ದಿದ್ದರೂ, ''ಸಾಡೇಸಾತ್ ಬಿಟ್ಹೋಗೋವಾಗ ತುಂಬಾ ಶುಭಫಲಗಳನ್ನುಂಟು ಮಾಡಿಯೇ ಹೋಗುವುದು ! ಸಾಡೇಸಾತ್'' ಶನಿಯು ಯಾರಿಗೆ ದುಷ್ಫಲ ಕೊಡೋದು ಜಾಸ್ತಿ..? ನಾನು ಅನ್ನೋ ಅಹಂ ಉಳ್ಳವರಿಗೆ. ದುಃಶ್ಚಟಗಳ ದಾಸರಾದವರಿಗೆ...! ಸ್ತ್ರೀಯರಿಗೆ ಮೋಸ ಮಾಡಿದವರಿಗೆ ! ಮೋಸದ ಜೀವನ ಮಾಡುತ್ತಿರುವವರಿಗೆ! ತಂದೆ ತಾಯಿಯನ್ನು ತುಚ್ಚವಾಗಿ ನೋಡಿ ಕೊಂಡವರಿಗೆ ಮತ್ತು ಅವರ ಸೇವೆ ಮಾಡದವರಿಗೆ! ಮನೆ ಮತ್ತು ಮನೆದೇವರು, ದೇವರನ್ನು ಮರೆತವರಿಗೆ! ಇತ್ಯಾದಿ ಇಂಥವರಿಗೆ ''ಶನಿದೇವರು'' ತುಂಬಾ ಕಷ್ಟ ಕೊಟ್ಟು ಬುದ್ಧಿ ಕಲಿಸುವ ಮಹಾಗ್ರಹ! ಶನಿ ದೇವರಿಗೆ ಭಿಕ್ಷುಕನನ್ನು ಕೋಟ್ಯಾಧಿಪತಿಯನ್ನಾಗಿ ಮಾಡುವುದು ಗೊತ್ತು ! ಹಾಗೇ ಕೋಟ್ಯಾಧಿಪತಿಯನ್ನು ಭಿಕ್ಷುಕನನ್ನಾಗಿ ಮಾಡುವುದೂ ಗೊತ್ತು..!




**ಪುಸ್ತಕಾವಲೋಕನ**

**ಪುಸ್ತಕದ ಹೆಸರು : ಹರಿದಾಸರ ಲೋಕನೀತಿ**

**ಲೇಖಕರು : ಡಾ|| ಬಿ.ಎಸ್. ಅನಿಲ್‌ಕುಮಾರ ಬೊಮ್ಮಘಟ್ಟ**

**ದೂರವಾಣಿ ಸಂಖ್ಯೆ : 99024 00588**

**ಪುಟಗಳು : 452**

**ಬೆಲೆ : ರೂ. 500/-**

**ಪ್ರಕಾಶಕರು : ನಿರಂತರ, ಬೆಂಗಳೂರು.**

ಬಳ್ಳಾರಿ ಮೂಲದ ಡಾ|| ಬಿ.ಎಸ್. ಅನಿಲಕುಮಾರ ಬೊಮ್ಮಘಟ್ಟ ರಚಿಸಿರುವ ಈ ಮಹಾಪ್ರಬಂಧದಲ್ಲಿ ಹರಿದಾಸರ ಲೋಕನೀತಿ ಕೀರ್ತನೆಗಳ ಕುರಿತಂತೆ ವಿಮರ್ಶೆಯಿದ್ದು, ಅನುಸಂಧಾನದ ಆಧುನಿಕ ಮಾದರಿಗಳಿಂದ ಕೂಡಿದೆ. ಅವರ ಸಂಶೋಧನಾ ಕೃತಿಯ ಪುನರ್ ಅವತರಣಿಕೆಯಾಗಿದೆ. ಭಕ್ತಿ, ಜ್ಞಾನ, ವೈರಾಗ್ಯ ಹಾಗೂ ಲೋಕನೀತಿ ಮತ್ತು ಸಮಾಜ ಸುಧಾರಣೆಯ ಅಂಶಗಳನ್ನೊಳಗೊಂಡ ಹರಿದಾಸರ ಕೀರ್ತನೆಗಳು ಜನಮನ್ನಣೆ ಗಳಿಸಿದ್ದು, ಸರಳತೆಯಿಂದಾಗಿ ಪಾಮರರನ್ನು ತನ್ನತ್ತ ಸೆಳೆದಿದೆ.

ಹರಿದಾಸರ ಕೀರ್ತನೆಗಳಲ್ಲಡಗಿರುವ ಸಮಾಜ ಮುಖಿ ಚಿಂತನೆಗಳನ್ನು,ಉನ್ನತ ಜೀವನ ಮೌಲ್ಯಗಳನ್ನು ಹೆಕ್ಕಿ ತೆಗೆದು ಅವುಗಳನ್ನು ವಿಶ್ಲೇಷಿಸಿ ಹೊಸ ನೋಟಗಳನ್ನು ಲೇಖಕರು ಈ ಕೃತಿಯಲ್ಲಿ ನೀಡಿದ್ದಾರೆ. ಕೀರ್ತನೆಗಳಲ್ಲಿರುವ ಸಾರ್ವಕಾಲಿಕ ಮೌಲ್ಯಗಳನ್ನು ಎತ್ತಿ ತೋರಿಸಿದ್ದಾರೆ. ಜೀವನ ಸಾರವನ್ನು ಓದುಗರಿಗೆ ಉಣಬಡಿಸಿದ್ದಾರೆ. ದಿನನಿತ್ಯದ ಜಂಜಾಟಗಳಿಗೆ ಕೀರ್ತನೆಗಳು ಹೇಗೆ, ಉತ್ತರಗಳನ್ನು ಕೊಟ್ಟಿದೆ ಎಂಬುದನ್ನು ಈ ಕೃತಿಯಲ್ಲಿ ತೋರಿಸಿ ಕೊಟ್ಟಿದ್ದಾರೆ.

ಹತ್ತು ಅಧ್ಯಾಯಗಳಿಂದ ಕೂಡಿದ ಈ ಗ್ರಂಥದಲ್ಲಿ ಹೊಸ ಶೋಧನೆಯಿದೆ. ಹೊಸ ಚಿಂತನೆಗಳಿವೆ. ಇಷ್ಟೆಲ್ಲಾ ಹರಿದಾಸರ ಕೀರ್ತನೆಗಳಲ್ಲಿ ಇವೆಯಾ!ಎಂದು ನಮ್ಮನ್ನು ಅಚ್ಚರಿಗೊಳಿಸುತ್ತದೆ. ಹೊಸ ತಲೆಮಾರಿನ ಯುವ ಜನಾಂಗಕ್ಕೆ ದಿಕ್ಸೂಚಿಯಾಗಬಲ್ಲಂತಹ ಕೃತಿಯಿದಾಗಿದೆ. ಇದೊಂದು ಗಂಭೀರವಾದ ಅಧ್ಯಯನ ಕೃತಿಯಾಗಿದ್ದು, ಇದರಲ್ಲಿ ತೌಲನಿಕ ಅಧ್ಯಯನವಿದೆ. ಸಂಸ್ಕೃತಿ ಚಿಂತನೆಯಿದೆ, ಹರಿದಾಸರು ನೀಡಿರುವ ಸಂದೇಶವನ್ನು ಜನತೆಗೆ ಮುಟ್ಟಿಸುವ ಕಳಕಳಿಯಿಂದ ಕೂಡಿರುವ ಈ ಗ್ರಂಥ, ವೈಜ್ಞಾನಿಕ ದೃಷ್ಟಿಯಿಂದ ಕೂಡಿದೆ. ಹರಿದಾಸರ ಕೀರ್ತನೆಗಳನ್ನು ವಿಶ್ಲೇಷಿಸಿ ಹೊಸಬಗೆಯಲ್ಲಿ ವ್ಯಾಖ್ಯಾನ ಮಾಡಲಾಗಿದೆ.


ಈ ಗ್ರಂಥ ಹರಿದಾಸ ಸಾಹಿತ್ಯ ಪ್ರಿಯರಿಗಷ್ಟೇ ಅಲ್ಲ ಜೀವನ ಶ್ರದ್ಧೆಯುಳ್ಳವರಿಗೆ ಹಾಗೂ ಜ್ಞಾನಪಿಪಾಸುಗಳಿಗೆ ಉಪಯುಕ್ತವಾಗಬಲ್ಲದಾಗಿದೆ. ಸಾಹಿತ್ಯ ಮತ್ತು ಸಂಸ್ಕೃತಿ ಚಿಂತಕರಿಗೆ ಹಲವು ರೀತಿಗಳಲ್ಲಿ ನೆರವಾಗಬಲ್ಲಂತಹ ಕೃತಿಯನ್ನು ನೀಡಿರುವ ಡಾ || ಅನಿಲ್‌ಕುಮಾರ್ ಬೊಮ್ಮಘಟ್ಟ ಅಭಿನಂದನಾರ್ಹರಾಗಿದ್ದಾರೆ.

ಆಕರ್ಷಕ,ರಂಜನೀಯವೆನಿಸಿದ,ಮಾರಾಟವಾಗಬಹುದಾದಂತಹ ಕೃತಿಗಳನ್ನು ಪ್ರಕಟಿಸುವ ಪುಸ್ತಕ ಪ್ರಕಾಶಕರು, ಇಂತಹ ಅಪರೂಪದ ಗ್ರಂಥವನ್ನು ಪ್ರಕಾಶಪಡಿಸಿದ 'ನಿರಂತರ'ದ ಮಾಲೀಕರು ಸಹ ಅಭಿನಂದನಾರ್ಹರಾಗಿರುವರು, 424 ಪುಟಗಳಿಂದ ಕೂಡಿರುವ ಈ ಪುಸ್ತಕದ ಮುದ್ರಣ ಹಾಗೂ ವಿನ್ಯಾಸವು ಸೊಗಸಾಗಿದೆ. ಮಂತ್ರಾಲಯದ ಶ್ರೀಗಳಾದ ಸುಬುದೇಂದ್ರ ತೀರ್ಥರ ಅನುಗ್ರಹ ಸಂದೇಶ ಕೃತಿಗೆ ಕಳಸವಿಟ್ಟಂತಿದೆ.

-ಬಿ.ಎಸ್. ರಾಮಮೂರ್ತಿ

94497 50618

## ನೀತಿ ಕಥೆ



# ಯದ್ಭಾವಂ ತದ್ಭವತಿ

- ಶ್ರೀಮತಿ. ಸುಧಾಮಧುಸೂದನ್
99642 75537


ಪೂರ್ವದಲ್ಲಿ ಕಾಶಿ ಎಂಬ ಪಟ್ಟಣದಲ್ಲಿ ಒಬ್ಬ ಬಡ ಬ್ರಾಹ್ಮಣನಿದ್ದನು. ಅವನು ಪರಮ ಸ್ವಾಮಿ ಭಕ್ತ, ಅವನು ದಿನವೂ ತನ್ನ ಮನೆ ಹತ್ತಿರದಲ್ಲಿದ್ದ ಕೊಳದಲ್ಲಿ ಹೊತ್ತಿಗೆ ಮುಂಚೆಯೇ ಎದ್ದು ಸ್ನಾನಕ್ಕೆ ಹೋಗುತ್ತಿದ್ದನು. ಅವನು ಒಂದೊಂದು ಸಲವು ಮುಳುಗು ಹಾಕಿ ಸ್ನಾನಮಾಡುವಾಗ ಗಂಗೆ, ಯಮುನೆ, ಗೋದಾವರಿ, ಸರಸ್ವತಿ, ನರ್ಮದಾ,ಸಿಂಧು, ಕಾವೇರಿ ಎನ್ನುತ್ತಾ ಮುಳುಗು ಹಾಕಿ ಹಾಕಿ ಎದ್ದು ಆ ನದಿ ಯಲ್ಲಿಯೇ ಸ್ನಾನ ಮಾಡುತ್ತಿರುವೆ ನೇನೋ ಎಂಬ ಭಾವನೆಯಲ್ಲಿ ನಮ ಸ್ಕಾರ ಮಾಡಿ ಎದ್ದು ನಂತರ ಅಲ್ಲಿಯೇ ತನ್ನ ಸಂಧ್ಯಾವಂದನೆಯನ್ನು ನಿಷ್ಠೆ ಯಿಂದ ಮಾಡಿ ನಂತರ ಮನೆಗೆ ಬಂದು ಮಿಕ್ಕ ಅನುಷ್ಠಾನ ಗಳನ್ನು ಮುಗಿಸುತ್ತಿದ್ದನು.

ಹೀಗೇ ದಿನಾ ಸ್ನಾನದಲ್ಲಿಯೇ ಅವನು ಎಲ್ಲಾ ನದಿಗಳಲ್ಲಿ ಮಿಂದಂತೆ ಭಾವಿಸಿ ತನ್ನ ಮನೆ ಬಳಿಯ ಕೊಳದಲ್ಲೆ ಎಲ್ಲಾ ಕಾರ್ಯವನ್ನು ನೆರವೇರಿಸುತ್ತಿದ್ದನು ಭಕ್ತಿಯಲ್ಲಿ ಹೀಗೇ ದಿನಕಳೆ ದಂತೆ ಆ ಬ್ರಾಹ್ಮಣನಿಗೆ ವಯಸ್ಸಾಗಿ ದೇವರಪಾದ ಸೇರಿದನು.

ಅದೇ ಊರಿನಲ್ಲಿ ಇನೊಬ್ಬ ಬ್ರಾಹ್ಮಣನು ಇದ್ದನು. ಅವನು ಬಹಳ ಶ್ರೀಮಂತನಾಗಿದ್ದನು. ಅವನು ಯಾವುದೇ ಒಂದು ವಿಶೇಷವಾದ ದಿನ ಬಂದರೂ ಅವನು ಗಂಗೆಯಲ್ಲಿ ಮಿಂದು ಬಂದು ಪೂಜೆ ಮಾಡುತ್ತಿದ್ದನು. ಹಾಗೆಯೇ ಅವನು ಎಲ್ಲಾ ಪುಣ್ಯ ನದಿಗಳಲ್ಲಿ ಸ್ನಾನ ಮಾಡುತ್ತಿದ್ದನು. ಹಬ್ಬಗಳಲ್ಲಿ ಕೃಷ್ಣನ ಹಬ್ಬದಂದು ಯಮುನೆಯಲ್ಲಿ, ಪ್ರಯಾಗದಲ್ಲಿ, ನರ್ಮದೆ ಯಲ್ಲಿ, ತುಲಾಮಾಸದಲ್ಲಿ ಕಾವೇರಿ ನದಿಯಲ್ಲಿ ಎಂದೂ ಹೀಗೆ ಹತ್ತು ಹಲವಾರು ಊರ ತೀರ್ಥಗಳಲ್ಲಿ ಸ್ನಾನವನ್ನು ಮಾಡು ತ್ತಿದ್ದನು.ಅವನೂ ಸಹ ವಯಸ್ಸಾದಂತೆ ತನ್ನ ಇಹಲೋಕ ವನ್ನು ತ್ಯಜಿಸಿದನು.

ಈ ಇಬ್ಬರೂ ಬ್ರಾಹ್ಮಣರು ವೈಕುಂಠದಲ್ಲಿ ಒಬ್ಬರಿ ಗೊಬ್ಬರು ಎದುರಾಗಿ ಶ್ರೀಮನ್ನಾರಾಯಣನ ಸಮ್ಮುಖದಲ್ಲಿ ನಿಂತರು. ನಾರಾಯಣನು ಈ ಬಡಬ್ರಾಹ್ಮಣನಿಗೆ ಅಧಿಕ ಪುಣ್ಯ ಫಲವಿರುವುದರಿಂದ ಅವನು ಸ್ವರ್ಗವನ್ನೂ ಹಾಗೂ ಆಗರ್ಭ ಶ್ರೀಮಂತನು ಬ್ರಾಹ್ಮಣನು ನರಕದಲ್ಲಿ ಇದ್ದು ಬರಬೇಕೆಂದು ಆದೇಶ ಕೊಟ್ಟನು.ಅದನ್ನು ಕೇಳಿ ಈ ಶ್ರೀಮಂತನು ನಾರಾಯಣ ನಲ್ಲಿ ಹೀಗೆ ಪ್ರಶ್ನಿಸಿದನು "ಅಯ್ಯಾ ನಾರಾಯಣ, ನಾನು ಎಲ್ಲಾ ಹಬ್ಬ, ಹರಿದಿನಗಳಲ್ಲಿ ವಿಶೇಷ ದಿನಗಳಲ್ಲಿ ಎಲ್ಲಾ ಪುಣ್ಯ ನದಿಗಳಲ್ಲಿ ಮೀಯುತ್ತಿದ್ದ, ನಿನ್ನ ದರುಶನ ಮಾಡುತ್ತಿದ್ದೆ, ನಿನ್ನನೇ ಹಾಡಿ ಹೊಗಳುತ್ತಿದ್ದೆ,ಆದರೂ ನನಗೆ ನರಕ ತೋರಿ ಸುತ್ತೀಯ ಆದರೆ ಈ ಬಡ ಬ್ರಾಹ್ಮಣನೋ ತನ್ನ ಮನೆಯ ಮುಂದೆ ಇದ್ದ ಕೊಳದಲ್ಲಿ ಸ್ನಾನ ಮಾಡುತ್ತಿದ್ದ ಮತ್ತು ಪೂಜೆ ಮಾಡುತ್ತಿದ್ದ, ಅವನಿಗೆ ನೀನು ಸ್ವರ್ಗ ಕೊಟ್ಟಿದ್ದೀಯಾ? ಇದು ನ್ಯಾಯವೇ?

ಅದಕ್ಕೆ ನಗುತ್ತಾ ನಾರಾಯಣನು ಅಯ್ಯಾ ಬ್ರಾಹ್ಮಣ ನೀನು ಬರೀ ವಿಶೇಷ ದಿವಸದಲ್ಲಿ ಮಾತ್ರ ನದಿಸ್ನಾನ ಮಾಡುತ್ತಿದ್ದೆ. ಆದರೆ ಈ ಬಡಬ್ರಾಹ್ಮಣನು ದಿನವೂ ತಾನು ಸ್ನಾನ ಮಾಡುತ್ತಿದ್ದ ನೀರಿನಲ್ಲಿ ಕಾವೇರಿ, ಗೋದಾವರಿ, ನರ್ಮದಾ,ಗಂಗೆ, ಯಮುನೆ ಎಂದು ಹೀಗೆ ನಾನಾ ಪುಣ್ಯ ನದಿಯನ್ನು ಆಹ್ವಾನಿಸಿ ಸ್ನಾನ ಮಾಡಿ ನನಗೆ ಪೂಜೆ ಮಾಡುತ್ತಿದ್ದ. ಅದ್ದರಿಂದ ಅವನಿಗೆ ಪುಣ್ಯವು ಜಾಸ್ತಿ "ನನ್ನ ನೋಡಲು ಅಥವಾ ಸ್ನಾನ ಮಾಡಲು ಪುಣ್ಯ ಕ್ಷೇತ್ರಕ್ಕೆ ಹೋಗಬೇಕಿಲ್ಲ.ನೀನಿರುವ ಜಾಗವೇ ಪುಣ್ಯಕ್ಷೇತ್ರವೆಂದು ಭಾವಿಸಿ ಪೂಜೆ ಮಾಡಿದರೆ ನಿನಗೆ ಕೋಟಿ ಪುಣ್ಯಲಭಿಸುತ್ತದೆ," ಎಂದರು."ಮಕ್ಕಳೇ ಬರೀಯ ಭಾವನೆಯಿಂದಲೇ ಪರಮಾತ್ಮನು ಒಲಿಯುತ್ತಾನೆ.ಯದ್ಭಾವಂ ತದ್ಭವತಿ,ನೀ ಏನು ಭಾವಿಸು ತೀಯಾ ಅದೇ ಆಗುತ್ತದೆ.


ಚಿತ್ರಕಥೆ
ಕಿರಾತಾರ್ಜುನೀಯಂ
ಕಥೆ:ತೆಲುಗು ಮೂಲ
ಡಾ॥ ಕೆ. ರವಿಚಂದ್ರನ್
ಅನುವಾದ
ಶ್ರೀಮತಿ
ಚಿತ್ರಗಳು
ಟಿ. ಶಿವಾಜಿ
ಅರ್ಜುನನು ತಪಸ್ಸಿನಿಂದ ಇಂದ್ರನನ್ನು ಪ್ರಸನ್ನ ಗೊಳಿಸಿದ್ದಾನೆ.
"ಇಂದ್ರ ದೇವ! ನನಗೆ ದಿವ್ಯಾಸ್ತ್ರಗಳನ್ನು ಪ್ರಸಾದಿಸು"
"ಅಮಾಯಕನೇ! ನಿನಗಿನ್ನೇಕೆ ಶಸ್ತ್ರಾಸ್ತ್ರಗಳು? ಪುಣ್ಯಲೋಕವನ್ನೇ ಪ್ರಸಾದಿಸುತ್ತೇನೆ. ಹಾಯಾಗಿ ಅನುಭವಿಸು"
ನನ್ನ ಅಣ್ಣ-ತಮ್ಮಂದಿರು ಅರಣ್ಯದಲ್ಲಿ ಪಡಬಾರದ ಕಷ್ಟ ಪಡುತ್ತಿದ್ದರೆ ನಾನೊಬ್ಬನೇ ಸುಖಿಸಬಲ್ಲೆನೇ? ನನ್ನಿಂದಾಗದು ಸತ್ತ ನಂತರವೂ ಸಹಾ ನನ್ನ ಕೀರ್ತಿಯು ಹಾಗೆಯೇ ಇರಬೇಕು ಸುಖದ ಸಲುವಾಗಿ ಅಪಕೀರ್ತಿಯ ಪಾಲಾಗಲಾರೆನು"
"ಕಂದನೇ! ನಿನ್ನ ಒಳ್ಳೆಯತನವು ಮೆಚ್ಚು ವಂಥಾದ್ದು, ನಿನ್ನ ಕೋರಿಕೆ ನೆರವೇರಬೇಕೆಂದರೆ ಮೊದಲು ನಿನಗೆ ಶಿವನ ದರ್ಶನವಾಗಬೇಕು. ಹೋಗಿ ಮೊದಲವರ ದರ್ಶನ ಪಡೆ"
ಪರಮೇಶ್ವರಾ! ಭಕ್ತವತ್ಸಲಾ! ಅರ್ಜುನನು ತೀವ್ರ ತಪಸ್ಸನ್ನು ಮಾಡುತ್ತಿದ್ದಾನೆ. ಆತನ ತಪಸ್ಸಿಗೊಲಿದು ಆತನ ಕೋರಿಕೆ ತೀರಿಸು ತಂದೆ
"ಮಹರ್ಷಿಗಳಿರಾ! ನೀವೇನು ಆತಂಕ ಪಡದಿರಿ. ನಾನು ಅರ್ಜುನನ ಕೋರಿಕೆಯನ್ನು ತೀರಿಸುವವನಾಗುತ್ತೇನೆ
ಋಷಿಗಳೆಲ್ಲರೂ ಹೊರಟು ಹೋಗುತ್ತಲೇ, ಶಿವನು ಕಿರಾತಕನ ವೇಷವನ್ನು ಧರಿಸಿದ್ದಾನೆ. ಪಾರ್ವತಿದೇವಿಯು ಸಹಾ ತಕ್ಕಂತೆ ವೇಷ ಧರಿಸಿದ್ದಾಳೆ. ಇಬ್ಬರೂ ಅರ್ಜುನನು ತಪಸ್ಸುಗೈಯುತ್ತಿರುವ ಸ್ಥಳದಲ್ಲಿ ವಿಹಾರಿಸಲಾರಂಭಿಸಿದ್ದಾರೆ.
ಮೂಕನೆಂಬ ರಾಕ್ಷಸನು ಹಂದಿಯ ರೂಪದಲ್ಲಿ ಅರ್ಜುನನ ಮೇಲೆ ಸಾಯಿಸಲು ಎರಗಿದ್ದಾನೆ. ತಪಸ್ಸು ಮಾಡುತ್ತಿರುವ ಅರ್ಜುನನು ಬಿಲ್ಲು - ಬಾಣಗಳನ್ನು ಹಿಡಿದು ಆ ಹಂದಿಯನ್ನು ಸಾಯಿಸ ಹೊರಟ್ಟಿದ್ದಾನೆ.
"ಓಯ್! ಆ ಹಂದಿಯನ್ನು ನಾನು ಹೊಡೆಯುತ್ತೇನೆ. ನೀ ಹೊಡೆಯಬೇಡ"
"ನಿನ್ನ ಮಾತನ್ನು ನಾನೇಕೆ ಕೇಳಬೇಕು"
ಕಿರಾತಕ ಮತ್ತು ಅರ್ಜುನರಿಬ್ಬರೂ ಆ ಹಂದಿಯನ್ನು ಹೊಡೆದಿದ್ದಾರೆ.
ಇಬ್ಬರ ಬಾಣದಿಂದ ಗಾಯಗೊಂಡ ಆ ರಾಕ್ಷಸನು ನಿಜರೂಪ ತಳೆದು ಸಾವನ್ನಪ್ಪಿದ್ದಾನೆ.



“ಯಾರು ನೀನು? ಈ ನಿರ್ಜನ ಅರಣ್ಯದಲ್ಲಿ ಸ್ತ್ರೀಯನ್ನು ಕರೆದುಕೊಂಡು ಏಕೆ ಅಲೆಯುತ್ತಿರುವೆ? ಈ ರಾಕ್ಷಸನನ್ನು ನಾನು ಹೊಡೆಯುತ್ತಿದ್ದರೆ ನೀನೇಕೆ ನನ್ನ ಸಮಾನವಾಗಿ ಏಕೆ ಬಾಣವನ್ನು ಪ್ರಯೋಗಿಸಿದೆ? ಇದು ಬೇಟೆಗಾರನ ಧರ್ಮವಲ್ಲ
“ನಿರ್ಜನಾರಣ್ಯದಲ್ಲಿ ನೀನೇಕೆ ಕುಳಿತಿರುವೆ? ನೀನು ನೋಡಲು ನಾಗರೀಕನಂತೆಯೂ, ಸುಕುಮಾರನಂತೆಯೂ ಕಾಣುತ್ತಿರುವೆ. ಇನ್ನು ಈ ಹಂದಿಯ ಮಾತಿಗೆ ಬಂದರೆ... ಇದನ್ನು ಮೊದಲು ಹೊಡೆದವನು ನಾನು. ನಾನು ಹೊಡೆದ ಹಂದಿಯನ್ನೇ ನೀನು ಹೊಡೆದಿರುವೆ. ಬಲವಿರುವುದರೆಂಬ ಅಹಂಕಾರದಿಂದ ನನ್ನನ್ನು ತಪ್ಪಾಗಿ ತೋರುತ್ತಿರುವೆ. ಅಷ್ಟು ಬಲವಂತನಾಗಿದ್ದರೆ ನನ್ನೊಡನೆ ಯುದ್ಧಕ್ಕೆ ಬಾ”
“ಹಾಗಾದರೇ ಕಾದುಕೋ”
ಇದೆಂಥಹ ಬಾಣಗಳು ಇದಕ್ಕಿಂತ ಒಳ್ಳೆಯ ಬಾಣಗಳಿಲ್ಲವೇ? ಇದಕ್ಕಿಂತ ಚೆನ್ನಾಗಿ ಯುದ್ಧ ಮಾಡಲಾರದೇ?
“ಅಮೋಘವಾದ ನನ್ನ ಅಸ್ತ್ರಗಳನ್ನು ಲೆಕ್ಕಿಸದೆ ಈ ಕಿರಾತಕನು ಸಾಮಾನ್ಯವಾದವನಲ್ಲ. ಮಾಯಾವೇಷದಲ್ಲಿರುವ ಮಹನೀಯನೇ ಆಗಿರುತ್ತಾನೆ.
ಅಗ್ನಿ ದೇವನು ಪ್ರಸಾದಿಸಿದ ಬಾಣಗಳು ಖಾಳಿ ಆದವು. ಗಾಂಢೀವ ಮಾಯವಾಯಿತು. ಅರ್ಜುನನು ಈಗ ನೀರಾಯುಧನು.
ಅರ್ಜುನನು ಕಿರಾತಕನ ಮೇಲೆರಗಿ ಮುಷ್ಟಿಯಿಂದ ಬಡಿಯತೊಡಗಿದ್ದಾನೆ. ಕಿರಾತಕನೂ ಸಹಾ ಅರ್ಜುನನ್ನು ಮುಷ್ಠಿಯಿಂದ ಒಡೆದಿದ್ದಾನೆ. ಕಿರಾತಕನ ಹೊಡತಕ್ಕೆ ಅರ್ಜುನನು ಮೂರ್ಚೆಗೊಂಡಿದ್ದಾನೆ.
ಅರ್ಜುನನು ಎಚ್ಚರಗೊಳ್ಳುತ್ತಲೇ ಸ್ನಾನ ಮಾಡಿ ಮೃತಿಕೆಯಿಂದ ಮಾಡಿದ ಶಿವಲಿಂಗದ ಮೇಲೆ ಹೂಮಾಲೆ ಹಾಕಿ, ಸ್ವಲ್ಪ ಹೊತ್ತು ಧ್ಯಾನ ಮಾಡಿ ಮೇಲೆದ್ದು ನೋಡುತ್ತಲೇ ಲಿಂಗದ ಮೇಲೆ ತಾನಿರಿಸಿದ ಹೂಮಾಲೆ ಕಿರಾತಕನ ಶಿರದ ಮೇಲೆ ಕಂಡು ಬಂದಿದೆ.
ತಂದೇ! ನನ್ನನ್ನು ಅನುಗ್ರಹಿಸಲು ಈ ರೂಪದಲ್ಲಿ ಬಂದೆಯಾ? ಧನ್ಯೋಸ್ಮಿ
“ಅರ್ಜುನ ನಿನ್ನಂಥ ಶೂರನು ಮೂರು ಲೋಕದಲ್ಲೆಲ್ಲೂ ಇಲ್ಲ ನಿನ್ನ ಭಕ್ತಿಗೆ ಮೆಚ್ಚಿದೆ. ನನ್ನ ದಿವ್ಯಾಸ್ತ್ರವನ್ನು ನಿನಗೀಯುತ್ತೇನೆ. ಅದರ ಮಹಿಮೆಯಿಂದ ನೀನು ಶತ್ರುಗಳನ್ನು ಜಯಿಸುವೆ”
ಧನ್ಯನಾದೆನು ದೇವದೇವಾ! ದೀನರನ್ನು ರಕ್ಷಿಸುವೆ ನಿನ್ನ ದಿವ್ಯ ಸ್ವರೂಪನಾದ ನಿನ್ನನ್ನು ದರ್ಶಿಸಿದ ನನ್ನ ಭಾಗ್ಯವೇ ಭಾಗ್ಯ. ನನ್ನ ತಪಸ್ಸು ಪೂಜೆಯಲ್ಲವೂ ಫಲಿಸಿತು.
ಶುಭಮಸ್ತು ಅರ್ಜುನ!
ಮುಂಬರುವ ಸಂಚಿಕೆಯಲ್ಲಿ ಮತ್ತೊಂದು ದಿವ್ಯಲೀಲೆಯನ್ನು ದರ್ಶಿಸೋಣ...
ಸ್ವಸ್ತಿ

# ಕ್ವಿಜ್

**ರಸಪ್ರಶ್ನೆಗಳು :**

**1.ಶಿವನು ಅರ್ಜುನನಿಗೆ ನೀಡಿದ ಶಸ್ತ್ರದ ಹೆಸರೇನು?**

1. ತ್ರಿಶೂಲ 2 ಢಮರುಗ
3. ಪಾಶುಪತಾಸ್ತ್ರ 4. ಕೋದಂಡ

**2.ಶಿವನ ಪತ್ನಿಯನ್ನು ಹೀಗೂ ಕರೆಯುತ್ತೇವೆ ?**

1. ಪಾರ್ವತಿ 2. ಶಿವ
3. ಮಹಾದೇವಿ 4. ಸತೀದೇವಿ

**3. ಶಿವನನ್ನು ಈ ಹೆಸರಿನಿಂದಲೂ ಕರೆಯುತ್ತೇವೆ.**

1. ಸಪ್ತಗಿರೀಶ 2. ಚಂದ್ರಮೌಳಿ
3. ಬ್ರಹ್ಮ 4. ಸ್ಥಿತಿ ಕರ್ತ

**4. ಶಿವನ ವಾಸಸ್ಥಾನ ಯಾವುದು?**

1.ಕೈಲಾಸಗಿರಿ 2. ವೇಂಕಟಗಿರಿ
3. ಸಪ್ತಗಿರಿ 4. ಶೇಷಗಿರಿ

**5. ಶಿವನ ವಾಹನ ಯಾವುದು?**

1. ನಂದಿ 2. ಗರುಡ
3. ನವಿಲು 4. ಮೂಷಿಕ

**6. ಶಿವನ ಪುತ್ರರು ಯಾರು ?**

1.ನಂದಿ ಮತ್ತು ಭೃಂಗಿ 2. ಗಣೇಶ ಮತ್ತು ಸುಬ್ರಹ್ಮಣ್ಯ
3.ಪ್ರದ್ಯುಮ್ನ ಮತ್ತು ಅನಿರುದ್ಧ 4.ಯಮ ಮತ್ತು ಶನಿ


**7. ಭಾರತದಲ್ಲಿ ಶಿವನು ಸ್ವಯಂಭುವಾಗಿ ನೆಲೆಸಿರುವ ಜ್ಯೋತಿರ್ಲಿಂಗಗಳ ಸಂಖ್ಯೆ ಎಷ್ಟು?**

1. ಹತ್ತು 2. ಹನ್ನೆರಡು
3. ಹನ್ನೊಂದು 4. ಒಂಭತ್ತು

**ಉತ್ತರಗಳು:**
1)3 2)4 3)2 4)1 5)1 6)2 7)2

# ಚಿತ್ರಲೇಖನ

**ಈ ಚಿತ್ರಕ್ಕೆ ಬಣ್ಣವನ್ನು ತುಂಬಿರಿ.......**



**ಈ ಪಕ್ಕದಲ್ಲಿರುವ ಚಿತ್ರವನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju,** M.A.,Special Officer (Press & Publications ), T.T.D. Press, Tirupati - 517 507.

## ಒಂಟಿಮಿಟ್ಟ

# ಶ್ರೀ ಕೋದಂಡರಾಮ ಸ್ವಾಮಿಯವರ ಬ್ರಹ್ಮೋತ್ಸವಗಳು

## 21-04-2021 ರಿಂದ 29-04-2021 ರ ವರೆಗೆ



**21-04-2021 ಬುಧವಾರ**
ಹಗಲು : ಧ್ವಜಾರೋಹಣ
ರಾತ್ರಿ : ಶೇಷವಾಹನ

**22-04-2021 ಗುರುವಾರ**
ಹಗಲು : ವೇಣುಗಾನಾಲಂಕಾರ
ರಾತ್ರಿ : ಹಂಸವಾಹನ

**23-04-2021 ಶುಕ್ರವಾರ**
ಹಗಲು : ವಟಪತ್ರಶಾಯಿ ಅಲಂಕಾರ
ರಾತ್ರಿ :ಸಿಂಹವಾಹನ

**24-04-2021 ಶನಿವಾರ**
ಹಗಲು : ನವನೀತಕೃಷ್ಣಾಲಂಕಾರ
ರಾತ್ರಿ :ಹನುಮತ್ಸೇವೆ

**25-04-2021 ಭಾನುವಾರ**
ಹಗಲು : ಮೋಹಿನಿಸೇವೆ
ರಾತ್ರಿ : ಗರುಡಸೇವೆ

**26-04-2021 ಸೋಮವಾರ**
ಹಗಲು : ಶಿವಧನುರ್ಭಾಣಾಲಂಕಾರ
ರಾತ್ರಿ : ಎದುರ್ಕೋಲು, ಕಲ್ಯಾಣೋತ್ಸವ, ಗಜವಾಹನ

**27-04-2021 ಮಂಗಳವಾರ**
ಹಗಲು : ರಥೋತ್ಸವ

**28-04-2021 ಬುಧವಾರ**
ಹಗಲು : ಕಾಳೀಯಮರ್ಧನಾಲಂಕಾರ
ರಾತ್ರಿ : ಅಶ್ವವಾಹನ

**29-04-2021 ಗುರುವಾರ**
ಹಗಲು : ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ

# ತಿರುಪತಿ
# ಶ್ರೀ ಕಪಿಲೇಶ್ವರ ಸ್ವಾಮಿಯವರ ಬ್ರಹ್ಮೋತ್ಸವಗಳು

2021 ಮಾರ್ಚ್ 04 ರಿಂದ 13 ರ ವರೆಗೆ

